ಸಂಪುಟ: 04 ಸಂಚಿಕೆ: 328 ಪುಟಗಳು: 08 ಭಾನುವಾರ 09 ಫೆಬ್ರವರಿ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833 ₹5

ಮುಂಜಾನೆ ಮಾತು

ಯಾವುದೇ ಒಳ್ಳೆಯ ಕಾರ್ಯವಾಗಲಿ ಪ್ರಯತ್ನ ಎಂಬುದು ಅಧಿಕವಾದರೆ ಹಣೆಬರಹವೂ ಕೂಡ ಶಿರಬಾಗುತ್ತದೆ, ಇದು ನಿಶ್ಚಿತ.

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಕೋವಿಡ್ ಲಸಿಕೆಯಿಂದ ಹೃದಯಾಘಾತ?

• ಉದಯವಾಹಿನಿ, ಬೆಂಗಳೂರು

ಕೋವಿಡ್ ಲಸಿಕೆಯಿಂದ ಹೃದಯಾಘಾತ ಹೆಚ್ಚಳವಾಗುತ್ತಿದೆ ಎಂಬ ಆರೋಪಗಳು ಕೇಳಿಬಂದ ಹಿನ್ನೆಲೆ ಅಧ್ಯಯನಕ್ಕೆ ತಜ್ಞರ ಸಮಿತಿ ರಚಿಸಲು ಸಿಎಂ ಸಿದ್ದರಾಮಯ್ಯ ಆದೇಶ ಹೊರಡಿಸಿದ್ದಾರೆ.

ಕೊವಿಡ್ ಅಥವಾ ಕೊವಿಡ್ ಲಸಿಕೆಯ ಅಡ್ಡಪರಿಣಾಮದಿಂದ ಹಠಾತ್ ಸಾವಿಗೀಡಾದವರ ಬಗ್ಗೆ ಅಧ್ಯಯನ ನಡೆಸಿ, ಮುಂದೆ ಇಂತಹ ಸಾವುಗಳು ಸಂಭವಿಸದಂತೆ ತಡೆಯುವ ಉದ್ದೇಶದಿಂದ ಸಮರ್ಪಕ ಸಂಶೋಧನೆ ನಡೆಸಲು ತಜ್ಞರು ಹಾಗೂ ವಿಜ್ಞಾನಿಗಳನ್ನು ಒಳಗೊಂಡ ಒಂದು ಸಮಿತಿ ರಚನೆಗೆ ನಿರ್ಧರಿಸಲಾಗಿದೆ.

ಕೊರೊನಾ ಕಾಲದ ನಂತರದಿಂದ ಎಳೆಯ ವಯಸಿನವರು, ಯುವಜನರು ಸೇರಿದಂತೆ ಬದುಕಿ ಬಾಳಬೇಕಾದವರು ಇದ್ದಕ್ಕಿದ್ದಂತೆ ಇಲ್ಲವಾಗುತ್ತಿದ್ದಾರೆ, ಇವರನ್ನು ನಂಬಿದ ಕುಟುಂಬಗಳು ಬೀದಿ ಪಾಲಾಗುತ್ತಿವೆ. ಇದೊಂದು ಗಂಭೀರ ಸಮಸ್ಯೆ, ಆದಷ್ಟು ಶೀಘ್ರ ಈ ಸಮಸ್ಯೆಯ ಮೂಲ ಪತ್ತೆಮಾಡಿ, ಪರಿಹರಿಸಬೇಕು ಎನ್ನುವುದು ನನ್ನ ಯೋಚನೆಯೂ ಆಗಿತ್ತು.

ಇಂತಹ ಸಂದರ್ಭದಲ್ಲಿ ಈ ಸಮಸ್ಯೆಯ ಬಗ್ಗೆ ಗಮನ ಸೆಳೆದು ಹಿರಿಯ ಪತ್ರಕರ್ತರಾದ ರಾಜಾರಾಂ ತಲ್ಲೂರು ಅವರು ಬರೆದ ಪತ್ರ ನನ್ನ ಯೋಚನೆಯನ್ನು ಕಾರ್ಯರೂಪಕ್ಕೆ ತರಲು ಪ್ರೇರಣೆಯಾಯಿತು. ಅವರಿಗೆ ಕೃತಜ್ಞತೆಗಳು, ತಜ್ಞರು ಹಾಗೂ ವಿಜ್ಞಾನಿಗಳ ಸಮಿತಿ ನೀಡುವ ವರದಿಯನ್ನು ಆಧರಿಸಿ ಕ್ರಮಗಳನ್ನು ಕೈಗೊಳ್ಳಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಅಧ್ಯಯನಕ್ಕೆ ತಜ್ಞರ ಸಮಿತಿ ರಚಿಸಲು ಸಿಎಂ ಸಿದ್ದರಾಮಯ್ಯ ಆದೇಶ.!

ದಿಲ್ಲಿ ದರ್ಬಾರ್ ಬಿಜೆಪಿ ಸರ್ದಾರ್

ಬಿಜೆಪಿಗೆ ದಿಲ್ಲಿ ಗದ್ದುಗೆ

ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಈವರೆಗೆ 36 ಕ್ಷೇತ್ರಗಳಲ್ಲಿ ಜಯಿಸಿ, 10 ಕ್ಷೇತ್ರಗಳಲ್ಲಿ ಮುನ್ನಡೆ ಕಾಯ್ದುಕೊಂಡಿದೆ. ಈ ಮೂಲಕ ಬಹುಮತ ಸಾಧಿಸಿ 27 ವರ್ಷಗಳ ಬಳಿಕ ಕೇಸರಿ ಪಡೆ ದಿಲ್ಲಿ ಗದ್ದುಗೆ ಹಿಡಿಯುತ್ತಿದೆ. ಇನ್ನು ಆಡಳಿತಾರೂಢ ಆಪ್‌ಗೆ ಭಾರೀ ಹಿನ್ನಡೆಯಾಗಿದ್ದು, ಈವರೆಗೆ 19 ಕ್ಷೇತ್ರಗಳಲ್ಲಿ ಗೆದ್ದಿದ್ದು, 4ರಲ್ಲಿ ಮುನ್ನಡೆಯಲ್ಲಿದೆ.

ಬಿಜೆಪಿ ಅಭ್ಯರ್ಥಿ ಪರ್ವೇಶ್ ವರ್ಮಾ ವಿರುದ್ಧ ಸೋತ ಕೇಜ್ರಿವಾಲ್

ಕಲ್ಕಾಜಿ ಕ್ಷೇತ್ರದಲ್ಲಿ ಹಾಲಿ ಸಿಎಂ ಅತಿಶಿ ಸಿಂಗ್‌ಗೆ ಗೆಲುವು

■ ಬಿಜೆಪಿಗೆ ಬಹುಮತ, ಆಡ್ಮಿಗೆ ಮರ್ಮಾಘಾತ, ಕೈ ಮುರಿತ ■ ಅತಿಶಿ ಸಿಂಗ್ ಜಯಭೇರಿ ■ ಕೇಜ್ರಿವಾಲ್‌ಗೆ ಸೋಲು ■ ಬಿಜೆಪಿಗೆ ದಿಲ್ಲಿ ಗದ್ದುಗೆ, ಆಪ್‌ಗೆ ಹಿನ್ನಡೆ ■ ಕಾಂಗ್ರೆಸ್ ಶೂನ್ಯ ಸಾಧನೆ



ಬಿಜೆಪಿ	48
ಆಪ್	22
ಕಾಂಗ್ರೆಸ್	00
ಇತರೆ	00

• ಉದಯವಾಹಿನಿ, ನವದೆಹಲಿ

ದೆಹಲಿಯಲ್ಲಿ ಆಮ್‌ಆದ್ಮಿ ಪಕ್ಷದ ಆಡಳಿತ ಕೊನೆಗೊಂಡು ಬಿಜೆಪಿ ದರ್ಬಾರ್ ಆರಂಭಗೊಂಡಿದೆ. ದೆಹಲಿಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯಗಳಿಸಿದ್ದು, 27 ವರ್ಷಗಳ ನಂತರ ದೆಹಲಿಯ ಗದ್ದುಗೆ ಏರಿದೆ. ಮೂರನೇ ಬಾರಿಗೆ ಅಧಿಕಾರ ಹಿಡಿಯುವ ಆಮ್‌ಆದ್ಮಿ ಪಕ್ಷದ ಕನಸು ನುಚ್ಚು ನೂರಾಗಿದ್ದರೆ, ಈ ಚುನಾವಣೆಯಲ್ಲಿ ಕಾಂಗ್ರೆಸ್ ಒಂದು ಕ್ಷೇತ್ರವನ್ನು ಗೆಲ್ಲಲಾಗದೆ ಹೀನಾಯ ಸೋಲು ಅನುಭವಿಸಿ, ತೀವ್ರ ಮುಖಭಂಗಕ್ಕೆ ಒಳಗಾಗಿದೆ. ದಿಲ್ಲಿ ವಿಧಾನಸಭೆ ಫಲಿತಾಂಶ ನೋಡುತ್ತಿದ್ದರೆ, ಕಾಂಗ್ರೆಸ್ ಮತ್ತು ಎಎಪಿ ನಡುವಿನ ಕಚ್ಚಾಟದ ಲಾಭ ಪೂರ್ತಿಯಾಗಿ ಬಿಜೆಪಿ ಪಾಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ದಿಲ್ಲಿಯಲ್ಲಿ ಕಾಂಗ್ರೆಸ್ ಸತತ ನಾಲ್ಕನೇ ಹೀನಾಯ ಸೋಲನ್ನು ಕಂಡಂತಾಗಿದೆ. ಸತತ ಮೂರನೇ ಬಾರಿಗೆ ಶೂನ್ಯ ಸಂಪಾದನೆ ಮಾಡಿದೆ.

15 ವರ್ಷಗಳ ಕಾಲ ದಿಲ್ಲಿಯನ್ನು ಆಳಿದ್ದ ಕಾಂಗ್ರೆಸ್, 2013ರ ವಿಧಾನಸಭಾ ಚುನಾವಣೆಯಲ್ಲಿ ಕೇವಲ 8 ಸ್ಥಾನಗಳನ್ನು ಪಡೆದಿತ್ತು. 28 ಕ್ಷೇತ್ರಗಳಲ್ಲಿ ಗೆದ್ದಿದ್ದ ಎಎಪಿಗೆ ಬೆಂಬಲ ನೀಡಿತ್ತು. ಆದರೆ ಕೆಲವೇ ದಿನಗಳಲ್ಲಿ ಮೈತ್ರಿ ಮುರಿದಿತ್ತು. 31 ಕ್ಷೇತ್ರಗಳಲ್ಲಿ ಗೆದ್ದಿದ್ದ ಬಿಜೆಪಿ ಅಧಿಕಾರದಿಂದ ದೂರ ಉಳಿದಿತ್ತು. 2015ರ ವಿಧಾನಸಭೆ ಚುನಾವಣೆಯಲ್ಲಿ ಎಎಪಿ 67 ಸ್ಥಾನಗಳನ್ನು ಗೆದ್ದು ಹೊಸ ದಾಖಲೆ ಬರೆದಿತ್ತು. ಬಿಜೆಪಿ 3 ಸ್ಥಾನಗಳನ್ನು ಪಡೆದಿತ್ತು. ಕಾಂಗ್ರೆಸ್ ಶೂನ್ಯ ಸಂಪಾದನೆ ಮಾಡಿತ್ತು. 2020ರ ಚುನಾವಣೆಯಲ್ಲಿ ಎಎಪಿ 62 ಸ್ಥಾನಗಳನ್ನು ಗೆದ್ದು ಎರಡನೇ ಬಾರಿಗೆ ಅಧಿಕಾರ ಹಿಡಿದಿತ್ತು. ಬಿಜೆಪಿ 8 ಸ್ಥಾನಗಳನ್ನು ಗೆದ್ದಿತ್ತು.

ಕಾಂಗ್ರೆಸ್ ಮತ್ತೆ ಶೂನ್ಯ ಸಂಪಾದನೆ ಮಾಡಿತ್ತು. ಈಗ 2025ರ ಚುನಾವಣೆಯಲ್ಲೂ ಕಾಂಗ್ರೆಸ್ ಶೂನ್ಯ ಸಂಪಾದನೆ ಮಾಡಿದಂತಾಗಿದೆ.ಎಎಪಿ ಅಧಿಕಾರ ಕಳೆದುಕೊಂಡಿದೆ. ಬಿಜೆಪಿ ಅಧಿಕಾರ ಹಿಡಿಯುತ್ತಿದೆ. 27 ವರ್ಷಗಳ ನಂತರ ಬಿಜೆಪಿ ದಿಲ್ಲಿಯಲ್ಲಿ ಸರ್ಕಾರ ರಚಿಸಲು ಸಜ್ಜಾಗಿದೆ. ಮಧ್ಯಮ ವರ್ಗದವರಿಗೆ ನೀಡಿದ್ದ ಬಜೆಟ್ ಪರಿಹಾರ, 12 ಲಕ್ಷ ರೂ.ಗಳವರೆಗಿನ ಆದಾಯವನ್ನು ತೆರಿಗೆ ಮುಕ್ತಗೊಳಿಸಿರುವುದು ಇವೆಲ್ಲವೂ ಬಿಜೆಪಿಗೆ ಲಾಭ ತಂದಿರುವಂತೆ ಕಾಣಿಸುತ್ತದೆ. ಜೊತೆಗೆ ವಾಯು ಮತ್ತು ಜಲ ಮಾಲಿನ್ಯ ಮತ್ತು ಮೂಲಸೌಕರ್ಯ ಅಭಿವೃದ್ಧಿಯಂತಹ ವಿಷಯಗಳ ಕುರಿತು ಎಎಪಿ ನಿಷ್ಕ್ರಿಯತೆ ಬಗ್ಗೆ ಜನರ ಅಸಮಾಧಾನವೂ ಬಿಜೆಪಿಗೆ ಲಾಭದಾಯಕವಾದಂತಿದೆ.

1. ದೆಹಲಿ ಜನರಿಗೆ ತಲೆಬಾಗಿ ಕೃತಜ್ಞತೆ ಸಲ್ಲಿಸಿದ ಮೋದಿ
2. ದೆಹಲಿಯಲ್ಲಿ ಡಬಲ್ ಎಂಜಿನ್ ಸರ್ಕಾರದಿಂದ ಡಬಲ್ ವೇಗದ ಅಭಿವೃದ್ಧಿ
3. ಗೆಲುವಿನ ಬಳಿಕ ಪ್ರಧಾನಿ ಮೋದಿ ಭರವಸೆ
4. ದೆಹಲಿ ನಮಗೆ ಮುಕ್ತ ಹೃದಯದ ಪ್ರೀತಿಯನ್ನ ನೀಡಿದೆ.

ಮತದಾರರಿಗೆ ಬಿಜೆಪಿ ಭರವಸೆ

ಪಕ್ಷವು ಗೆದ್ದರೆ ಉಚಿತ ವಿದ್ಯುತ್ ಮತ್ತು ಉಚಿತ ಬಸ್ ಪ್ರಯಾಣದಂತಹ ಯೋಜನೆಗಳನ್ನು ನಿಲ್ಲಿಸುವುದಿಲ್ಲ ಎಂದು ದಿಲ್ಲಿ ಮತದಾರರಿಗೆ ಬಿಜೆಪಿ ಭರವಸೆ ನೀಡಿತ್ತು. ಎಎಪಿಯ ಮತ್ತೊಂದು ಮತದಾರರ ನೆಲೆ ಪೂರ್ವಾಂಚಲಿ ಸಮುದಾಯ ಕೂಡ ಈ ಸಲ ಬಿಜೆಪಿಕಡೆ ಹೋಗಿರುವಂತಿದೆ. ಅವರು ನಗರದ ಮತದಾರರಲ್ಲಿ ಸುಮಾರು ಶೇ.30 ರಷ್ಟಿದ್ದಾರೆ. ಒಟ್ಟಾರೆಯಾಗಿ ಇವೆಲ್ಲವೂ ಎಎಪಿ ಪಾಲಿಗೆ ಕರಾಳವಾದವು.ಬಹುಶಃ ಇದನ್ನು ಮೊದಲೇ ಗ್ರಹಿಸಿದ್ದ ಕೇಜ್ರಿವಾಲ್, ಪೂರ್ವಾಂಚಲಿ ಭಾವನೆಗಳನ್ನು ಪ್ರಚೋದಿಸಲು ಬಿಜೆಪಿ ನೇತೃತ್ವದ ಹರಿಯಾಣ ಸರ್ಕಾರ ಯಮುನಾ ನದಿಯನ್ನು ವಿಷಕಾರಿಯಾಗಿಸುತ್ತಿದೆ ಎಂದು ಆರೋಪಿಸಿದ್ದರು. ಪೂರ್ವಾಂಚಲಿ ಸಮುದಾಯದಲ್ಲಿ ಯಮುನಾ ನದಿಯನ್ನು ಬಹಳ ಪೂಜಿಸಲಾಗುತ್ತದೆ. ಯಮುನೆಯನ್ನು ಸ್ವಚ್ಛಗೊಳಿಸುವ ತನ್ನ ಬದ್ಧತೆಯಲ್ಲಿ ವಿಫಲವಾಗಿದ್ದನ್ನು ಎಎಪಿ ಒಪ್ಪಿಕೊಂಡಿತ್ತು.

ದೆಹಲಿಯಲ್ಲಿ ಭಾರಿ ಗೆಲುವಿನ ನಂತರ, ಪ್ರಧಾನಿ ಮೋದಿ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ತಮ್ಮ ಭಾಷಣವನ್ನ ಯಮುನಾ ಮೈಯಾ ಪಠಣದೊಂದಿಗೆ ಪ್ರಾರಂಭಿಸಿದರು. 21ನೇ ಶತಮಾನದಲ್ಲಿ ಬಿಜೆಪಿಗೆ ಸೇವೆ ಸಲ್ಲಿಸಲು ಅವಕಾಶ ನೀಡುವಂತೆ ನಾನು ದೆಹಲಿಗೆ ಮನವಿ ಮಾಡಿದ್ದೇನೆ ಎಂದು ಅವರು ಹೇಳಿದರು. ದೆಹಲಿಯನ್ನ ಅಭಿವೃದ್ಧಿ ಹೊಂದಿದ ಭಾರತದ ಅಭಿವೃದ್ಧಿ ಹೊಂದಿದ ರಾಜಧಾನಿಯನ್ನಾಗಿ ಮಾಡಲು ಬಿಜೆಪಿಗೆ ಒಂದು ಅವಕಾಶ ನೀಡಿ. ಮೋದಿಯವರ ಭರವಸೆಯನ್ನ ನಂಬಿದ್ದಕ್ಕಾಗಿ ದೆಹಲಿ ಜನರಿಗೆ ನಾನು ತಲೆಬಾಗಿ ಕೃತಜ್ಞತೆ ಸಲ್ಲಿಸುತ್ತೇನೆ. ದೆಹಲಿ ನಮಗೆ ಮುಕ್ತ ಹೃದಯದ ಪ್ರೀತಿಯನ್ನ ನೀಡಿತು ಎಂದರು. ಮಾಸ್ಟರ್ಸ್ ಎಂದು ಹೆಮ್ಮೆಪಡುತ್ತಿದ್ದವರು ವಾಸ್ತವವನ್ನ ಎದುರಿಸಿದ್ದಾರೆ. ದೆಹಲಿ ಜನರ ಪ್ರೀತಿ ಮತ್ತು ವಿಶ್ವಾಸ ನಮ್ಮೆಲ್ಲರ ಋಣವಾಗಿದೆ ಎಂದು ಪ್ರಧಾನಿ ಮೋದಿ ಹೇಳಿದರು. ದೆಹಲಿಯ ಡಬಲ್ ಎಂಜಿನ್ ಸರ್ಕಾರವು ದೆಹಲಿಯ ತ್ವರಿತ ಅಭಿವೃದ್ಧಿಯನ್ನ ಪ್ರದರ್ಶಿಸುತ್ತದೆ. ಈ ಗೆಲುವು ಐತಿಹಾಸಿಕ ದೆಹಲಿಯ ಜನರು ಎಎಪಿ ಪಕ್ಷವನ್ನ ಹೊರಹಾಕಿದರು. ದೆಹಲಿಯ ಜನಾದೇಶ ಬಂದಿದೆ. ಇಂದು ಅಹಂಕಾರ ಮತ್ತು ಅರಾಜಕತೆ ಸೋಲಿಸಲ್ಪಟ್ಟಿದೆ.

ಗ್ಯಾರಂಟಿಗಳಿಂದ ವಿಕಸಿತ ಭಾರತ

ಎಎಪಿ ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮದ ಭರವಸೆ

ಬಿಜೆಪಿ ಉತ್ತರ ಪ್ರದೇಶ ಮತ್ತು ಬಿಹಾರದಿಂದ ಹೆಚ್ಚಿನ ಸಂಖ್ಯೆಯ ನಕಲಿ ಮತದಾರರನ್ನು ನೋಂದಾಯಿಸುವ ಮೂಲಕ ಮತದಾರರ ಪಟ್ಟಿಯನ್ನು ತಿದ್ದಿದೆ ಎಂಬ ಅರವಿಂದ್ ಕೇಜ್ರಿವಾಲ್ ಅವರ ಆರೋಪ ಇನ್ನೊಂದೆಡೆ ಇದೆ. ಮೋದಿ ನೇತೃತ್ವದ ಬಿಜೆಪಿಯ ಪ್ರಚಾರ ಒಂದು ಸಂದೇಶದ ಮೇಲೆ ಸಾಗಿತ್ತು. ಅದೆಂದರೆ, ಎಎಪಿ ಯೋಜನೆಗಳ ಮುಂದುವರಿಕೆ ಮತ್ತು ಎಎಪಿ ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮದ ಭರವಸೆ. ಎಎಪಿ ಹಿರಿಯ ನಾಯಕರೆಲ್ಲ ದೀರ್ಘ ಕಾಲದವರೆಗೆ ಜೈಲಿನಲ್ಲಿ ಕಳೆದ ಕಾರಣ ಆಡಳಿತ ವಿರೋಧಿ ಅಲೆಯೂ ಇತ್ತು. ಅಲ್ಲದೆ, ಆಂತರಿಕ ಅವ್ಯವಸ್ಥೆಯೂ ಎಎಪಿಯನ್ನು ಕಾಡಿತ್ತು.

25 ಸ್ಥಾನಗಳಲ್ಲಿ ಬಿಜೆಪಿ ಮುನ್ನಡೆ

ಪಶ್ಚಿಮ ದಿಲ್ಲಿ, ಪೂರ್ವ ದಿಲ್ಲಿ ದಕ್ಷಿಣ ದಿಲ್ಲಿ, ಮಧ್ಯದಿಲ್ಲಿ ಮತ್ತು ನವದಿಲ್ಲಿಯಾದ್ಯಂತ ಮಧ್ಯಮ ವರ್ಗದ ಪ್ರಾಬಲ್ಯದ ಹೆಚ್ಚಿನ ಸ್ಥಾನಗಳಲ್ಲಿ ಹಾಗೂ ಪೂರ್ವ ಉತ್ತರ ಪ್ರದೇಶ ಮತ್ತು ಬಿಹಾರದ ಜನರು ಪೂರ್ವಾಂಚಲಿ ಮತದಾರರು ನಿರ್ಣಾಯಕ ಪಾತ್ರ ವಹಿಸುವ 25 ಸ್ಥಾನಗಳಲ್ಲಿ ಬಿಜೆಪಿ ಮುನ್ನಡೆ ಸಾಧಿಸಿದ್ದೇ ಇಡೀ ಫಲಿತಾಂಶ ಬದಲಾಗಲು ಕಾರಣ. ಅನಧಿಕೃತ ವಸಾಹತುಗಳಿಂದ ಕೂಡಿದ ಟ್ರಾನ್ಸ್ ಯಮುನಾ ಪ್ರದೇಶದ 20 ಸ್ಥಾನಗಳಲ್ಲಿ, ಬಿಜೆಪಿ 12 ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗಮನಾರ್ಹ ಮುನ್ನಡೆ ಸಾಧಿಸಿದೆ, ಎಎಪಿ 8 ಸ್ಥಾನಗಳಲ್ಲಿ ಮುಂದಿದೆ. 2015 ಮತ್ತು 2020ರ ಚುನಾವಣೆಗಳಲ್ಲಿ ಕ್ರಮವಾಗಿ 3 ಮತ್ತು 8 ಸ್ಥಾನಗಳನ್ನು ಮಾತ್ರ ಗೆದ್ದಿದ್ದ ಬಿಜೆಪಿ ಪಾಲಿಗೆ ಇದು ಗಮನಾರ್ಹ ತಿರುವು ನೀಡಿದ ಬೆಳವಣಿಗೆ. ಅರವಿಂದ ಕೇಜ್ರಿವಾಲ್ ಸೇರಿದಂತೆ ಎಎಪಿಯ ಘಟಾನುಘಟಿಗಳೇ ಹಿನ್ನಡೆ ಕಾಣುವಂತಾದದ್ದು ಫಲಿತಾಂಶದ ಮೇಲೆ ದೊಡ್ಡ ಪರಿಣಾಮ ಬೀರಿದೆ

ದಿಲ್ಲಿ ಚುನಾವಣೆಗೆ ಸ್ವಲ್ಪ ಮೊದಲು 8ನೇ ವೇತನ ಆಯೋಗದ ಘೋಷಣೆ ಕೂಡ ಬಿಜೆಪಿಗೆ ಮತ್ತೊಂದು ಸಕಾರಾತ್ಮಕ ಅಂಶವಾಯಿತು. ದಿಲ್ಲಿಯಲ್ಲಿ ಹೆಚ್ಚಿನ ಸಂಖ್ಯೆಯ ಸರ್ಕಾರಿ ನೌಕರರು ಮತದಾರರಾಗಿದ್ದಾರೆ. ಕಾಂಗ್ರೆಸ್ ಕೇವಲ ಶೇ.6 ಮತಗಳನ್ನು ಪಡೆಯುತ್ತದೆ. ಎಎಪಿ ತನ್ನ ಸೋಲಿಗೆ ಕಾಂಗ್ರೆಸ್ ಅನ್ನು ದೂಷಿಸುವುದು ಸರಿಯಲ್ಲ. ಎಂಸಿಡಿ ಮಾಡಿದ ಕೆಲಸ ಕೊರತೆಯಿಂದಾಗಿ ಎಎಪಿ ಸೋಲಿಗೆ ಕಾರಣವಾಗಿದೆ ಎಂಬುದನ್ನು ಕೂಡ ಒಪ್ಪಬಹುದು. ಮತ ಹಂಚಿಕೆಯ ವ್ಯತ್ಯಾಸ ಕೇವಲ ಶೇ.3 ಎಂಬುದನ್ನು ಗಮನಿಸಬೇಕು. ಕಳೆದ ಎರಡು ಚುನಾವಣೆಗಳಲ್ಲಿ ಎಎಪಿ ಭರವಸೆ ನೀಡಿದ ಉಚಿತ ಕೊಡುಗೆಗಳು ಪಕ್ಷ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದ ಮತಗಳನ್ನು ಆಕರ್ಷಿಸಲು ಸಹಾಯ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿವೆ ಎಂದು ಬಿಜೆಪಿಗೆ ಚೆನ್ನಾಗಿ ತಿಳಿದಿತ್ತು.

ಕೇಜ್ರಿವಾಲ್ ಮುಖವಾಡ ಕಳಚಿದೆ ಎಂದ ವಿಜಯೇಂದ್ರ!

• ಉದಯವಾಹಿನಿ, ಬೆಂಗಳೂರು

ದೆಹಲಿ ಚುನಾವಣಾ ಫಲಿತಾಂಶದಿಂದ ಕೇಜ್ರಿವಾಲ್ ಮುಖವಾಡ ಕಳಚಿಬಿದ್ದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಹೇಳಿದ್ದಾರೆ. ಜಗನ್ನಾಥ ಭವನದಲ್ಲಿ ಪಕ್ಷದ ಪರ ದೆಹಲಿ ವಿಧಾನಸಭಾ ಚುನಾವಣಾ ಫಲಿತಾಂಶದ ಹಿನ್ನೆಲೆಯಲ್ಲಿ ವಿಜಯೋತ್ಸವ ಆಚರಣೆಯ ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದರು. ಭ್ರಷ್ಟಾಚಾರದ ವಿರುದ್ಧ ಆಂದೋಲನ ಮಾಡಿ ದೆಹಲಿಯಲ್ಲಿ ಅಧಿಕಾರಕ್ಕೆ ಬಂದಿದ್ದ ಆಮ್ ಆದ್ಮಿ ಪಕ್ಷದ ಅರವಿಂದ ಕೇಜ್ರಿವಾಲ್ ಅವರ ಮುಖವಾಡ ಚುನಾವಣಾ ಫಲಿತಾಂಶದಿಂದ ಕಳಚಿಬಿದ್ದಿದೆ. ದೆಹಲಿಯಲ್ಲಿ 27 ವರ್ಷಗಳ ನಂತರ ಬಿಜೆಪಿಗೆ ಅಭೂತಪೂರ್ವ ಗೆಲುವು ಲಭಿಸಿದೆ. ಪ್ರಬುದ್ಧ ಮತದಾರರು ದೆಹಲಿ ಅಭಿವೃದ್ಧಿಯ ದೃಷ್ಟಿಯಿಂದ ಬಿಜೆಪಿಯನ್ನು ಗೆಲ್ಲಿಸಿದ್ದಾರೆ. ನರೇಂದ್ರ ಮೋದಿಯವರ ಕೈಯನ್ನು ಬಲಪಡಿಸಲು ಮತದಾರರು ಮತ್ತೊಮ್ಮೆ ನಮಗೆ ಆಶೀರ್ವಾದ ಮಾಡಿದ್ದಾರೆ. ಪಕ್ಷದ ಮುಖಂಡರು, ಕಾರ್ಯಕರ್ತರು ಮತದಾರರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದಿದ್ದಾರೆ. ಮನೀಷ್ ಸಿಸೋಡಿಯಾ ಅವರೂ ಸೋಲುತ್ತಿದ್ದಾರೆ. ಲಿಕ್ಕರ್, ಶೀಶ್ ಮಹಲ್ ಹಗರಣದ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಆಪ್ ಬಣ್ಣ ಬಯಲಾಗಿದೆ. ಇನ್ನೂ ದೆಹಲಿಯಲ್ಲಿ ಕಾಂಗ್ರೇಸ್ ಪಕ್ಷ ಸತತ 3ನೇ ಬಾರಿಗೆ ಶೂನ್ಯ ಸಂಪಾದನೆ ಮಾಡಿದೆ. ಲೋಕಸಭಾ ಚುನಾವಣೆಯಲ್ಲೂ ಅದು ಶೂನ್ಯ ಸಂಪಾದನೆ ಮಾಡಿತ್ತು ಹರಿಯಾಣ, ಮಹಾರಾಷ್ಟ್ರದಲ್ಲೂ ಕಾಂಗ್ರೇಸ್ಸಿಗೆ ಮುಖಭಂಗ ಆಗಿತ್ತು ಎಂದು ವ್ಯಂಗ್ಯವಾಡಿದ್ದಾರೆ.

ರಾಹುಲ್ ಗಾಂಧಿ ಇರೋವರೆಗೂ ಕಾಂಗ್ರೇಸ್ ಉದ್ಧಾರವಾಗೋಲ್ಲ

• ಉದಯವಾಹಿನಿ, ಹುಬ್ಬಳ್ಳಿ

ದಿಲ್ಲಿ ವಿಧಾನಸಭಾ ಎಲೆಕ್ಷನ್ ನಲ್ಲಿ ಕಾಂಗ್ರೇಸ್ ಸೋತು ಸುಣ್ಣವಾಗಿದೆ. ಆಪ್ ಅಧಿಕಾರಕ್ಕೇರುವ ಆಸೆಗೆ ತಣ್ಣೀರು ಬಿದ್ದಿದೆ. ಬಿಜೆಪಿ ಗೆಲುವಿನ ನಗೆ ಬೀರಿದ್ದು, ಈ ಬಗ್ಗೆ ಜಗದೀಶ್ ಶೆಟ್ಟರ್ ಪ್ರತಿಕ್ರಿಯೆ ನೀಡಿದ್ದಾರೆ. ಹುಬ್ಬಳ್ಳಿಯಲ್ಲಿ ಮಾತಾಡಿದ ಜಗದೀಶ್ ಶೆಟ್ಟರ್, ದೆಹಲಿ ಜನ ಬಿಜೆಪಿಗೆ ಆಶೀರ್ವಾದ ಮಾಡಿರುವುದು ಸ್ಪಷ್ಟವಾಗಿದೆ ಎಂದು ಹೇಳಿದ್ದಾರೆ. ಇದೇ ವೇಳೆ ಕಾಂಗ್ರೇಸ್ ಪಕ್ಷ ಎಲ್ಲಿಯವರೆಗೆ ರಾಹುಲ್ ಗಾಂಧಿ ಅವರ ನಾಯಕತ್ವವನ್ನು ನೆಚ್ಚಿಕೊಂಡಿರುತ್ತದಯೋ, ಅಲ್ಲಿಯವರೆಗೆ ಆ ಪಕ್ಷ ಉದ್ಧಾರವಾಗುವುದಿಲ್ಲ ಎಂದು ವ್ಯಂಗ್ಯವಾಡಿದರು. ಅರವಿಂದ್ ಕೇಜ್ರಿವಾಲ್ ಮತ್ತು ಆಮ್ ಆದ್ಮಿ ಪಕ್ಷದಿಂದ ರೋಸಿ ಹೋಗಿದ್ದರು. ಕೇವಲ ಬಾಯಿ ಮಾತಿನಲ್ಲಿ ತಮ್ಮದು ವಿನೂತನ ರಾಜಕಾರಣ ಎಂದು ಹೇಳುತ್ತಿದ್ದ ಆಪ್ ನಾಯಕರು, ಲಿಕ್ಕರ್ ಹಗರಣ, ಅರಮನೆಯಂತಹ ಮನೆ ನಿರ್ಮಿಸಿಕೊಳ್ಳುವುದಲ್ಲಿ ನಿರತರಾಗಿದ್ದರು. ಭ್ರಷ್ಟಾಚಾರ ದಿಂದ ಬೇಸತ್ತಿದ್ದ ಮತದಾರರು ಈ ಬಾರಿ ಬಿಜೆಪಿಗೆ ಆಶೀರ್ವಾದ ಮಾಡಿದ್ದಾನೆ ಎಂದು ಅಭಿಪ್ರಾಯಪಟ್ಟರು.

ದೆಹಲಿ ಚುನಾವಣೆ ಫಲಿತಾಂಶ ಕಾಂಗ್ರೇಸ್ ಕಾಲೆಳೆದ ಜೋಶಿ

• ಉದಯವಾಹಿನಿ, ಹುಬ್ಬಳ್ಳಿ

ದೆಹಲಿ ಚುನಾವಣೆ ಫಲಿತಾಂಶ ಬಹುತೇಕ ಅಂತಿಮವಾಗಿದ್ದು, ಬಿಜೆಪಿ ಮೇಲುಗೈ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ದ್ವಿಜಾನಾಂ ಅಪಮೃಜ್ಯತೇ

ಗರ್ಭ ಶುದ್ಧವಾಗಿರಲಿ ಎಂಬ ಉದ್ದೇಶದಿಂದ ಮಾಡುವ ಸಂಸ್ಕಾರಗಳು ಗಾರ್ಭಸಂಸ್ಕಾರಗಳು ಎನಿಸಿವೆ. ದ್ವಿಜರು ಆಚರಿಸುವ ಈ ಸಂಸ್ಕಾರಗಳಿಂದ ಬೀಜ ಹಾಗೂ ಗರ್ಭಕ್ಕೆ ಸಂಬಂಧಿಸಿದ ದೋಷಗಳು ದೂರವಾಗುತ್ತವೆ. ನಡತೆ ಮುನ್ನೆಚ್ಚರಿಕೆ ಗುರು ಹಿರಿ ದೈವಾನುಗ್ರಹ ಮೂಲಕ. ಪೂಜೆ ಪುನಸ್ಕಾರ ಹೋಮ ಹವನಾದಿ ಸಂಸ್ಕಾರಗಳನ್ನು ಮಾಡುವುದರಿಂದ ಗರ್ಭವತಿ ಪತಿ ಮನೆಮಂದಿ ಎಲ್ಲರೂ ಒಂದು ವಿಶಿಷ್ಟ ಪವಿತ್ರ ಭಾವದಿಂದ ಇರುವಂತಾಗುವುದು. ಮನಸ್ಸಿನಂತೆ ಮಹಾದೇವ ಎಂಬ ಗಾದೆ ಪರಿಚಿತ. ಇಂದು ನಾವೇನಾಗಿದ್ದೇವೆಯೋ ಅದಕ್ಕೆಲ್ಲ ನಾವು ಪಡೆದ ತರಬೇತಿ ಸಂಸ್ಕಾರಗಳೇ ಕಾರಣ. ಪವಿತ್ರ ಭಾವಗಳ ಪರಿಣಾಮ ಮಗುವಿನ ಮೇಲೆ ಖಂಡಿತ ಇದ್ದೇ ಇರುತ್ತೆ. ತೇಗಿದರೆ ತಿಂದಿದ್ದರ ಕುಡಿದಿದ್ದರ ವಾಸನೆ ಬರುವುದೇ ಹೊರತು ಬೇರೆ ವಾಸನೆ ಬರಲಾರದು. ಸತ್ಸಂಪ್ರದಾಯದವರ ಮನೆಯ ಮಕ್ಕಳಿಗೂ ದಾರಿಯಲ್ಲಿರದವರ ಮನೆಯ ಮಕ್ಕಳಿಗೂ ಇರುವ ವ್ಯತ್ಯಾಸವನ್ನು ಯಾರು ಬೇಕಾದರೂ ತಿಳಿಯಬಹುದು. ಆದ್ದರಿಂದ ಗರ್ಭಾದಾನದಿಂದಲೇಯೇ ಸಂಸ್ಕಾರ ಆರಂಭಗೊಳ್ಳಬೇಕು.ಗರ್ಭಾದಾನ ಪುಂಸವನ ಸೀಮಂತ ಜಾತಕರ್ಮ ನಾಮಕರಣ ನಿಷ್ಕ್ರಮಣ ಅನ್ನಪ್ರಾಶನ ಚೂಡಾಕರ್ಮ ಕರ್ಣವೇಧನ ವಿದ್ಯಾರಂಭ ಉಪನಯನ (ಲಿಂಗದೀಕ್ಷೆ ಇತ್ಯಾದಿ) ವೇದಾರಂಭ ಗೋದಾನ ಸಮಾವರ್ತನ ವಿವಾಹ ಅಂತ್ಯೇಷ್ಟಿ ಹೀಗೆ ಹದಿನಾರು ಸಂಸ್ಕಾರಗಳು. ಕೆಲವು ಪಾಠಾಂತರ ಉಂಟು. ದ್ವಿಜರ ಎಂದು ಹೇಳಿ ತಾರತಮ್ಯ ತೋರಲಾಗಿದೆ.

ದೆಹಲಿ ಚುನಾವಣಾ ಫಲಿತಾಂಶ: ಖಾತೆ ತೆರೆಯದ ಕಾಂಗ್ರೇಸ್: ಪರಂ ಪ್ರತಿಕ್ರಿಯೇನು?

- ಉದಯವಾಹಿನಿ, ಬೆಂಗಳೂರು

ದೆಹಲಿ ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟವಾಗಲಿದ್ದು, ಮತ ಎಣಿಕೆ ಚುರುಕುಗೊಂಡಿದೆ. ಈವರೆಗಿನ ಮಾಹಿತಿ ಪ್ರಕಾರ ಬಿಜೆಪಿ ಮುನ್ನಡೆ ಕಾಯ್ದುಕೊಂಡಿದೆ. ಆಮ್ ಆದ್ಮ ಪಕ್ಷ ಹಿನ್ನಡೆಯಲ್ಲಿದೆ. ಇನ್ನು ಕಾಂಗ್ರೇಸ್ ಪಕ್ಷ ಯಾವುದೇ ಖಾತೆ ತೆರೆದಿಲ್ಲ. ಇದು ಕಾಂಗ್ರೇಸ್‌ಗೆ ಬಿಗ್ ಶಾಕ್ ನೀಡಿದೆ. ದೆಹಲಿ ಚುನಾವಣಾ ಫಲಿತಾಂಶದ ವಿಚಾರವಾಗಿ ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಡಿದ ಗೃಹ ಸಚಿವ ಪರಮೇಶ್ವರ್, ಮೈತ್ರಿ ಎಲ್ಲಾ ಕಾಲದಲ್ಲೂ ಒಂದೇ ರೀತಿ ಇರಲ್ಲ. ರಿಸಲ್ಟ್ ಕಂಪ್ಲೇಟ್ ಆಗಲಿ. ಆಮೇಲೆ ಚರ್ಚಿಸೋಣ ಎಂದು ಹೇಳಿದರು. ಫಲಿತಾಂಶದ ಬಗ್ಗೆ ಎಐಸಿಸಿ ನಾಯಕರು ಚರ್ಚೆ ಮಾಡುತ್ತಾರೆ. ಒಂದೊಂದು ಚುನಾವಣೆ ಒಂದೊಂದು ರೀತಿ ಇರುತ್ತದೆ. ಬೇರೆ ರಾಜ್ಯದ ಮೇಲೆ ಈ ಫಲಿತಾಂಶ ಅಷ್ಟೊಂದು ಪರಿಣಾಮ ಬೀರಲ್ಲ. ಪ್ರತಿಯೊಂದು ಚುನಾವಣೆ ವಿಭಿನ್ನವಾಗಿ ಇರುತ್ತದೆ ಎಂದು ತಿಳಿಸಿದರು.

ಕ್ಯಾಮೆರಾ ಮುಂದೆ ಬಂದು ಅಭಿಮಾನಿಗಳಿಗೆ ಶಾಕಿಂಗ್ ನ್ಯೂಸ್ ಕೊಟ್ಟ ದರ್ಶನ್

- ಉದಯವಾಹಿನಿ, ಬೆಂಗಳೂರು

ಈ ವರ್ಷ ನನ್ನ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿಲ್ಲ ಕ್ಷಮೆ ಇರಲಿ ಎಂದು ದರ್ಶನ್ ವಿಡಿಯೋ ಮೂಲಕ ಅಭಿಮಾನಿಗಳಿಗೆ ಸಂದೇಶವೊಂದನ್ನು ರವಾನಿಸಿದ್ದಾರೆ. ಕ್ಯಾಮೆರಾ ಮುಂದೆ ಬಂದು ಅಭಿಮಾನಿಗಳಿಗೆ ನಟ ದರ್ಶನ್ ಶಾಕಿಂಗ್ ನ್ಯೂಸ್ ನೀಡಿದ್ದಾರೆ. ನನ್ನ ಪ್ರೀತಿಯ ಸೆಲೆಬ್ರಿಟಿಗಳಿಗೆ ನನ್ನ ಪ್ರೀತಿಯ ಮನವಿ ಈ ವರ್ಷ ನನ್ನ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿಲ್ಲ ಕ್ಷಮೆ ಇರಲಿ ಇಂತಿ ನಿಮ್ಮ ದಾಸ ದರ್ಶನ್ ಎಂದು ನಟ ದರ್ಶನ್ ಫೇಸ್ ಬುಕ್ ನಲ್ಲಿ ವಿಡಿಯೋ ಹಂಚಿಕೊಂಡಿದ್ದಾರೆ. ನಾನು ಏನೇ ಪದ ಬಳಕೆ ಮಾಡಿದರೂ ಅದು ಕಮ್ಮಿ ನೀವು ತೋರಿಸಿದ ಅಭಿಮಾನ ಬಹಳ ದೊಡ್ಡದು.. ಮುಂದಿನ ವಾರ ನನ್ನ ಬರ್ತ್ ಡೇ ಇದೆ... ನನಗೂ ತುಂಬಾ ಆಸೆ ಇತ್ತು..ಎಲ್ಲರನ್ನೂ ಮೀಟ್ ಮಾಡಬೇಕೆಂದು. ಆದರೆ ನನಗೆ ಹೆಲ್ತ್ ಪ್ರಾಬ್ಲಂ ಇದೆ. ತುಂಬಾ ಹೊತ್ತು ನಿಲ್ಲಲು ಆಗುತ್ತಿಲ್ಲ... ಖಂಡಿತ ಮುಂದೆ ಸಿಗ್ತಿನಿ. ಸಲ್ಪ ದಿನ ಹೋಗಲಿ ಎಂದಿದ್ದಾರೆ.ಯಾವ ಊಹಾಪೋಹಗಳಿಗೂ ನನ್ನ ಸೆಲೆಬ್ರಿಟಿಗಳು ಕಿವಿಗೆ ಹಾಕ್ಕೊಬೇಡಿ. ನಾನು ಪ್ರೇಮ್ ಖಂಡಿತ ಸಿನಿಮಾ ಮಾಡ್ತೀವಿ. ಎಂದಿದ್ದಾರೆ. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಪಾಲಾದ ನಟ ದರ್ಶನ್ ಗೆ ಹೈಕೋರ್ಟ್ ಜಾಮೀನು ನೀಡಿದೆ. ಸದ್ಯ ಜಾಮೀನಿನ ಮೇಲೆ ಹೊರಗಡೆ ಇರುವ ನಟ ದರ್ಶನ್ ಫ್ಯಾಮಿಲಿ ಜೊತೆ ಸಮಯ ಕಳೆಯುತ್ತಿದ್ದಾರೆ.

ಯಾವ ಕಾರಣಕ್ಕೆ ಈ ಫಲಿತಾಂಶ ಬಂದಿದೆ ಗೊತ್ತಿಲ್ಲ: ಪರಂ ಪ್ರತಿಕ್ರಿಯೆ

- ಉದಯವಾಹಿನಿ, ಬೆಂಗಳೂರು

ದೆಹಲಿ ವಿಧಾನಸಭೆ ಚುನಾವಣೆಯ ಪ್ರಕ್ರಿಯೆ ನಡೆಯುತ್ತಿದ್ದು, ಕಾಂಗ್ರೇಸ್‌ಗೆ ಸತತ ಮೂರನೇ ಮೂರನೇ ಬಾರಿಯೂ ಭಾರೀ ಹಿನ್ನಡೆಯಾಗಿದೆ. ಈ ಕುರಿತು ಸಚಿವ ಜಿ.ಪರಮೇಶ್ವರ್ ಅವರು ಪ್ರತಿಕ್ರಿಯೆ ನೀಡಿದ್ದು, ಯಾವ ಕಾರಣಕ್ಕೆ ಈ ರೀತಿ ಫಲಿತಾಂಶ ಬಂದಿದೆ ಎಂಬುವುದನ್ನ ಗೊತ್ತಿಲ್ಲ.. ಈ ಬಗ್ಗೆ ಎಐಸಿಸಿ ನಾಯಕರು ಚರ್ಚೆ ಮಾಡುತ್ತಾರೆ. ಪ್ರತಿಯೊಂದು ಚುನಾವಣೆ ಕೂಡ ವಿಭಿನ್ನವಾಗಿರುತ್ತದೆ ಎಂದರು. ಮೈತ್ರಿ ಎಲ್ಲಕಾಲದಲ್ಲೂ ಒಂದೇ ರೀತಿಯಾಗಿ ಇರಲ್ಲ ಎಂದು ಆಪ್ ಹಿನ್ನಡೆ ಬಗ್ಗೆಯೂ ಪರೋಕ್ಷವಾಗಿ ಹೇಳಿದ ಸಚಿವರು, ಇನ್ನೂ ಮತ ಎಣಿಕೆ ಮುಕ್ತಾಯವಾಗಿಲ್ಲ. ಹೀಗಾಗಿ ಸಂಪೂರ್ಣ ಫಲಿತಾಂಶ ಹೊರ ಬೀಳುವವರೆಗೆ ಕಾಯಬೇಕು. ನಮಗೆ ಯಾವ ಕಾರಣಕ್ಕೆ ಹಿನ್ನಡೆಯಾಗಿದೆ ಎಂದು ಹೈಕಮಾಂಡ್ ನಾಯಕರು ಚರ್ಚಿಸುತ್ತಾರೆ. ಪ್ರತಿ ಚುನಾವಣೆಗಳು ವಿಭಿನ್ನವಾಗಿ ಇರುತ್ತವೆ. ಲೋಕಸಭಾ ಚುನಾವಣೆ ರಾಷ್ಟ್ರೀಯ ವಿಷಯಗಳ ಮೇಲೆ ನಡೆದರೆ, ರಾಜ್ಯದ ಚುನಾವಣೆ ಸ್ಥಳೀಯ ವಿಷಯಗಳು, ಸಮಸ್ಯೆಗಳ ಮೇಲೆ ಆಗುತ್ತದೆ ಎಂದು ಹೇಳಿದರು.

ಶಿವರಾಜ್ ಕುಮಾರ್ ಭೇಟಿಯಾಗಿ ಆರೋಗ್ಯ ವಿಚಾರಿಸಿದ ಡಿಕೆಶಿ

- ಉದಯವಾಹಿನಿ, ಬೆಂಗಳೂರು

ಅಮೆರಿಕದಲ್ಲಿ ಶಸ್ತ್ರಚಿಕಿತ್ಸೆಗೊಳಗಾಗಿ ಗುಣಮುಖರಾಗಿ ಬೆಂಗಳೂರಿಗೆ ಆಗಮಿಸಿದ ಶಿವರಾಜ್ ಕುಮಾರ್ ಅವರನ್ನು ಡಿಸಿಎಂ ಡಿಕೆಶಿ ಅವರು ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ಬೆಂಗಳೂರಿನ ವೈದೇಹಿ ಆಸ್ಪತ್ರೆಯಲ್ಲಿ ಶಿವರಾಜ್ ಕುಮಾರ್ ಅವರನ್ನು ಭೇಟಿಯಾಗಿ ಅವರ ಆರೋಗ್ಯ ವಿಚಾರಿಸಿದರು. ಈ ಬಗ್ಗೆ ಡಿಸಿಎಂ ಡಿಕೆಶಿ ಟೀಟ್ ಮಾಡಿದ್ದು, ಇತ್ತೀಚೆಗೆ ಅಮೆರಿಕದಲ್ಲಿ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ಮುಗಿಸಿಕೊಂಡ ಬಂದ ಕನ್ನಡ ಖ್ಯಾತ ಶಿವರಾಜುಮಾರ್ ಅವರನ್ನು ಬೆಂಗಳೂರಿನ ವೈದೇಹಿ ಆಸ್ಪತ್ರೆಯಲ್ಲಿ ಭೇಟಿಯಾಗಿ, ಅವರ ಆರೋಗ್ಯ ವಿಚಾರಿಸಿದೆ ಎಂದು ಪೋಸ್ಟ್ ಹಂಚಿಕೊಂಡಿದ್ದಾರೆ. ಬೆಂಗಳೂರಿನ ನಾಗವಾರದಲ್ಲಿರುವ ಶಿವರಾಜ್ ಕುಮಾರ್ ನಿವಾಸಕ್ಕೆ ಇತ್ತೀಚೆಗೆ ಸಿಎಂ ಭೇಟಿ ನೀಡಿ ಶಿವಣ್ಣನ ಆರೋಗ್ಯ ವಿಚಾರಿಸಿದ್ದರು.

ಆನ್‌ಲೈನ್ ಜೂಜಾಟಕ್ಕೆ ಹಣದ ಕೊರತೆ

- ಉದಯವಾಹಿನಿ, ಬೆಂಗಳೂರು

ಬೀದರ್‌ನಿಂದ ಬೆಂಗಳೂರಿಗೆ ರೈಲಿನಲ್ಲಿ ಬಂದು ಸರಗಳವು ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಅರೆಸ್ಟ್ ಮಾಡಿದ್ದಾರೆ.ಬಂಧಿತ ಆರೋಪಿ ಕಿರಣ್ ಎಂದು ತಿಳಿದುಬಂದಿದ್ದು, ಆನ್ಲೈನ್ ರಮ್ಮಿ ಜೂಜಿನ ಆಟಕ್ಕೆ ದಾಸನಾಗಿದ್ದ ಕಿರಣ್, ಜೂಜಾಟಕ್ಕೆ ಹಣ ಹೊಂದಿಸಲು ಸರಗಳ್ಳತನಕ್ಕೆ ಇಳಿದ್ದ. ರಮ್ಮಿ ಆಟ ಆಡಲು ಹಣ ವಿಲ್ಲದ್ದಕ್ಕೆ ಕೆಲಸ ಹುಡುಕಿ ಬೆಂಗಳೂರಿಗೆ ಬಂದಿದ್ದ ಕಿರಣ್‌ಗೆ ಎಲ್ಲಿಯೂ ಕೆಲಸ ಸಿಕ್ಕಿರಲಿಲ್ಲ. ಹೀಗಾಗಿ ಕಳೆದ ಜ.26ರಂದು ಜಯನಗರದ ಶಾಕಾಂಬರಿನಗರದಲ್ಲಿ ವೃದ್ಧೆಯ ಸರ ಕಸಿದು, ಬೆಂಗಳೂರಿನಿಂದ ರೈಲಿನ ಮೂಲಕ ಬೀದರ್‌ಗೆ ತೆರಳಿದ್ದ ಎಂಬ ಆರೋಪವಿದೆ. ಸರ ಕದ್ದು ಬ್ಯಾಗ್‌ನಲ್ಲಿ ಇಟ್ಟುಕೊಂಡು ಎಸ್ಕೆಪ್ ಆಗಿದ್ದ ಕಿರಣ್ ಕೃತ್ಯದ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿತ್ತು.

ಮಹಾರಾಷ್ಟ್ರದ ಸಚಿವರಿಗೆ ಇದೆಂಥಾ ಅವಮಾನ?

ಎಂಎಸ್‌ಆರ್‌ಟಿಸಿ ನೂತನ ಮುಖ್ಯಸ್ಥರಾಗಿ ಐಎಎಸ್ ಅಧಿಕಾರಿಯೊಬ್ಬರನ್ನು ನೇಮಕ

- ಉದಯವಾಹಿನಿ, ಬೆಂಗಳೂರು

ಕರ್ನಾಟದ ಕೆಎಸ್‌ಆರ್‌ಟಿಸಿ ಸಾರಿಗೆಯನ್ನು ಹೊಗಳಿದ್ದಕ್ಕೆ ಮಹಾರಾಷ್ಟ್ರ ಸರ್ಕಾರವು ಸಾರಿಗೆ ಸಚಿವರನ್ನೇ ಬದಲಾಯಿಸಿ ಬಿಟ್ಟಿದೆ. ಮೂರು ದಶಕಗಳಲ್ಲಿ ಮೊದಲ ಬಾರಿಗೆ ಮಹಾರಾಷ್ಟ್ರ ರಾಜ್ಯ ಸರ್ಕಾರವು ಎಂಎಸ್‌ಆರ್‌ಟಿಸಿ ನೂತನ ಮುಖ್ಯಸ್ಥರಾಗಿ ಐಎಎಸ್ ಅಧಿಕಾರಿಯೊಬ್ಬರನ್ನು ನೇಮಕ ಮಾಡಿದೆ. ಇದು ಇಲ್ಲಿನ ಸರ್ಕಾರ ಮಾಡಿದ ನಿರ್ಧಾರವಾಗಿದೆ ಎಂದು ತಿಳಿದುಬಂದಿದೆ.

ಹೊಸದಾಗಿ ನೇಮಕಗೊಂಡ ರಾಜ್ಯ ಸಾರಿಗೆ ಸಚಿವ ಪ್ರತಾಪ್ ಸರ್ ನಾಯಕ್ ಅವರು ಸಚಿವಾಲಯದ ಅಧಿಕಾರ ವಹಿಸಿಕೊಂಡು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ಸೇವೆ ಮತ್ತು ದಕ್ಷತೆಯನ್ನು ಶ್ಲಾಘಿಸಿದ್ದರು. ಇದಾದ ಕೆಲವೇ ದಿನಗಳಲ್ಲಿ ಮಹಾರಾಷ್ಟ್ರ ಸಾರಿಗೆ ನಿಗಮನ ಈ ಕ್ರಮವನ್ನು ಕೈಗೊಂಡಿದೆ ಎಂದು ತಿಳಿದುಬಂದಿದೆ. ಕಾಂಗ್ರೇಸ್ ಆಡಳಿತವಿರುವ ನೆರೆಯ ರಾಜ್ಯಕ್ಕೆ ಅಂದರೆ ಕರ್ನಾಟಕಕ್ಕೆ ಇತ್ತೀಚೆಗಷ್ಟೇ ಭೇಟಿ ನೀಡಿದ ಸಂದರ್ಭದಲ್ಲಿ ಪ್ರತಾಪ್ ಸರ್ ನಾಯಕ್ ಅಲ್ಲಿನ ಸಾರಿಗೆಯ ಬಗ್ಗೆ ಹೊಗಳಿದ್ದರು. ಇದು ಮಹಾರಾಷ್ಟ್ರದ ರಾಜಕೀಯ ವಲಯದಲ್ಲಿ ಭಾರೀ ಚರ್ಚೆಯಾಗಿತ್ತು. ಅಲ್ಲದೆ ಅವರನ್ನು ವಜಾಗೊಳಿಸಲಾಗಿದೆ. ಬಳಿಕ ಗುರುವಾರ ಹೊರಡಿಸಲಾದ ರಾಜ್ಯ ಸರ್ಕಾರದ ಆದೇಶದ ಪ್ರಕಾರ, ಸಂಜಯ್ ಸೇಥಿ ಅವರನ್ನು ಎಂಎಸ್‌ಆರ್‌ಟಿಸಿಯ ನೂತನ ಮುಖ್ಯಸ್ಥರಾಗಿ ನೇಮಕ ಮಾಡಿದೆ ಎಂದು ತಿಳಿದುಬಂದಿದೆ. ಇನ್ನು ಈ ಹುದ್ದೆಗೆ ಐಎಎಸ್ ಅಧಿಕಾರಿಯೊಬ್ಬರು ನೇಮಕಗೊಂಡಿರುವುದು ಇದೇ ಮೊದಲೇನಲ್ಲ. 1991ರಲ್ಲಿಯೂ ಐಎಎಸ್ ಅಧಿಕಾರಿ ಎಂ.ಕೆ.ಹಮೀದ್ ಈ ಹುದ್ದೆಯನ್ನು ಅಲಂಕರಿಸಿದ್ದರು. ಈ ಹುದ್ದೆಯನ್ನು ತಾತ್ಕಾಲಿಕವೆಂದು ಪರಿಗಣಿಸಲಾಗಿದ್ದು, ಯಾವುದೇ ನಿಗದಿತ ಅವಧಿ ಇಲ್ಲ. ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ನೇತೃತ್ವದ ಹೊಸ ಸಂಪುಟದಲ್ಲಿ ಸೇರ್ಪಡೆಗೊಂಡ ನಂತರ ರಾಜೀನಾಮೆ ನೀಡಿದ ಶಿಂಧೆ ಬಣದೊಂದಿಗೆ ಹೊಂದಾಣಿಕೆ ಮಾಡಿಕೊಂಡ ಶಿವಸೇನಾ ಶಾಸಕ ಭರತ್ ಗೊಗವಾಲೆ ಅವರ ಸ್ನಾನವನ್ನು ಸೇಥಿ ವಹಿಸಿಕೊಂಡಿದ್ದಾರೆ. ಎಂಎಸ್‌ಆರ್‌ಟಿಸಿ ಸುಮಾರು 14,000 ಬಸ್‌ಗಳನ್ನು ನಿರ್ವಹಿಸುತ್ತಿದ್ದು, ಪ್ರತಿದಿನ ಸುಮಾರು 55 ಲಕ್ಷ ಪ್ರಯಾಣಿಕರು ಪ್ರಮಾಣ ಮಾಡುತ್ತಿದ್ದಾರೆ ಮತ್ತು ಸುಮಾರು 90,000 ಜನರಿಗೆ ಉದ್ಯೋಗ ನೀಡಿದೆ. ಇತ್ತೀಚಿನ ವರ್ಷಗಳಲ್ಲಿ ಈ ನಿಗಮವು ಆರ್ಥಿಕ ನಷ್ಟ, ಉದ್ಯೋಗಿಗಳ ಮುಷ್ಕರಗಳು ಮತ್ತು ಪ್ರಯಾಣಿಕರ ಸಂಖ್ಯೆಯಲ್ಲಿನ ಕುಸಿತ ಸೇರಿದಂತೆ ಹಲವು ಸವಾಲುಗಳನ್ನು ಎದುರಿಸಿದೆ. ಈ ಕೆಲವು ಸಮಸ್ಯೆಗಳನ್ನು ಪರಿಹರಿಸಲು, ದೈನಂದಿನ ಆರ್ಥಿಕ ನಷ್ಟವನ್ನು ಸರಿದೂಗಿಸುವ ನಿಟ್ಟಿನಲ್ಲಿ ಕಳೆದ ತಿಂಗಳು ಶೇಕಡಾ 14.95ರಷ್ಟು ಶುಲ್ಕ ಹೆಚ್ಚಳ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಉದಯವಾಹಿನಿ ಚಿತ್ರ

ಮಹಾರಾಷ್ಟ್ರದ ರಾಜಕೀಯ ವಲಯದಲ್ಲಿ ಭಾರೀ ಚರ್ಚೆ

ಖಾಸಗಿ ಬಸ್‌ಗಳಿಗೆ ಹೋಲಿಸಿದರೆ ಕೆಎಸ್ ಆರ್‌ಟಿಸಿ ಸುರಕ್ಷಿತ ಮತ್ತು ಸಮಯಕ್ಕೆ ಸರಿಯಾಗಿ ಸೇವೆ ನೀಡುತ್ತಿದೆ ಎಂದು ಶ್ಲಾಘಿಸಿದ್ದರು. ಕರ್ನಾಟಕ ರಾಜ್ಯ ಸಾರಿಗೆ ಸೇವೆಯ ದೀರ್ಘ-ದೂರದ ಸೇವೆ ಒದಗಿಸುವುದರಲ್ಲಿ ಜನಪ್ರಿಯವಾಗಿದೆ. ಮಹಾರಾಷ್ಟ್ರದಲ್ಲೂ ಇದೇ ರೀತಿಯ ಪ್ರಯೋಗ ಮಾಡಬೇಕಿದೆ ಎಂದು ಹೇಳಿದ್ದರು.

ಫೆಬ್ರವರಿ 1ರಂದು ಪ್ರಾರಂಭ

ಫೆಬ್ರವರಿ 1ರಂದು ಪ್ರಾರಂಭವಾದ ಎರಡು ದಿನಗಳ ಕರ್ನಾಟಕ ಭೇಟಿ ನೀಡಿದ ಸಂದರ್ಭದಲ್ಲಿ, ಪ್ರತಾಪ್ ಸರ್ ನಾಯಕ್ ಅವರು ಇಲ್ಲಿನ ಸಾರಿಗೆ ಸಚಿವ ಡಾ.ರಾಮಲಿಂಗಾ ರೆಡ್ಡಿ ಅವರನ್ನು ಭೇಟಿಯಾದರು. ಈ ವೇಳೆ ಬೆಂಗಳೂರಿನಲ್ಲಿರುವ ಕೆಎಸ್‌ಆರ್‌ಟಿಸಿ ಪ್ರಧಾನ ಕಚೇರಿಗೆ ಪ್ರವಾಸ ಮಾಡಿ ಐಷಾರಾಮಿ ಬಸ್‌ಗಳು ಸೇರಿದಂತೆ ವಿವಿಧ ಪ್ರೀಮಿಯಂ ಸೇವೆಗಳನ್ನು ವೀಕ್ಷಣೆ ಮಾಡಿದರು.

ಅಪರಿಚಿತರಿಂದ ಕಂದಾಯ ಇಲಾಖೆ ಸಾಫ್ಟ್‌ವೇರ್ ಹ್ಯಾಕ್: ದೂರು ದಾಖಲು!

ಉದಯವಾಹಿನಿ ಚಿತ್ರ

- ಉದಯವಾಹಿನಿ, ಬೆಂಗಳೂರು

ಸಾಫ್ಟ್‌ವೇರ್ ಹ್ಯಾಕ್ ಗುಮ್ಮ ಇದೀಗ ಕಂದಾಯ ಇಲಾಖೆ ವೆಬ್ ಸೈಟ್‌ಗೂ ತಟ್ಟಿದೆ. ಕಂದಾಯ ಇಲಾಖೆಯ ಕಾವೇರಿ 2.0 ಸಾಫ್ಟ್‌ವೇರ್ ಹ್ಯಾಕ್ ಆಗಿರೋ ವಿಚಾರ ದೊಡ್ಡ ಸಂಚಲನ ಸೃಷ್ಟಿಸಿದೆ. ಸೈಬರ್ ಕ್ರಿಮಿಗಳ ವಿರುದ್ಧ ಇದೀಗ ಎಫ್‌ಐಆರ್ ದಾಖಲಾಗಿದೆ. ನೋಂದಣಿ ಮಹಾ ನಿರೀಕ್ಷಕರು ಪೊಲೀಸರಿಗೆ ದೂರು ನೀಡಿದ್ದಾರೆ.

ದೂರಿನ ಮೇರೆಗೆ ಅಪರಿಚಿತ ವ್ಯಕ್ತಿಗಳ ವಿರುದ್ಧ ಕೇಂದ್ರ ಸಿಇಎನ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ. ಇದ್ರಿಂದಾಗು ದತ್ತಾಂಶ ಹಾಳಾಗಿರುವ ಶಂಕೆ ಕೂಡ ವ್ಯಕ್ತವಾಗಿದೆ.

ಸರ್ವರ್ ಸಮಸ್ಯೆಯಿಂದ ಕಳೆದ ಕೆಲ ದಿನಗಳಿಂದ ರಾಜ್ಯದ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ರಿಜಿಸ್ಟ್ರೇಷನ್ ಕಾರ್ಯ ಸ್ಥಗಿತಗೊಂಡಿತ್ತು. ಈ ಹಿನ್ನೆಲೆಯಲ್ಲಿ ಐಜಿಆರ್ ಪರಿಶೀಲಿಸಿದಾಗ ದುರುದ್ದೇಶದಿಂದ ಅಪರಿಚಿತರು ಕಾವೇರಿ 2.0 ಸಾಫ್ಟ್‌ವೇರ್ ಅನ್ನು ಹ್ಯಾಕ್ ಮಾಡಿ, ವೆಬ್‌ಸೈಟ್ ಪ್ರವೇಶಿಸಿ ಅದರಲ್ಲಿರುವ ಡೇಟಾಗಳನ್ನು ಕಳವು ಮಾಡಲು ನಕಲಿ ಖಾತೆಗಳನ್ನು ತೆರೆದಿರುವುದು ಪತ್ತೆಯಾಗಿದೆ. ಸರ್ಕಾರಿ ವೆಬ್‌ಸೈಟ್‌ಗಳನ್ನು ಗುರಿಯಾಗಿಸಿಕೊಂಡು ಸೈಬರ್ ದಾಳಿ ನಡೆದಿದೆ. ಹೀಗಾಗಿ, ಸರ್ಕಾರ ವೆಬ್‌ಸೈಟ್ ಹ್ಯಾಕ್ ಮಾಡಿದ ಅಪರಿಚಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದಯಾನಂದ್ ದೂರಿನಲ್ಲಿ ಕೋರಲಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗಿದೆ ಎಂದು ಸಿಇಎನ್ ಠಾಣೆ ಪೊಲೀಸರು ಮಾಹಿತಿ ನೀಡಿದ್ದಾರೆ.

ಬಹಿರಂಗ ಹೇಳಿಕೆ ನಿಲ್ಲಿಸಿ: ಭಿನ್ನರಿಗೆ ಬಿಜೆಪಿ ವರಿಷ್ಠರ ಖಡಕ್ ತಾಕೀತು

- ಉದಯವಾಹಿನಿ, ಬೆಂಗಳೂರು

ರಾಜ್ಯ ಬಿಜೆಪಿಯ ಬಣ ರಾಜಕಾರಣ ಹಾಗೂ ಬಹಿರಂಗ ಹೇಳಿಕೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಮೊದಲ ಹೆಜ್ಜೆ ಇಟ್ಟಿರುವ ಬಿಜೆಪಿ ವರಿಷ್ಠರು, ಕೋರ್ ಕಮಿಟಿ ಸದಸ್ಯರೂ ಸೇರಿದಂತೆ ಯಾರೊಬ್ಬರೂ ಬಹಿರಂಗ ಹೇಳಿಕೆ ನೀಡಬಾರದು ಎಂದು ಎಚ್ಚರಿಕೆ ಸಂದೇಶ ರವಾನೆ ಮಾಡಿದ್ದಾರೆ.

ವರಿಷ್ಠರ ಸೂಚನೆ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಆಗಮಿಸಿರುವ ರಾಜ್ಯ ಸಹ ಉಸ್ತುವಾರಿ ಸುಧಾಕರ ರೆಡ್ಡಿ, ವಿಪಕ್ಷ ನಾಯಕ ಆರ್.ಅಶೋಕ್ ಅವರನ್ನು ಬಿಜೆಪಿ ಕಚೇರಿಗೆ ಕರೆಸಿಕೊಂಡು ದೀರ್ಘ ಕಾಲ ಚರ್ಚೆ ನಡೆಸಿ ವರಿಷ್ಠರ ಸಂದೇಶವನ್ನು ಎಲ್ಲರಿಗೂ ರವಾನಿಸುವಂತೆ ಸೂಚನೆ ನೀಡಿದರು. ಇದಾದ ಬಳಿಕ ಅಶೋಕ್ ಜತೆಗೆ ಜಂಟಿ ಪತ್ರಿಕಾ ಹೇಳಿಕೆ ನೀಡಿದ ಅವರು, ಎಲ್ಲರೂ ಪಕ್ಷದ ನಿರ್ದೇಶನ ಪಾಲಿಸಬೇಕು. ಏನೇ ಆಕ್ಷೇಪಗಳಿದ್ದರೂ ಪಕ

ಭೂ ಒಡೆತನದ ಕಡತಗಳೇ ನಾಪತ್ತೆ!

ನಗರದ ಜಿಲ್ಲಾಡಳಿತ ಭವನದಲ್ಲಿರುವ ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿನ ಅಕ್ರಮ

• ಉದಯವಾಹಿನಿ, ಚಿಕ್ಕಬಳ್ಳಾಪುರ

ನಗರದ ಜಿಲ್ಲಾಡಳಿತ ಭವನದಲ್ಲಿರುವ ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿನ ಅಕ್ರಮಗಳು ಮತ್ತು ನ್ಯೂನತೆಗಳು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳ ಕಡತ ಪರಿಶೀಲನೆಯಲ್ಲಿ ಒಂದೊಂದೇ ಬಯಲಾಗುತ್ತಿವೆ.

ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳು ಭೂ ಒಡೆತನ ಯೋಜನೆಯಡಿ ಜಮೀನು ಪಡೆದಿರುವ ಕೆಲವು ಕಡತಗಳೇ ನಾಪತ್ತೆ ಆಗಿವೆ.ಎಷ್ಟು ಕಡತಗಳು ನಾಪತ್ತೆ ಆಗಿವೆ ಎನ್ನುವುದನ್ನು ಲೋಕಾಯುಕ್ತ ಪೊಲೀಸರು ಪರಿಶೀಲಿಸುತ್ತಿದ್ದಾರೆ.

ಅಲ್ಲದೆ ಪಹಣಿಯ ಕಲಂ 11ರ ಹಕ್ಕು ಮತ್ತು ಋಣಗಳಲ್ಲಿ ಈ ಜಮೀನು ಪರಭಾರೆ ಮಾಡಬಾರದು' ಎನ್ನುವ ಷರಾವನ್ನು ಬಹುತೇಕ ಕಡತಗಳಲ್ಲಿ ನಮೂದಿಸಿಲ್ಲ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಕಚೇರಿ ಮೇಲೆ ಲೋಕಾಯುಕ್ತ ಎಸ್.ಪಿ ಆಂಟೋನಿ ಜಾನ್ ನೇತೃತ್ವದ ತಂಡವು ಗುರುವಾರ ದಾಳಿ ನಡೆಸಿ ಕಡತಗಳನ್ನು ಜಾಲಾಡಿತ್ತು. ಈ ಕಡತಗಳ ಪರಿಶೀಲನೆಯು ಶುಕ್ರವಾರವೂ ಮುಂದುವರಿಯಿತು. ಡಿವೈಎಸ್‌ಪಿ ವೀರೇಂದ್ರ ಕುಮಾರ್ ಅವರ ನೇತೃತ್ವದಲ್ಲಿ ಸಂಜೆಯವರೆಗೂ ಕಡತಗಳನ್ನು ಲೋಕಾಯುಕ್ತ ಸಿಬ್ಬಂದಿ ಪರಿಶೀಲಿಸಿದರು. ನಿಗಮದ ಕಚೇರಿಯ ಪ್ರವೇಶ ದ್ವಾರದಲ್ಲಿಯೇ ಪರಿಶೀಲಿಸಿದ ಕಡತಗಳನ್ನು ಚೀಲಗಳಲ್ಲಿ ತುಂಬಿಡಲಾಗಿತ್ತು. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಭೂ ಒಡೆತನ ಯೋಜನೆಯಡಿ 2012-13ನೇ ಸಾಲಿನಿಂದ 310 ಫಲಾನುಭವಿಗಳಿಗೆ ಜಮೀನು ಮಂಜೂರಾಗಿದೆ. ಈ ಜಮೀನನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳು ಖರೀದಿಸಲು ಸರ್ಕಾರವು ಶೇ 50ರಷ್ಟು ಹಣ ನೀಡುತ್ತದೆ. ನಿಗಮವು ಶೇ 50ರಷ್ಟು ಹಣವನ್ನು ಸಾಲದ ರೂಪದಲ್ಲಿ ನೀಡುತ್ತದೆ. ಭೂ ಒಡೆತನ ಯೋಜನೆಯಡಿ ಪಡೆದ ಜಮೀನನ್ನು ಫಲಾನುಭವಿ ಜೀವನ ಪರ್ಯಂತ ಪರಭಾರೆ ಮಾಡಬಾರದು.

ಪಹಣಿಯ ಕಲಂ 11ರಲ್ಲಿ ಈ ಬಗ್ಗೆ ನಿಗಮವು ನಮೂದು ಮಾಡಬೇಕು. ಆದರೆ ಭೂ ಒಡೆತನ ಯೋಜನೆಯ ಶೇ 90ರಷ್ಟು ಫಲಾನುಭವಿಗಳ ಪಹಣಿಯಲ್ಲಿ ಈ ಷರಾ ನಮೂದಾಗಿಲ್ಲ. ಇದು ನಿಗಮದ ಪ್ರಮುಖ ನ್ಯೂನತೆಯಾಗಿದೆ. ಲೋಕಾಯುಕ್ತರ ಕಡತ ಪರಿಶೀಲನೆಯ ವೇಳೆ ಈ ವಿಚಾರ ಬೆಳಕಿಗೆ ಬಂದಿದೆ.

ಈ ಜಮೀನು ಅಂಬೇಡ್ಕರ ಅಭಿವೃದ್ಧಿ ನಿಗಮಕ್ಕೆ ಆಧಾರ ವಾಗಿರುತ್ತದೆ ಎಂದು ನಮೂದಿಸಿರಬೇಕು. ಇದರ ಪೂರ್ಣ ಜವಾಬ್ದಾರಿ ನಿಗಮದ ವ್ಯವಸ್ಥಾಪಕರನ್ನು ಆದರೆ ಶೇ 90ರಷ್ಟು ಕಡತಗಳಲ್ಲಿ ಈ ಷರಾ ಇಲ್ಲ ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ತಿಳಿಸಿವೆ. ಷರಾ ನಮೂದಾಗದ ಕಾರಣ ಕೆಲವು ಜಮೀನುಗಳನ್ನು ಫಲಾನುಭವಿಗಳು ಮಾರಾಟ ಸಹ ಮಾಡಿದ್ದಾರೆ ಎನ್ನುವುದು ಕಡತಗಳ ಪರಿಶೀಲನೆಯ ವೇಳೆ ಕಂಡು ಬಂದಿದೆ.

ಉದಯವಾಹಿನಿ ಚಿತ್ರ

> ನಿಗಮಗಳು ಇಲಾಖೆಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಎಲ್ಲೆಲ್ಲೊ ಮಾತನಾಡುವ ಬದಲು ಸಾರ್ವಜನಿಕರು ಜಿಲ್ಲಾ ಲೋಕಾಯುಕ್ತ ಸಂಸ್ಥೆಗೆ ಭೇಟಿ ನೀಡಿ ಅಕ್ರಮಗಳು ಅನ್ಯಾಯದ ವಿರುದ್ಧ ದೂರು ಸಲ್ಲಿಸಬಹುದು. ಭ್ರಷ್ಟಾಚಾರ ನಿಯಂತ್ರಣಕ್ಕೆ ಸಾರ್ವಜನಿಕರ ಸಹಕಾರ ಅತಿ ಮುಖ್ಯ. ಆದ್ದರಿಂದ ಕಚೇರಿಗಳಲ್ಲಿ ಕೆಲಸ ಕಾರ್ಯಗಳನ್ನು ಮಾಡಿಕೊಡದೆ ವಿಳಂಬ ಮಾಡುತ್ತಿರುವುದು ಹಣಕ್ಕೆ ಬೇಡಿಕೆ ಹೀಗೆ ಅಕ್ರಮಗಳ ಬಗ್ಗೆ ದೂರು ನೀಡಿದರೆ ತನಿಖೆ ನಡೆಸಲಾಗುವುದು ಎಂದು ಹೇಳಿದರು.
ವೀರೇಂದ್ರ ಕುಮಾರ್ ಡಿವೈಎಸ್‌ಪಿ

ಕೊಳವೆ ಬಾವಿಯಲ್ಲಿಯೂ ಲೋಪ

ನಿಗಮದಲ್ಲಿ ಗಂಗಾಕಲ್ಯಾಣ ಯೋಜನೆಯ ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಯುವ ವಿಚಾರದಲ್ಲಿ ವ್ಯಾಪಕವಾದ ಅಕ್ರಮಗಳು ನಡೆದಿವೆ ಎನ್ನುವ ಆರೋಪಗಳು ಇವೆ. ಈ ಬಗ್ಗೆ ಕೆಲವು ಫಲಾನುಭವಿಗಳು ಲೋಕಾಯುಕ್ತಕ್ಕೆ ದೂರು ಸಹ ಸಲ್ಲಿಸಿದ್ದಾರೆ. 2016-17ರ ಕೆಲವು ಫಲಾನುಭವಿಗಳಿಗೆ ಇಂದಿಗೂ ಕೊಳವೆ ಬಾವಿ ಕೊರೆದಿಲ್ಲ, ಅದೇ 2021-22ನೇ ಸಾಲಿನ ಫಲಾನುಭವಿಗಳಿಗೆ ಕೊಳವೆ ಬಾವಿ ಕೊರೆಯಲಾಗಿದೆ. ಯಾರು ಹಣವನ್ನು ನೀಡುವರೊ ಅಥವಾ ಪ್ರಭಾವ ಬೀರುವರೊ ಅವರಿಗೆ ಯೋಜನೆಯ ಸೌಲಭ್ಯಗಳು ಬೇಗ ದೊರೆತಿವೆ.

ನೇರಸಾಲದಲ್ಲಿಯೂ ಅಕ್ರಮ ನಿಗಮಗಳು

ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ನೇರ ಸಾಲ ಸೌಲಭ್ಯ ನೀಡುತ್ತಿವೆ.
ಕುರಿ ಕೋಳಿ ಮೇಕೆಗಳನ್ನು ಖರೀದಿಸಿ ಆರ್ಥಿಕ ಅಭಿವೃದ್ಧಿ ಆಗಬೇಕು ಎನ್ನುವುದು ಇದರ ಉದ್ದೇಶ. ರೂ. 40 ಸಾವಿರ ಸಾಲ ಮಂಜೂರಾದರೆ ★ 35 ಸಾವಿರವನ್ನು ಕುರಿ ಕೋಳಿ ಖರೀದಿಗೆ ಮತ್ತು 5 ಸಾವಿರ ವಿಮೆ ಮತ್ತು ಮೇವಿಗೆ ನೀಡಬೇಕು. ಆದರೆ ವಿಮೆ ಮತ್ತು ಮೇವಿಗೆ ನೀಡಬೇಕಾದ ರೂ. 5 ಸಾವಿರನ್ನು ನಿಗಮವು ಕೊಟ್ಟಿಲ್ಲ ಎಂದು ಕೆಲವು ಫಲಾನುಭವಿಗಳು ಲೋಕಾಯುಕ್ತ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಈ ಬಗ್ಗೆಯೂ ಲೋಕಾಯುಕ್ತ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮಳವಳ್ಳಿ ಜನರ ಭಾವೈಕ್ಯತೆ ಸಾರಿದ ಪಟ್ಟಲದಮ್ಮ ಸಿಡಿಹಬ್ಬ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಳವಳ್ಳಿ

ಮಳವಳ್ಳಿ ಜನರ ಭಾವೈಕ್ಯತೆಯ ಸಂಕೇತವಾಗಿ ಪಟ್ಟಣದ ಎಲ್ಲ ಸಮುದಾಯದವರು ಜಾತ್ಯತೀತವಾಗಿ ಆಚರಿಸುವ ಗ್ರಾಮದೇವತೆ ಪಟ್ಟಲದಮ್ಮನ ಸಿಡಿಹಬ್ಬಕ್ಕೆ ಅದ್ಧೂರಿ ಚಾಲನೆ ದೊರೆಯಿತು. ಪಟ್ಟಣದ ಸುಲ್ತಾನ್ ರಸ್ತೆಯ ವಳಗೆರೆ ಹುಚ್ಚಮ್ಮ, ಪಟ್ಟಲದಮ್ಮ ದೇವಸ್ಥಾನಗಳಲ್ಲಿ ಶುಕ್ರವಾರ ಬೆಳಿಗ್ಗೆಯಿಂದಲೇ ದೇವರಿಗೆ ವಿವಿಧ ಹೋಮ- ಹವನ ಮತ್ತು ಅಭಿಷೇಕ ನಡೆದವು.
ಅರ್ಚಕರು ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ವಿವಿಧ ಬಗೆಯ ಹೂವುಗಳಿಂದ ದೇವರ ಮೂರ್ತಿ ಅಲಂಕರಿಸಲಾಗಿತ್ತು. ಸಾವಿರಾರು ಮಹಿಳೆಯರು ತಂಬಿಟ್ಟಿನ ಆರತಿಯೊಂದಿಗೆ ಸರದಿ ಸಾಲಿನಲ್ಲಿ ತೆರಳಿ ಚಿಕ್ಕಮ್ಮ ಮತ್ತು ದೊಡ್ಡಮ್ಮ ತಾಯಿ ದೇವರಿಗೆ ಪೂಜೆ ಸಲ್ಲಿಸಿ ದರ್ಶನ ಪಡೆದುಕೊಂಡರು.ಪಟ್ಟಣದ ಹಾಗೂ ಆಕ್ಕಪಕ್ಕಗಳ ಹತ್ತಾರು ಗ್ರಾಮಗಳಲ್ಲಿ ಆಚರಿಸುವ ಸಿಡಿಹಬ್ಬದ ಪ್ರಯುಕ್ತ ದೇವಸ್ಥಾನದ ಆವರಣವನ್ನು ವಿಶೇಷವಾಗಿ ಹಸಿರು ತೋರಣ ಹಾಗೂ ವಿದ್ಯುತ್ ದೀಪಾಗಳಿಂದ ಸಿಂಗರಿಸಲಾಗಿತ್ತು. ಪಟ್ಟಣದ ಬಹುತೇಕ ರಸ್ತೆಗಳಲ್ಲಿ ಅಳವಡಿಸಿದ ಮತ್ತು ಪ್ರಮುಖವಾಗಿ ಪಟ್ಟಣದ ಪ್ರವೇಶ ದ್ವಾರ ಹಾಗೂ ಅನಂತ್ ರಾಂ ವೃತ್ತದ ಬಳಿಯ ಹೂವಿನ ಮಾದರಿ ವಿದ್ಯುತ್ ದೀಪಾಲಂಕಾರ ಲಕ್ಷಾಂತರ ಮಂದಿಯ ಕಣ್ಮನ ಸೆಳೆಯಿತು. ಸಂಪ್ರದಾಯದಂತೆ ಶುಕ್ರವಾರ ಸಂಜೆ ಪಟ್ಟಣದ ಪೇಟೆ ಬೀದಿ, ತಾಲ್ಲೂಕಿನ ತಮ್ಮಡ ಹಳ್ಳಿ, ಕ್ಯಾತೇಗೌಡನ ದೊಡ್ಡಿ, ಮಾರೇಹಳ್ಳಿ ಅಂಬೇದೊಡ್ಡಿ, ನಿಡಘಟ್ಟ ಸೇರಿದಂತೆ ವಿವಿಧ ಗ್ರಾಮಗಳ ನೂರಾರು ರೈತರು ತಮ್ಮ ರಾಸುಗಳಿಗೆ ಅಲಂಕಾರ ಮಾಡಿಕೊಂಡು ಶನಿವಾರ ಬೆಳಿಗ್ಗೆ ನಡೆಯುವ ಕೊಂಡೋತ್ಸವಕ್ಕೆ ತಮಟೆ ಹಾಗೂ ಮಂಗಳವಾದ್ಯ ಗಳೊಂದಿಗೆ ಸೌದೆ ತೆಗೆದುಕೊಂಡರು.

ಸತ್ಯಕ್ಕೆ ಸಂದ ಜಯ ಎಂದ ಕಾಂಗ್ರೇಸ್, ಮೈಸೂರಿನಲ್ಲಿ ಸಂಭ್ರಮಾಚರಣೆ

• ಉದಯವಾಹಿನಿ, ಮೈಸೂರ

ಮುಡಾ ಪ್ರಕರಣದ ತನಿಖೆಯನ್ನು ಸಿಬಿಐಗೆ ವರ್ಗಾಯಿಸಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದ್ದು, ಪ್ರಕರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ತೀರ್ಪು ಬಂದಿರುವ ಹಿನ್ನೆಲೆಯಲ್ಲಿ ಸತ್ಯಮೇವ ಜಯತೆ ಎಂದು ಕಾಂಗ್ರೇಸ್ ಹೇಳಿದೆ. 'ಸತ್ಯಮೇವ ಜಯತೆ' ಫಲಕಗಳನ್ನು ಹಿಡಿದ ಕಾಂಗ್ರೇಸ್ ಕಾರ್ಯಕರ್ತರು ಮೈಸೂರಿನಲ್ಲಿ ಪಕ್ಷದ ಕಚೇರಿಯ ಬಳಿ ಮೆರವಣಿಗೆ ನಡೆಸಿ, ಸಿಎಂ ಸಿದ್ದರಾಮಯ್ಯ ಅವರನ್ನು ಬೆಂಬಲಿಸಿ ಘೋಷಣೆಗಳನ್ನು ಕೂಗಿದರು. ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ಅವರು ಮಾತನಾಡಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ಪ್ರಕರಣ ಸಂಬಂಧ ನಾವು ನಿರೀಕ್ಷೆ ಮಾಡಿದಂತೆ ಸತ್ಯದ ಪರ ತೀರ್ಪು ಬಂದಿದೆ. ಸತ್ಯಕ್ಕೆ ಜಯ ಸಿಕ್ಕೇ ಸಿಗುತ್ತದೆ ಎನ್ನುವುದಕ್ಕೆ ನ್ಯಾಯಾಲಯದ ತೀರ್ಪು ಸಾಕ್ಷಿಯಾಗಿದೆ ಎಂದು ಹೇಳಿದರು.

ಮಧ್ಯವರ್ತಿಗಳ ಮೂಲಕ ಸರ್ಕಾರ ಬೀಳಿಸುವ ಪ್ರಯತ್ನ ಮಾಡಲಾಗಿತ್ತು. ಜೊತೆಗೆ ಮುಡಾ ಹಗರಣ ಮುಂದಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿನಾಕಾರಣ ಟೀಕಿಸುವ ಜತೆಗೆ ಅವರನ್ನು ಹಗರಣದಲ್ಲಿ ಸಿಲುಕಿಸಲು ಮುಂದಾಗಿದ್ದ ಬಿಜೆಪಿ-ಜೆಡಿಎಸ್ ನಾಯಕರಿಗೆ ಮುಖಭಂಗವಾಗಿದೆ ಎಂದು ತಿಳಿಸಿದರು. ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಹಸ್ತಕ್ಷೇಪ ಇಲ್ಲ ಎಂಬುದು ನಮಗೆ ಗೊತ್ತಿತ್ತು. ನಮ್ಮ ನಿವೇಶನ ಕಿತ್ತುಕೊಂಡು ನಮಗೆ ಮೋಸ ಮಾಡುವ ಕೆಲಸ ಆಗಿತ್ತು. ಮಧ್ಯವರ್ತಿಗಳ ಮೂಲಕ ಸೈಟ್ ಕಿತ್ತುಕೊಳ್ಳಲು ಮುಂದಾಗಿದ್ದರು. ಸರ್ಕಾರ ಬೀಳಿಸಬೇಕು, ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸುವುದೇ ಇವರ ಉದ್ದೇಶವಾಗಿತ್ತು. ಸ್ನೇಹಮಯಿ ಕೃಷ್ಣ ಕೂಲಿಗಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಒಂದಿಷ್ಟು ಹಣ ಕೊಟ್ಟಿರುತ್ತಾರೆ. ಜೊತೆಗೆ ತನಿಖಾ ಸಂಸ್ಥೆಗೆ ಪ್ರಭಾವ ಬೀರಲು ಇಡಿ ಮುಂದಾಗಿದೆ. ಸಿದ್ದರಾಮಯ್ಯಗೆ ಕೆಟ್ಟ ಹೆಸರು ತರುವುದು ಇಡಿ ಉದ್ದೇಶ. ಇಡಿ ಅಧಿಕಾರಿಗಳು ಇಲ್ಲಿಗೆ ತನಿಖೆ ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿದರು. ಸ್ನೇಹಮಯಿ ಕೃಷ್ಣ ಮೇಲ್ ಮಾಡಿದ ತಕ್ಷಣ ಎಫ್ ಐಆರ್ ಮಾಡಲಾಗುತ್ತದೆ. ಒಂದು ತನಿಖಾ ಸಂಸ್ಥೆ ತನಿಖೆ ಮಾಡುವಾಗ ಮತ್ತೊಂದು ತನಿಖಾ ಸಂಸ್ಥೆ ತನಿಖೆ ಮಾಡಲು ಯಾವ ಕಾನೂನಿನಲ್ಲೂ ಅವಕಾಶ ಇಲ್ಲ. ಹೈಕೋರ್ಟ್‌ನಲ್ಲಿ ದೊಡ್ಡ ವಕೀಲರನ್ನು ಕರೆ ತಂದು ವಾದ ಮಾಡಿಸುತ್ತಾರೆ. ಅವರಿಗೆ ಫೀಸ್ ಕೊಡಲು ಹಣ ಎಲ್ಲಿಂದ ಬಂತು ಮುಂದಿನ ದಿನಗಳಲ್ಲಿ ಅವರು ಸುಪ್ರೀಂ ಕೋರ್ಟ್ ಮೊರೆ ಹೋದರೆ ಅಲ್ಲಿಯೂ ನಾವು ಹೋರಾಟ ಮಾಡುತ್ತೇವೆ ಎಂದರು.

ಉದಯವಾಹಿನಿ ಚಿತ್ರ

> ರಾಜ್ಯ ಕಾಂಗ್ರೇಸ್ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನಪರ ಆಡಳಿತ, ಜನಪ್ರಿಯತೆಯನ್ನು ಸಹಿಸದ ಬಿಜೆಪಿ - ಜೆಡಿಎಸ್ ಪಕ್ಷಗಳ ಪೂರ್ವಯೋಜಿತ ಷಡ್ಯಂತ್ರ ತನಿಖೆಯಿಂದ ಬಯಲಾಗಲಿದೆ ಎಂದು ಹೇಳಿದೆ.

> ಮುಡಾ ಮಾಜಿ ಅಧ್ಯಕ್ಷ ರಾಜೀವ್ ಅವರು ಮಾತನಾಡಿ, ಮುಡಾ ಮಂಡಳಿ ತೆಗೆದುಕೊಂಡ ನಿರ್ಧಾರವನ್ನು ಸಿಎಂ ನಿರ್ಧಾರ ಎಂದು ಬಿಂಬಿಸಲು ಪ್ರಯತ್ನಗಳು ನಡೆದಿವೆ ಎಂದು ಹೇಳಿದರು.

ಈಗಾಗಲೇ ಲೋಕಾಯುಕ್ತ ಸಂಸ್ಥೆ ತನಿಖೆ

ಈ ನಡುವೆ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೇಸ್, ವಿರೋಧ ಪಕ್ಷಗಳ ಸೇಡಿನ ರಾಜಕಾರಣಕ್ಕೆ ಉಚ್ಚ ನ್ಯಾಯಾಲಯ ತಕ್ಕ ಉತ್ತರ ನೀಡಿದೆ. ಈಗಾಗಲೇ ಲೋಕಾಯುಕ್ತ ಸಂಸ್ಥೆ ತನಿಖೆ ನಡೆಸುತ್ತಿರುವ ಪ್ರಕರಣವನ್ನು 'ಸಿಬಿಐ'ಗೆ ವಹಿಸುವಂತೆ ಕೋರಿದ ಅರ್ಜಿಯನ್ನು ನ್ಯಾಯಾಲಯ ತಿರಸ್ಕರಿಸುವ ಮೂಲಕ ಸಿಎಂ ಸಿದ್ದರಾಮಯ್ಯ ಅವರ ವಿರುದ್ಧದ ರಾಜಕೀಯ ಪಿತೂರಿಗೆ ಕೊನೆ ಹಾಡಿದೆ.

ವಿದ್ಯುತ್ ಸರಬರಾಜಿಗೆ ರೈತರಿಂದ ಒತ್ತಾಯ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಾಮರಾಜನಗರ

ಸಮರ್ಪಕವಾಗಿ ನಿತ್ಯ 7 ಗಂಟೆ ವಿದ್ಯುತ್ ಸರಬರಾಜು ಮಾಡಬೇಕೆಂದು ಒತ್ತಾಯಿಸಿ ತಾಲ್ಲೂಕಿನ ಪುಣಜನೂರು ಗ್ರಾ.ಪಂ. ವ್ಯಾಪ್ತಿಗೆ ಸೇರಿದ ಪುಣಜನೂರು, ಕೋಳಿಪಾಳ್ಯ. ಮೂಕನಪಾಳ್ಯ ಸೇರಿದಂತೆ 26 ಗ್ರಾಮದ ರೈತರು ಹಾಗೂ ಗ್ರಾಮಸ್ಥರುಗಳು ಹರದನಹಳ್ಳಿ ಚೆಸ್ಕಾಂ ಉಪವಿಬಾಗ ಎಇಇ ದ್ರೂಫದ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಮಾತನಾಡಿದ ಗ್ರಾ,ಪಂ ಸದಸ್ಯ ಚಂದ್ರ ಶೇಖರ್ ಅವರು, ದಿನನಿತ್ಯ 7 ಗಂಟೆ ವಿದ್ಯುತ್ ಸರಬರಾಜು ಮಾಡದೆ ಇರುವುದರಿಂದ ರೈತರಿಗೆ ತೂಂದರೆಯಾಗುತ್ತಿದೆ, ಕತ್ತಲೆಯಲ್ಲಿ ಜಮೀನುಗಳಿಗೆ ತಿರಗಾಡಲು ಸಾಕಷ್ಟು ಸಮಸ್ಯೆ ಉಂಟಗುತಿದೆ, ಇದನ್ನು ಕೂಡಲೆ ಸಂಬಂದಪಟ್ಟ, ಅಧಿಕಾರಿಗಳು ಸ್ಥಳಕ್ಕೆ ಬೇಟಿ ನೀಡಿ ಸರಿಪಡಿಸಬೇಕೆಂದು ಒತ್ತಾಯಿಸಿದರು, ಚೆಸ್ಕಾಂ ಉಪವಿಭಾಗದ ಎಇಇ ದ್ರುಪದ್ ಅವರು ಮಾತನಾಡಿ ರೈತರು ಮತ್ತೆ ಕಛೇರಿಗೆ ಬಾರದಂತೆ ಪ್ರಾಮಾಣಿಕವಾಗಿ ನಿಮ್ಮ ಸಮಸ್ಯೆಯನ್ನು ಸರಿಪಡಿಸುತ್ತೇವೆ ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ರಂಗನಾಥ್, ಸ್ವಾಮಿನಾಥನ್, ನಂಜುಂಡನಾಯ್ಕ, ಬಸವರಾಜು, ಬಂಗಾರು, ನಟರಾಜು, ರಾಮಲಿಂಗನಾಯ್ಕ, ರಮೇಶ ನಾಯ್ಕ,ಎಸ್, ಮಹದೇವನಾಯ್ಜ, ಬಾಲಾಜಿ, ಗಂಗನಾಯ್ಕ, ಶ್ರೀಧರ ಸೇರಿದಂತೆ ರೈತರು ಮತ್ತು ಗ್ರಾಮಸ್ಥರು ಹಾಜರಿದ್ದರು.

> ಪುಣಜನೂರು ಗ್ರಾಮದಲ್ಲಿ 110 ರಿಂದ 120 ಬೋರ್ವೆಲ್ ಗಳಿದ್ದು ಸಮಯಕ್ಕೆ ಸರಿಯಾಗಿ ವಿದ್ಯುತ್ ಸರಬರಾಜು ಆಗದ ಕಾರಣ ಮತ್ತು ಆಗಾಗ ಲೈನ್‌ನಲ್ಲಿ ಪದೇ ಪದೇ ಅಡಚಣೆ ಉಂಟಾಗುತ್ತಿರುವ ಹಿನ್ನಲೆಯಲ್ಲಿ ರೈತರು ಜಮೀನಿನಲ್ಲಿ ಬೆಳೆ ಬೆಳೆಯಲು ಹಾಗೂ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ ಹಾಗಾಗಿ ತಕ್ಷಣ ಈ ಸಮಸ್ಯೆಗಳನ್ನು ನಿವಾರಿಸಿಕೊಡಬೇಕೆಂದು ರೈತರು ಮತ್ತು ಗ್ರಾಮಸ್ಥರು ಎಚ್ಚರಿಕೆ ನೀಡಿದರು,

ಕಾಲೇಜು ಆವರಣದಲ್ಲಿ ಹಿರಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ

• ಉದಯವಾಹಿನಿ, ರಾಮನಗರ

'ಮನುಷ್ಯನಿಗೆ ಶಿಕ್ಷಣದಷ್ಟೇ ನೈತಿಕತೆಯೂ ಅತಿ ಮುಖ್ಯ. ವಿದ್ಯಾರ್ಜನೆಯು ಗೌರವದ ಬದುಕಿಗೆ ದಾರಿ ಮಾಡಿಕೊಡುತ್ತದೆ. ನಮ್ಮ ಅರಿವನ್ನು ವಿಸ್ತರಿಸಿ ಸುಂದರ ಬದುಕು ಕಟ್ಟಿಕೊಳ್ಳಲು ನೆರವಾಗುತ್ತದೆ. ಹಾಗಾಗಿ, ವಿದ್ಯಾರ್ಥಿಗಳು ಶಿಕ್ಷಣದ ಮೂಲಕ ಉತ್ತಮ ಬದುಕು ರೂಪಿಸಿಕೊಳ್ಳಬೇಕು' ಎಂದು ಸಾಹಿತಿ ಡಾ.ವಿಜಯ್ ರಾಂಪುರ ಸಲಹೆ ನೀಡಿದರು.

ನಗರದ ನ್ಯೂ ಎಕ್ಸ್‌ಪರ್ಟ್ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಹಿರಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದ ಅಂಗವಾಗಿ ಏರ್ಪಡಿಸಿದ್ದ ಎಕ್ಸ್‌ಪರ್ಟ್ ಉತ್ಸವ ಉದ್ಘಾಟಿಸಿ ಮಾತನಾಡಿದ ಅವರು, 'ಪೋಷಕರು ಹಾಗೂ ಉಪನ್ಯಾಸಕರು ಇಟ್ಟಿರುವ ಅಭಿಮಾನವನ್ನು ವಿದ್ಯಾರ್ಥಿಗಳು ಉಳಿಸಿಕೊಳ್ಳಬೇಕು. ತಮ್ಮ ಕುಟುಂಬ ಹಾಗೂ ಓದಿದ ಕಾಲೇಜಿಗೆ ಉತ್ತಮ ಹೆಸರು ತಂದು ಕೊಡಬೇಕು' ಎಂದರು. ವಿದ್ಯಾರ್ಥಿಗಳು ಪರೀಕ್ಷೆಗೆ ಹಬ್ಬದಂತೆ ಸಜ್ಜಾಗುವ ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು. ಕಾಲೇಜಿನಲ್ಲೂ ಒತ್ತಡಮುಕ್ತ ವಾತಾವರಣ ಇರಬೇಕು.ಪರೀಕ್ಷೆಯನ್ನು ಉತ್ತಮವಾಗಿ ಎದುರಿಸಿ ಅತ್ಯುತ್ತಮ ಫಲಿತಾಂಶದೊಂದಿಗೆ ಪಾಸಾಗುವ ಮೂಲಕ, ಸಮಾಜದ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬೇಕು' ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಡಿ.ಆರ್. ರವಿಕುಮಾರ್, 'ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಹಾಗೂ ಪೋಷಕರು ಬಹುದೊಡ್ಡ ಆಶಯವನ್ನು ಈಡೇರಿಸುವ ದೃಷ್ಟಿಯಿಂದ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಎನ್‌ಎಸ್‌ಎಸ್, ಕ್ರೀಡೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಾಲೇಜಿನಲ್ಲಿ ನಿರಂತರವಾಗಿ ಆಯೋಜ

ಅಂತರಾಳದಿಂದ.. EDITORIAL

ಯುಜಿಸಿ ಕರಡು ನಿಯಮಗಳಿಗೆ ವಿರೋಧ:
ರಾಜ್ಯಗಳ ಅಧಿಕಾರ ಮೊಟಕು ಸಲ್ಲದು

ಉದಯವಾಹಿನಿ ಚಿತ್ರ

ವಿಶ್ವವಿದ್ಯಾಲಯಗಳ ಅನುದಾನ ಆಯೋಗವು (ಯುಜಿಸಿ) ಸಾರ್ವಜನಿಕರಿಂದ ಸಲಹೆ, ಸೂಚನೆ ಕೋರಿ ಈಚೆಗೆ ಪ್ರಕಟಿಸಿರುವ ಕರಡು ನಿಯಮಗಳ ಕುರಿತು ಭಾರಿ ಟೀಕೆ ವ್ಯಕ್ತವಾಗಿದೆ. ಈ ನಿಯಮಗಳು ವಿಶ್ವವಿದ್ಯಾಲಯಗಳ ಸ್ವಾಯತ್ತೆಗೆ, ರಾಜ್ಯಗಳ ಅಧಿಕಾರಕ್ಕೆ ಮತ್ತು ಒಕ್ಕೂಟ ವ್ಯವಸ್ಥೆಯ ತತ್ವಕ್ಕೆ ಅಪಾಯ ತಂದೊಡ್ಡುತ್ತವೆ ಎಂಬ ಆತಂಕವನ್ನು ವ್ಯಕ್ತಪಡಿಸಲಾಗಿದೆ. ಬಿಜೆಪಿಯನ್ನು ರಾಜಕೀಯವಾಗಿ ವಿರೋಧಿಸುವ ಪಕ್ಷಗಳ ಆಡಳಿತ ಇರುವ ಆರು ರಾಜ್ಯಗಳು ಒಂದಾಗಿ ನಿಯಮಗಳನ್ನು ವಿರೋಧಿಸಿವೆ. ನಿಯಮಗಳನ್ನು ಹಿಂಪಡೆಯಬೇಕು ಎಂದು ಅವು ಕೋರಿವೆ. ಕರ್ನಾಟಕ, ಹಿಮಾಚಲ ಪ್ರದೇಶ, ಜಾರ್ಖಂಡ್, ಕೇರಳ, ತಮಿಳುನಾಡು ಮತ್ತು ತೆಲಂಗಾಣ ರಾಜ್ಯಗಳ ಉನ್ನತ ಶಿಕ್ಷಣ ಸಚಿವರು ಈಚೆಗೆ ಬೆಂಗಳೂರಿನಲ್ಲಿ ಸಭೆ ಸೇರಿ, ನಿಯಮಗಳಿಗೆ ತಮ್ಮ ವಿರೋಧವನ್ನು ವಿವರಿಸುವ 15 ಅಂಶಗಳ ನಿರ್ಣಯವನ್ನು ಅಂಗೀಕರಿಸಿದ್ದಾರೆ. ಹಲವು ಸಂಗತಿಗಳ ಬಗ್ಗೆ ಅವರು ವಿರೋಧವನ್ನು ವ್ಯಕ್ತಪಡಿಸಿ ದ್ದಾರೆ. ವಿಶ್ವವಿದ್ಯಾಲಯಗಳಿಗೆ ಕುಲಪತಿಗಳ ನೇಮಕಕ್ಕೆ, ಬೋಧಕ ಸಿಬ್ಬಂದಿ ನೇಮಕಕ್ಕೆ ಅನುಸರಿಸುವ ವಿಧಾನ, ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸುವುದು. ಪರೀಕ್ಷೆ ನಡೆಸುವುದು ಹಾಗೂ ಪದವಿ ನೀಡುವುದಕ್ಕೆ ಸಂಬಂಧಿಸಿದ ಕರಡು ನಿಯಮಗಳಿಗೆ ವಿರೋಧ ದಾಖಲಾಗಿದೆ. ಈ ಸಭೆಯಲ್ಲಿ ಪಾಲ್ಗೊಳ್ಳದೇ ಇದ್ದ ಇತರ ಕೆಲವು ರಾಜ್ಯಗಳು ಕೂಡ ನಿಯಮಗಳನ್ನು ವಿರೋಧಿಸಿವೆ. ಪಶ್ಚಿಮ ಬಂಗಾಳ ಸರ್ಕಾರ ನೇಮಕ ಮಾಡಿದ ಸಮಿತಿಯೊಂದು ಈ ನಿಯಮಗಳನ್ನು ವಿರೋಧಿಸಿದೆ. 'ಇಂಡಿಯಾ' ಮೈತ್ರಿಕೂಟದ ರಾಜಕೀಯ ಪಕ್ಷಗಳು ಮಾತ್ರವಲ್ಲದೆ, ಬಿಜು ಜನತಾ ದಳ ಕೂಡ ನಿಯಮವನ್ನು ವಿರೋಧಿಸಿದೆ. ಎನ್‌ಡಿಎ ಮೈತ್ರಿಕೂಟದ ಕೆಲವು ಪಕ್ಷಗಳಿಗೆ ಈ ನಿಯಮಗಳು ಸಮಾಧಾನ ತಂದಿಲ್ಲ. ಅಂದರೆ ಕರಡು ನಿಯಮಗಳಿಗೆ ವಿರೋಧವು ವ್ಯಾಪಕವಾಗಿದೆ ಎಂದೇ ಅರ್ಥ. ಕುಲಪತಿಗಳು ಹಾಗೂ ಬೋಧಕ ಸಿಬ್ಬಂದಿಯ ನೇಮಕಕ್ಕೆ ಸಂಬಂಧಿಸಿದ ನಿಯಮಗಳಿಗೆ ತೀವ್ರ ವಿರೋಧ ಇದೆ. ಕುಲಪತಿಗಳನ್ನು ನೇಮಕ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಂದ ಕಿತ್ತು, ಆ ಅಧಿಕಾರವನ್ನು ರಾಜ್ಯಪಾಲರಿಗೆ ನೀಡುವ ಪ್ರಸ್ತಾವ ಈ ನಿಯಮಗಳಲ್ಲಿ ಇದೆ. ಇದರ ಅರ್ಥ, ಇವರ ನೇಮಕಾತಿ ಪ್ರಕ್ರಿಯೆಯಲ್ಲಿ ಕೇಂದ್ರ ಸರ್ಕಾರಕ್ಕೆ ಪೂರ್ಣ ಅಧಿಕಾರ ಇರುತ್ತದೆ. ನಿಯಮಗಳು ಜಾರಿಗೆ ಬಂದರೆ, ವಿಶ್ವವಿದ್ಯಾಲಯಗಳ ಆಡಳಿತವು ಕೇಂದ್ರದ ಕೈಸೇರುತ್ತದೆ. ರಾಜ್ಯಗಳ ಮಟ್ಟದಲ್ಲಿ ವಿಶ್ವವಿದ್ಯಾಲಯಗಳನ್ನು ಪ್ರತ್ಯೇಕ ಶಾಸನ ರೂಪಿಸಿ ಸ್ಥಾಪಿಸಲಾಗಿರುತ್ತದೆ, ಆ ವಿಶ್ವವಿದ್ಯಾಲಯಗಳಿಗೆ ರಾಜ್ಯದ ಬೊಕ್ಕಸದಿಂದ ಅನುದಾನ ಸಿಗುತ್ತಿರುತ್ತದೆ. ಅಲ್ಲಿನ ಮೂಲಸೌಕರ್ಯವನ್ನು ರಾಜ್ಯ ಸರ್ಕಾರ ಒದಗಿಸಿರುತ್ತದೆ. ಹೀಗಿರುವಾಗ ಇಂತಹ ವಿಶ್ವವಿದ್ಯಾಲಯಗಳ ಆಡಳಿತವನ್ನು ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ ವರ್ಗಾಯಿಸುವಂತಹ ನಿಯಮಗಳನ್ನು ಯುಜಿಸಿ ರೂಪಿಸುವುದು ಸರಿಯಲ್ಲ. ವಿಶ್ವವಿದ್ಯಾಲಯ ಗಳ ನಡುವೆ ಸಮನ್ವಯ ಸಾಧಿಸುವ ಹಾಗೂ ವಿಶ್ವವಿದ್ಯಾಲಯಗಳ ಗುಣಮಟ್ಟವನ್ನು ನಿರ್ಧರಿಸುವ ಅಧಿಕಾರವು ಯುಜಿಸಿಗೆ ಇದೆ. ಆದರೆ ವಿಶ್ವವಿದ್ಯಾಲಯಗಳನ್ನು ಯಾರು ಮುನ್ನಡೆಸಬೇಕು ಎಂಬುದನ್ನು ತೀರ್ಮಾನಿಸುವ ಅಧಿಕಾರ ಅದಕ್ಕೆ ಇಲ್ಲ.

ಯುಜಿಸಿಯ ಈ ಕರಡು ನಿಯಮಗಳು ಸಂವಿಧಾನ ಹೇಳಿರುವ ಒಕ್ಕೂಟ ವ್ಯವಸ್ಥೆಯ ಸ್ವರೂಪಕ್ಕೆ ಕೂಡ ಧಕ್ಕೆ ತರುವಂತಿವೆ. ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿದೆ. ಶಿಕ್ಷಣದ ವಿಚಾರದಲ್ಲಿ ರಾಜ್ಯಗಳಿಗೂ ಕಾನೂನುಬದ್ಧವಾದ ಹಕ್ಕುಗಳು, ಅಧಿಕಾರ ಇವೆ. ಆ ಹಕ್ಕುಗಳು ಮತ್ತು ಅಧಿಕಾರವನ್ನು ಮೊಟಕುಗೊಳಿಸುವುದು ಸರಿಯಲ್ಲ. ರಾಜ್ಯಗಳು ರೂಪಿಸಿದ ಶಾಸನಗಳಿಗಿಂತ ಯುಜಿಸಿ ರೂಪಿಸಿದ ನಿಯಮಗಳಿಗೆ ಹೆಚ್ಚಿನ ಮಹತ್ವ ನೀಡಲು ಆಗುವುದಿಲ್ಲ. ನಿಯಮಗಳಲ್ಲಿ ಇರುವ ಇತರ ಹಲವು ಪ್ರಸ್ತಾವಗಳಿಗೂ ರಾಜ್ಯಗಳು ವಿರೋಧ ವ್ಯಕ್ತಪಡಿಸಿವೆ.

ಬೋಧಕ ಸಿಬ್ಬಂದಿಯ ನೇಮಕಕ್ಕೆ ಇರುವ ನಿಯಮಗಳನ್ನು ಬದಲಾಯಿಸಲಾಗಿದೆ. ನೇಮಕಕ್ಕೆ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣ ಆಗಬೇಕು ಎಂಬ ಅಗತ್ಯ ಇರುವುದಿಲ್ಲ. ಬಡ್ತಿ ಕುರಿತ ನಿಯಮಗಳನ್ನು ಬದಲಾಯಿಸುವ ಪ್ರಸ್ತಾವ ಇದೆ. ಉದ್ಯಮಗಳಲ್ಲಿನ ವೃತ್ತಿಪರರನ್ನು ಹಾಗೂ ಸಾರ್ವಜನಿಕ ಆಡಳಿತದಲ್ಲಿ ಅನುಭವ ಹೊಂದಿರುವವರನ್ನು ಕುಲಪತಿ ಮತ್ತು ಬೋಧಕರನ್ನಾಗಿ ನೇಮಕ ಮಾಡಲು ಅವಕಾಶ ಇರುತ್ತದೆ. ಕರಡು ನಿಯಮಗಳು ಅನುಷ್ಠಾನಕ್ಕೆ ಬಂದಲ್ಲಿ ವಿಶ್ವವಿದ್ಯಾಲಯಗಳ ವ್ಯವಸ್ಥೆಯಲ್ಲಿ ವ್ಯಾಪಕ ಬದಲಾವಣೆಗಳು ಬರಲಿವೆ. ಆದರೆ ಈ ನಿಯಮಗಳನ್ನು ರಾಜ್ಯಗಳ ಮೇಲೆ ಬಲವಂತದಿಂದ ಹೇರುವುದು ಸರಿಯಲ್ಲ.

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ನನ್ನನ್ನು ನೀನು ಅರಿಯೆ. ರಾಮನು ರಾಜ್ಯಕ್ಕೆ ಅರಸಾಗಿ ನಿನ್ನ ಮಗನಾದ ಭರತನನ್ನು ರಾಜ್ಯದಿಂದ ತೊಲಗಿಸುವನು. ಅರಸನಿಗೆ ಬಹುಮಂದಿ ಮಕ್ಕಳಾದರೆ ಎಲ್ಲರೂ ರಾಜ್ಯಕ್ಕೆ ಒಡೆಯರಾಗಲಾರರು. ಲೋಕದಲ್ಲಿ ಬಹುಮಂದಿಗೆ ಅಧಿಪತ್ಯವನ್ನು ಕೊಡುವುದು ರಾಜನೀತಿಯಲ್ಲ, ಗುಣವಂತರಾದ ಮಕ್ಕಳು ಅನೇಕ ಮಂದಿ ಇದ್ದರೂ ಜೇಷ್ಠಪುತ್ರನಿಗೆ ಆಧಿಪತ್ಯವನ್ನು ಮಾಡುವರಲ್ಲದೆ ಎಲ್ಲರಿಗೂ ಆಧಿಪತ್ಯವನ್ನು ಕೊಡಲಾರರು. ದಶರಥರಾಯನು ರಾಮನಿಗೆ ಪಟ್ಟಾಭಿಷೇಕವನ್ನು ಮಾಡಿದರೆ ನಿನ್ನ ಮಗನಾದ ಭರತನಿಗೆ ರಾಜ್ಯಾಧಿಪತ್ಯವಿಲ್ಲ. ಆಗ ರಾಮನು ಆತನನ್ನು ದೇಶಾಂತರವನ್ನೈದಿಸುವನು. ಅದಲ್ಲದಿದ್ದರೆ ಲೋಕಾಂತರವನ್ನೈದಿಸುವನು. ನಿನ್ನ ಮಗನನ್ನು ಬಾಲಾವಸ್ಥೆಯಲ್ಲಿಯೇ ನೀನು ಮಾವನ ಮನೆಗೆ ಕಳುಹಿಸಿದೆ. ಲೋಕದಲ್ಲಿ ಸ್ಥಾವರಾದಿ ವೃಕ್ಷಗಳು ಮೊದಲಾಗಿ ಸಮೀಪದಲ್ಲಿದ್ದರೆ ಅನ್ಯೋನ್ಯವಾಗಿ ಕೂಡಿರುವುವು. ಲಕ್ಷ್ಮಣನು ಶ್ರೀರಾಮನಿಗೆ ಅನುಕೂಲನಾಗಿರುವ ಹಾಗೆ ಶತ್ರುಘ್ನನು ಭರತನಿಗೆ ಅನುಕೂಲನಾಗಿ ಆತನ ಸಂಗಡ ಆತನ ಸೋದರಮಾವನ ಮನೆಗೆ ಹೋದನು. ಲೋಕದಲ್ಲಿ ಕಿರಾತರು ಮೊದಲಾಗಿ ಛೇದಿಸಲು ಯೋಗ್ಯವಾದ ವೃಕ್ಷವಾದರೂ ಸಮೀಪದಲ್ಲಿದ್ದರೆ ಅದನ್ನು ಹುಲ್ಲುಗಳಿಂದ ಮರೆಯಿಸಿ ರಕ್ಷಿಸುವರು. ಆದ್ದರಿಂದ ಶ್ರೀರಾಮನು ತನ್ನ ಸಮೀಪದಲ್ಲಿರುವ ಲಕ್ಷ್ಮಣನಿಗೆ ರಕ್ಷಕನಾಗಿಯೂ ಲಕ್ಷ್ಮಣನು ಶ್ರೀರಾಮನಿಗೆ ರಕ್ಷಕನಾಗಿಯೂ ಇರುವರು. ಈ ರೀತಿಯಲ್ಲಿ ಅವರು ಅನ್ಯೋನ್ಯರಕ್ಷಕರಾಗಿರುವುದರಿಂದ ರಾಮ ಲಕ್ಷ್ಮಣರು ಅಶ್ವಿನೀದೇವತೆಗಳ ಮರ್ಯಾದೆಯಲ್ಲಿ ಮಹಾಪ್ರಸಿದ್ಧರಾಗಿರುವರು. ಶ್ರೀರಾಮನು ಲಕ್ಷ್ಮಣನಿಗೆ ಕಿಂಚಿತ್ತಾದರೂ ದ್ರೋಹವನ್ನೆಣಿಸನು : ದೂರದಲ್ಲಿರುವುದರಿಂದ ಭರತನಿಗೆ ದ್ರೋಹವನ್ನೆಣಿಸುವನು. ಇದಕ್ಕೆ ಸಂಶಯವಿಲ್ಲ. ನಿನ್ನ ಮಗನಾದ ಭರತನು ತನ್ನ ಮಾವನ ಮನೆ ಯಿಂದಲೇ ವನಾಂತರವನ್ನೈದುವುದು ಒಂದು ಬಗೆಯಲ್ಲಿ ಒಳ್ಳೆಯದು. ನಿನಗೆ ಹಿತವನ್ನು ಹೇಳಿದೆನು. ಕಾರ್ಯಹಾನಿಯಾದವನು ಕಾರ್ಯಸಿದ್ಧಿಯಾದವನ ವಶದಲ್ಲಿರಲಾರನು. ಆದಕಾರಣ ಭರತನು ರಾಜ್ಯಾಧಿಪತ್ಯವನ್ನು ಕಳೆದುಕೊಂಡು, ರಾಜ್ಯ ಪರಿಪಾಲನವನ್ನು ಮಾಡುವ ಶ್ರೀರಾಮನ ವಶದಲ್ಲಿರ ಲಾರನು. ಅರಣ್ಯದಲ್ಲಿ ಮಹಾಪ್ರಬಲವಾದ ಸಿಂಹರಾಜನಿಂದ ಅಟ್ಟಲ್ಪಟ್ಟ ಸಲಗನಂತೆ ಶ್ರೀರಾಮ ನಿಂದ ಪರಾಭವಿಸಲ್ಪಡುವನು. ಪೂರ್ವದಲ್ಲಿ ಕೌಸಲಾದೇವಿಯನ್ನು ನೀನು ಗರ್ವದಿಂದ ತಿರಸ್ಕಾರ ನನ್ನು ಮಾಡಿದೆ. ನಿನ್ನ ತಿರಸ್ಕಾರವನ್ನು ಸಹಿಸಿದ್ದ ಆ ದೇವಿಯು ನಿನ್ನಲ್ಲಿ ವೈರವನ್ನು ಬೆಳೆಸದೆ ಸುಮ್ಮನಿರುವವಳಲ್ಲ. ಯಾವಾಗ ಶ್ರೀರಾಮನು ಪರ್ವತ ಸಮುದ್ರ ನಗರಗಳಿಂದ ಸಹಿತವಾದ ಭೂಮಿಯನ್ನು ಆಳುವನೋ ಆಗ ನೀನು ಭರತಸಹಿತಳಾಗಿ ದುಃಖವನ್ನನುಭವಿಸಬೇಕಾಗುತ್ತದೆ. ಆದಕಾರಣ ನೀನು ನಿನ್ನ ಮಗನಿಗೆ ರಾಜ್ಯವೂ ಶ್ರೀರಾಮನಿಗೆ ದನವಾಸವೂ ಆಗಬೇಕೆಂದು ಯತ್ನ ಮಾಡು ಎಂದು ಹೇಳಿದಳು.

ಕೈಕೇಯಿ ದೇವಿಯು ಮಂಥರೆಯ ದುರ್ಬೋಧನೆ ಗೊಳಗಾದದ್ದು

ಹೀಗೆ ಮಂಥರೆಯ ಮಾತನ್ನು ಕೇಳುತ್ತಲಿದ್ದ ಕೈಕೇಯಾದೇವಿಯು ಕೋಪಾಗ್ನಿಯಿಂದ ಜ್ವಲಿಸುತ್ತ ಬಿಸುಸುಯ್ದು ಎಲೇ ಮಂಥರೆ, ನಾನು ನಿನ್ನ ಮಾತನ್ನು ಮೀರುವವಳಲ್ಲ.

ಮುಂದುವರಿಯುವುದು...

ನಾನಾಗಲಾರೆ ಬುದ್ಧ

• ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಶ್ರೀಮತಿ ಸುಮಲತಾ ಕಳಕಪ್ಪ ಗಡಿಯಪ್ಪನವರ ಮುದ್ದೇಬಿಹಾಳ ತಾಲ್ಲೂಕಿನ ತಾರನಾಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕವನ ರಚನೆ, ಮಕ್ಕಳ ಕಿರು ನಾಟಕ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಕವಿಯಿತ್ರಿ ಅನೇಕ ಕವಿ ಗೋಷ್ಠಿಗಳಲ್ಲಿ ಭಾಗಿಯಾಗಿ ಕ್ರಿಯಾಶೀಲ ಕವಯಿತ್ರಿಯಾದ ಇವರಿಗೆ ಅನೇಕ ಪ್ರಶಸ್ತಿಗಳು ಸಂದಿವೆ. ಇವರ ಚೊಚ್ಚಲ ಕೃತಿ ನಾನಾಗಲಾರೆ ಬುದ್ಧ ಎಂಬ ಕವನ ಸಂಕಲನವನ್ನು ಸಾಹಿತ್ಯಲೋಕಕ್ಕೆ ಅರ್ಪಿಸಲು ಸಿದ್ದರಾಗಿದ್ದಾರೆ ,ಸಂತೋಷದ ಸಂಗತಿ.

ಶಿಕ್ಷಕ ವೃತ್ತಿಯನ್ನು ನಿಭಾಯಿಸುತ್ತಿರುವ ಇವರು ತಮ್ಮ ವೃತ್ತಿ ಧರ್ಮದಲ್ಲಿ, ಈ ನಾಡು ಕಂಡ, ಮಹಿಳೆಯರಿಗಾಗಿ ,ಶ್ರಮಿಸಿದ ಸಾವಿತ್ರಿಬಾಯಿ ಫುಲೆ ಅವರನ್ನು ಸ್ಮರಿಸುತ್ತಾರೆ. ಸಾವಿತ್ರಿಬಾಯಿ ಫುಲೆಯವರ ಸಾಧನೆ ಅಪಾರವಾಗಿರುವಂತದ್ದು. ತಮ್ಮ ಬದುಕಿನ ಉದ್ದಕ್ಕೂ ಅನೇಕ ನೋವುಗಳಿಗೆ ಒಳಗಾದವರು, ಇಂತಹ ಬದುಕಿನ ಏರಿಳಿತದಲ್ಲೂ ಯಾರಿಗೂ ಹೆದರದೆ ಈಡೀ ಸಮಾಜವನ್ನು ಎದುರು ಹಾಕಿಕೊಂಡು ಹೆಣ್ಣುಮಕ್ಕಳ ಶಿಕ್ಷಣದ ಹಕ್ಕಿಗಾಗಿ ಹೋರಾಡಿದ ಮಹಾತಾಯಿ. ಅಂತಲೇ ಎಲ್ಲ ಹೆಣ್ಣು ಸಂಕುಲ ಅಕ್ಷರ ಕಲಿಯುವಂತಾಗಿದ್ದು ಸುಳ್ಳಲ್ಲ. ಸಾವಿತ್ರಿಬಾಯಿ ಫುಲೆಯು ಎಲ್ಲರಲ್ಲೂ ಛಲ, ಬಲ ತುಂಬಿದ ಛಲಗಾರ್ತಿ, ಆಕೆಯ ಬದುಕಿನ ಬಗ್ಗೆ ಅರಿತುಕೊಂಡ ಸುಮಲತಾ ಗಡಿಯಪ್ಪನವರ ತಮ್ಮ ಕವಿತೆಯಲ್ಲಿ ಆಕೆಯ ಹೋರಾಟದ ಬದುಕನ್ನು ನೆನೆಕೆ ರೂಪದಲ್ಲಿ ಹೀಗೆ ಕಾವ್ಯವನ್ನು ಕಟ್ಟಲು ಹೊರಡುತ್ತಾರೆ. ನಿನ್ನಂತೆ ಆತ್ಮ ಬಲ ಅನುಗ್ರಹಿಸು, ನಾವೆಲ್ಲ ಮಕ್ಕಳ ಶಿಕ್ಷಣಕ್ಕಾಗಿ ನಮ್ಮನ್ನು ಮುಡುಪಾಗಿಡುವೆವು ,ನಮ್ಮ ಬದುಕೆಲ್ಲ ಹೀಗೆ ಎಂದು ಹೇಳುತ್ತಾ ತಮ್ಮ ವೃತ್ತಿ ಧರ್ಮಕ್ಕೆ ಮೆರಗನ್ನು ತಂದು ಕೊಡುತ್ತಾರೆ.

ಬುದ್ಧ ಜಗತ್ತಿನ ಮಹಾ ಬೆಳಕು.ಕರುಣೆ, ಶೀಲ, ಪ್ರಜ್ಞೆಯನ್ನು ಜಗತ್ತಿಗೆ ಬೋಧಿಸಿದರು, ಮೈತ್ರಿಭಾವವನ್ನು ಸಾರಿದರು. ಇಷ್ಟೆಲ್ಲ ಬೋಧಿಸಿದ ಬುದ್ಧ ನಡುರಾತ್ರಿ ಎದ್ದು ಹೋದುದರ ಬಗ್ಗೆ ಕವಿಯಿತ್ರಿಗೆ ಪ್ರಶ್ನೆಯಾಗಿ ಕಾಡಿದೆ. ಅಂತೇಲೆ ತನಗರಿವಿಲ್ಲದಂತೆ ಯಶೋಧರೆಯನ್ನು ಮತ್ತು ರಾಹುಲನನ್ನು ಒಂಟಿಯಾಗಿ ಪರಿತಪಿಸಿದುದರ ಬಗ್ಗೆ ಕವಿಯಿತ್ರಿಗೆ ಆಕ್ಷೇಪವಿದೆ. ಇಂತಹ ಆಕ್ಷೇಪಗಳು ಇಂದು ನೆನ್ನೆಯದಲ್ಲ.ಮಹಿಳಾ ಸಾಹಿತ್ಯ ಬೆಳೆಯುತ್ತಾ ಬೆಳೆಯುತ್ತಾ ಸಾಗಿದಂತೆ ತನ್ನ ವಿಚಾರ ಲಹರಿಯ ಮಗ್ಗಲನ್ನು ಬದಲಾಯಿಸಿದ್ದುಂಟು. ಮಹಿಳಾ ಲೋಕದ ಜ್ಞಾನ ಹೆಚ್ಚಾದಂತೆ ಯಶೋಧರೆಯ ಕುರಿತು ಮಹಿಳಾ ಸಾಹಿತ್ಯದಲ್ಲಿ ಅನೇಕ ಚರ್ಚೆಗಳು ಆಗುತ್ತಲೆ ಬಂದಿವೆ.ಬುದ್ದನನ್ನು ಮತ್ತು ಯಶೋಧರೆಯನ್ನು ಒರೆಗೆ ಹಚ್ಚಿ ನೋಡಿದಾಗ ಯಶೋಧರೆ ಮಾಡಿದ ತಪ್ಪೇನು ಎನ್ನುವ ಪ್ರಶ್ನೆಯಂತೂ ಕಾಡದಿರಲಾರದು.



ಮತ್ತೊಂದು ಕಡೆ ನೋಡಿದಾಗ ಯಶೋಧರೆಯ ತ್ಯಾಗದಿಂದ ನಾವೆಲ್ಲ ಬುದ್ದನನ್ನು ಕಂಡಿರುವಂತದ್ದು. ಯಶೋಧರೆ ಸ್ವಾರ್ಥವನ್ನು ಮೆರೆದಿದ್ದರೆ ಬುದ್ಧನನ್ನು ಸಿದ್ಧಾರ್ಥ ಗೌತಮನಾಗಿ, ಒಬ್ಬ ರಾಜನಾಗಿ ಮಾತ್ರ ಈ ಜಗತ್ತು ಕಾಣುತ್ತಿತ್ತು. ಆದರೆ ಯಶೋಧರೆಯ ಒಂಟಿ ಬದುಕಿನ ಬಗ್ಗೆ ಮಾತ್ರ ಸುಮಲತಾ ಅವರ ಪ್ರಶ್ನೆಯಾಗಿದೆ.ಆ ಕಾರಣಕ್ಕೆ ಇಲ್ಲಿ ನಾನಾಗಲಾರೆ ಬುದ್ಧ ಕವಿತೆಯಲ್ಲಿ ಹೀಗೆ ತಮ್ಮ ಹಪಹಪಿಯನ್ನು ಮುಂದಿಡುತ್ತಾರೆ.

ನಿನೇನೋ ಜ್ಞಾನೋದಯವಾಗಿ ಜಗಕ್ಕೆ ಬುದ್ಧನಾಗಿ ಬಿಟ್ಟೆ ನೀನಿಲ್ಲದೆ ಯಶೋದೆಯನ್ನು ಅರಮನೆ ವೈಭೋಗದಲ್ಲೂ ಕೃಶವಾಗಿ ನರಳಿಸಿ ಬಿಟ್ಟೆ.

ಗಂಡನಿದ್ದರೂ ಒಂಟಿಯಾಗಿ ಬಯಕೆಗಳ ಕೊಂದು ಬದುಕಿದಳು, ತನ್ನವರನ್ನು ಬಿಟ್ಟು ಬುದ್ದನನ್ನು ನಂಬಿ ಬಂದ ತಪ್ಪಿಗೆ ಈಡೀ ಜೀವನ ಪರಿತಪಿಸಿದಳು ಎಂದು ಯಶೋಧರೆಯ ಜೀವನದ ದುರಂತ ಕಥೆಯನ್ನು ಆಕೆಯ ಹಳಿಕೆಯನ್ನು ಇಲ್ಲಿ ತೆರೆದಿಡುತ್ತಾಳೆ. ನಂಬಿ ಬಂದ ಹೆಂಡತಿಗೆ ಕೊಟ್ಟ ನ್ಯಾಯ ಯಾವುದು ಎಂಬಿತ್ಯಾದಿ ಪ್ರಶ್ನೆಗಳ ಸುರಿಮಳೆ ಸುರಿಸುತ್ತಾಳೆ ಕವಿಯಿತ್ರಿ. ಅನಾದಿಕಾಲದಿಂದಲೂ ಹೆಣ್ಣನ್ನು ಕೆಳದರ್ಜೆಯವಳನ್ನಾಗಿ ಕಂಡ ಈ ಸಮಾಜ ಆಕೆಯ ಬರವಣಿಗೆಯನ್ನು ಕೂಡಾ ಅಡುಗೆ ಮನೆಗೆ ಸೀಮಿತಗೊಳಿಸಲಾಗಿತ್ತು. ಆದರೆ ಇಂದಿನ ಕಾಲಘಟ್ಟ ಸ್ವಲ್ಪ ಮಟ್ಟಿಗಾದರೂ ಬದಲಾಗಿದೆ.ಹೆಣ್ಣು ನೆಮ್ಮದಿಯ ಉಸಿರು ಬಿಡುವಂತಾಗಿದೆ .ಬದುಕು ಬರಹದ ಜೊತೆ ಜೊತೆಗೆ ತನ್ನ ಅಸ್ತಿತ್ವವನ್ನು ರೂಪಿಸಿಕೊಂಡಿದ್ದಾಳೆ. ಪುರುಷ ಪ್ರಧಾನತೆಯ ಈ ವ್ಯವಸ್ಥೆಯಲ್ಲಿ ಈಗಲೂ ಮೇಲದರ್ಜೆಯಲ್ಲಿ ಪುರುಷರೇ ಆಗಬೇಕೆಂಬ ಹಂಬಲಿಕೆ ಈ ಸಮಾಜದ್ದಾಗಿದೆ. ಅಂತಹ ನಿಲುವುಗಳಿಗೆ ಸೂಕ್ಷ್ಮವಾಗಿ ಪ್ರತಿರೋಧ ಒಡ್ಡುವ ಈ ಸಾಲುಗಳು ಹೆಣ್ಣಿನ ಒಡಲಾಳದ ತುಮುಲವನ್ನು ಹೀಗೆ ಹೇಳುತ್ತಾಳೆ. ಅಡುಗೆ ಮನೆಯಿಂದ ಅಂತರಿಕ್ಷದವರೆಗೆ ಅಂಗಳದ ರಂಗೋಲಿಯಿಂದ ಕಚೇರಿಯ ಕಡತಗಳವರೆಗೆ ಅವಳ ಕಾರ್ಯವೈಖರಿಗೆ ಪುರಸ್ಕಾರವಿದೆಯೇ? ಎಂಬ ಪ್ರಶ್ನೆಯನ್ನು ಎತ್ತುತ್ತಾರೆ. ಹೆಣ್ಣಿನ ದುಡಿಮೆಗೆ ಬೆಲೆಯುಂಟೆ ಎನ್ನುವ ಪ್ರಶ್ನೆ ಅವರನ್ನು ಕಾಡಿದ್ದು ಉಂಟು. ಪುರುಷ ಮತ್ತು ಮಹಿಳೆ ಎಂಬುದನ್ನು ಇಬ್ಬಗೆಯಾಗಿ ಖಂಡಿಸಿ ಸಮಾಜಕ್ಕೆ ಮೇಲು ಕೀಳುಗಳೆಂಬ ಮುಳ್ಳು ಬೇಳಿಯ ದಾಟಿ ಸಮಾನತೆಯ ಸೌಗಂಧವ ಎಲ್ಲೆಡೆ ಸೂಸಿ ಒಂದಾಗಿ ಚೆಂದಾಗಿ ಸಾಗೋಣ ಬನ್ನಿ ಬಾಳ ಪಥದಿ ಎಂದು ತಾರತಮ್ಯವನ್ನು ನಿರಾಕರಿಸುತ್ತಲೇ ಸುಗಮದ ಹಾದಿಯನ್ನು ತೋರಿಸುವ ಬಗೆಯನ್ನು ಮಾತನಾಡುತ್ತಾರೆ. ಅವ್ವನ ದುಡಿಮೆಗೆ ಮರುಗುತ್ತಾರೆ. ಅವಳ ಶ್ರಮಕ್ಕೆ ಏನೆಲ್ಲಾ ಕೊಡಬಹುದು ನಾವೆಲ್ಲ ಎಂಬ ವಿಚಾರವನ್ನು ಮುಂದಿಡುತ್ತಾರೆ .ಹೆಣ್ಣಾಗಿ ಹುಟ್ಟಿ ಹೆಣ್ಣಿನ ತುಡಿತಕ್ಕೆ ಮಿಡಿಯುವ ಕವಿಯಿತ್ರಿಯನ್ನು ನಾವಿಲ್ಲಿ ಕಾಣಬಹುದಾಗಿದೆ. ಹೆಣ್ಣು ಎಲ್ಲಾ ಕಾಲಕ್ಕೂ ಪರೀಕ್ಷೆಗೆ ಒಳಗಾದವಳು. ಮದುವೆಯಾದ ಹೊಸದರಲ್ಲಿ ಗಂಡನ ಮನೆಗೆ ಬಂದ ಹೆಣ್ಣಿನ ತುಮುಲವನ್ನು ಹೀಗೆ ಹೇಳುತ್ತಾರೆ. ಸಂಗಾತಿಯ ಸಾಲಾದ ನಿರೀಕ್ಷೆ ಅತ್ತೆಮಾವರ ಅಗಣಿತ ಅಪೇಕ್ಷೆ ಬಂಧುಗಳ ಅಂಕೆಮೀರಿದ ಪರೀಕ್ಷೆ ಎಲ್ಲದರ ನಡುವೆ ನನ್ನತನದ ಉಪೇಕ್ಷೆ, ಎಂದು ಸಂಸಾರದ ನೊಗಹೊತ್ತ ಹೆಣ್ಣಿನ ಬದುಕಿನ ಚಿತ್ರಣವನ್ನು

ದೆಹಲಿ ಗದ್ದುಗೆಗೆ ಬಿಜೆಪಿ: ವಿಜಯೋತ್ಸವ

• ಉದಯವಾಹಿನಿ ಮುದ್ದೇಬಿಹಾಳ

ಉದಯವಾಹಿನಿ ಚಿತ್ರ

ಪರಸ್ಪರ ಸಿಹಿ ತಿನ್ನಿಸಿ ಸಂಭ್ರಮ

ದೇಶದ ರಾಜದಾನಿ ದೆಹಲಿಯಲ್ಲಿ ಬಿಜೆಪಿ ಅಭೂತಪೂರ್ವ ಗೆಲುವನ್ನು ಸಾಧಿಸದ ಹಿನ್ನೆಲೆ ಮುದ್ದೇಬಿಹಾಳ ಬಿಜೆಪಿ ಮಂಡಲದಿಂದ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ವಿಜಯೋತ್ಸವ ಆಚರಿಸಿ ಪರಸ್ಪರ ಸಿಹಿ ತಿನ್ನಿಸಿ ಸಂಭ್ರಮಿಸಿದರು.

ಈ ವೇಳೆ ಪಕ್ಷದ ಮುಖಂಡ ಪ್ರಭು ಕಡಿ, ಮಂಡಲ ಅಧ್ಯಕ್ಷ ಜಗದೀಶ್ ಪಂಪಣ್ಣನವರ, ಲಕ್ಷ್ಮಣ ಬಿಜ್ಜೂರ ಮಾತನಾಡಿ ದೆಹಲಿಯಲ್ಲಿ 27 ವರ್ಷಗಳ ನಂತರ ಬಿಜೆಪಿಗೆ ಅಭೂತ 'ಪೂರ್ವ ಗೆಲುವು ಲಭಿಸಿದೆ. ಪ್ರಬುದ್ಧ ಮತದಾರರು ದೆಹಲಿ ಅಭಿವೃದ್ಧಿಯ ದೃಷ್ಟಿಯಿಂದ ಬಿಜೆಪಿಯನ್ನು ಗೆಲ್ಲಿಸಿದ್ದಾರೆ. ಮನೀಷ್ ಸಿಸೋಡಿಯಾ ಅವರೂ ಸೋಲುತ್ತಿದ್ದಾರೆ. ಲಿಕ್ಕರ್, ಶೀಶ್ ಮಹಲ್ ಹಗರಣದ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಆಪ್ ಬಣ್ಣ ಬಯಲಾಗಿದೆ. ಇನ್ನೂ ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷ ಸತತ 3ನೇ ಬಾರಿಗೆ ಶೂನ್ಯ ಸಂಪಾದನೆ ಮಾಡಿದೆ. ಲೋಕಸಭಾ ಚುನಾವಣೆಯಲ್ಲೂ ಅದು ಶೂನ್ಯ ಸಂಪಾದನೆ ಮಾಡಿತ್ತು. ಹರಿಯಾಣ, ಮಹಾರಾಷ್ಟ್ರದಲ್ಲೂ ಕಾಂಗ್ರೆಸ್ಸಿಗೆ ಮುಖಭಂಗ ಆಗಿತ್ತು ಎಂದರು.

ಸಂಗಮ್ಮ ದೇವರಳ್ಳಿ, ವಿಜಯಕುಮಾರ್ ಬಡಿಗೇರ ಮಾತನಾಡಿ ನರೇಂದ್ರ ಮೋದಿಯವರ ಕೈಯನ್ನು ಬಲಪಡಿಸಲು ಮತದಾರರು ಮತ್ತೊಮ್ಮೆ ನಮಗೆ ಆಶೀರ್ವಾದ ಮಾಡಿದ್ದಾರೆಂದರು. ವಿಜಯೋತ್ಸವದಲ್ಲಿ ಮಾಣಿಕಚಂದ ದಂಡಾವತಿ, ಶ್ರೀಶೈಲ ದೂಡಮನಿ, ರವೀಂದ್ರ ಬಿರಾದಾರ, ಹಣಮಂತ ನಲವಡೆ, ಬಸವರಾಜ ಗುಳಬಾಳ, ರಾಜು ಬಳ್ಳೊಳ್ಳಿ, ಪರಶುರಾಮ ನಾಲತವಾಡ, ನಾಗೇಶ ಕವಡಿಮಟ್ಟಿ, ಸಂಜಯ ಬಾಗೇವಾಡಿ, ವಿರೇಶ ಢವಳಗಿ, ಶೇಖರ ಢವಳಗಿ, ರಾಜಶೇಖರ ಮ್ಯಾಗೇರಿ, ಪ್ರೀತಿ ಕಂಬಾರ, ಪ್ರೇಮಾ ಕಂಬಾರ, ಗೌರಮ್ಮ ಹುನಗುಂದ, ಸೇರಿದಂತೆ ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು.

ಉಚಿತ ಹೊಲಿಗೆ ಯಂತ್ರದ ತರಬೇತಿ ನೊಂದಣಿ

• ಉದಯವಾಹಿನಿ ನವಲಗುಂದ


ಉದಯವಾಹಿನಿ ಚಿತ್ರ

ಪ್ರತಿಭಾವಂತ ನಿರುದ್ಯೋಗಿ ಮಹಿಳೆಯರಿಗೆ ಉದ್ಯೋಗಾವಕಾಶದ ಸಮರ್ಪಕ ಮಾಹಿತಿಯೇ ಇರುವುದಿಲ್ಲ. ಸಾಮರ್ಥ್ಯ ಹಾಗೂ ಜ್ಞಾನ ಇದ್ದರೂ ಕೂಡ ಪ್ರತಿಭೆಗೆ ತಕ್ಕ ಉದ್ಯೋಗ ಸಿಗದೇ ಇರುವುದರಿಂದ ಆರ್ಥಿಕವಾಗಿ ಹಿಂದುಳಿಯಲು ಕಾರಣವಾಗುತ್ತಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಎಸ್ ಪಿ ಪೂಜಾರ ಹೇಳಿದರು.

ಪುರಸಭೆಯಲ್ಲಿ ನಡೆದ ಹುಬ್ಬಳ್ಳಿಯ ಶಾಹಿ ಎಕ್ಸಪೋರ್ಟ್ ಪ್ರೈ.ಲಿಮಿಟೆಡ್ ಹಾಗೂ ನವಲಗುಂದ ಪುರಸಭೆ ಸಹಯೋಗದಲ್ಲಿ ಜರುಗಿದ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರದ ತರಬೇತಿ ನೋಂದಣಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು ಪುರಸಭೆ ಸಹಯೋಗದಲ್ಲಿ ಹುಬ್ಬಳ್ಳಿಯ ಶಾಹಿ ಎಕ್ಸಪೋರ್ಟ್ ಪ್ರೈ.ಲಿಮಿಟೆಡ್ ಪ್ರಯತ್ನದಿಂದ ಅನೇಕ ಮಹಿಳೆಯರಿಗೆ ಹೊಲಿಗೆ ತರಬೇತಿ ನೀಡಿ ಉದ್ಯೋಗ ನೀಡುವ ಕಾರ್ಯ ಶ್ಲಾಘನೀಯ ಎಂದರು.

ಶಾಹಿ ಎಕ್ಸ್ಪೋರ್ಟ್ ಸಂಸ್ಥೆಯ ವ್ಯವಸ್ಥಾಪಕರಾದ ದೇವರೆಡ್ಡಿ ಹರ್ಲಾಪುರ ಮಾತನಾಡಿ ಈಗಾಗಲೇ ನವಲಗುಂದದಿಂದ ನಮ್ಮ ಕಂಪನಿಯಲ್ಲಿ ತರಬೇತಿ ಪಡೆಯಲು 130 ಜನ ಮಹಿಳೆಯರು ನೋಂದಣಿ ಮಾಡಿದ್ದಾರೆ ಕಂಪನಿವತಿಯಿಂದ ಸುಮಾರು 500 ಮಹಿಳಾ ಅಭ್ಯರ್ಥಿಗಳಿಗೆ ಉದ್ಯೋಗವಕಾಶವನ್ನು ಕಲ್ಪಿಸಿಕೊಡಲು ನಿರ್ಧರಿಸಲಾಗಿದ್ದು ಇದರ ಅನುಸಾರವಾಗಿ ನವಲಗುಂದದಲ್ಲಿ ಉಚಿತ ಟೈಲರಿಂಗ್ ತರಬೇತಿ ಕೇಂದ್ರವನ್ನು ಸ್ಥಾಪಿಸಲು ಇಚ್ಛಿಸಿದ್ದು ಅದರ ಸದುಪಯೋಗವನ್ನು ಮಹಿಳೆಯರು ಪಡೆದುಕೊಳ್ಳಬೇಕೆಂದು ಹೇಳಿದರು.

ಪುರಸಭೆಯ ಸಮುದಾಯ ಸಂಘಟಿತರಾದ ಜಗದೀಶ ಹೂಗಾರ, ರವಿ ವಿಶ್ವಜ್ಞ, ಶಾಹಿ ಎಕ್ಸ್ ಪೋರ್ಟ್ ಸಂಸ್ಥೆಯ ಎಜಿಎಂ ಪಾಸ್ಕಲ್ ಲೋಪೆಜ್, ಉಪ ವ್ಯವಸ್ಥಾಪಕರಾದ ರೇಶ್ಮಾ ಶೆಟ್ಟಿ, ಕಲ್ಯಾಣಾಧಿಕಾರಿ ಜ್ಯೋತಿ, ಪ್ರಜ್ವಲ್ , ಮಂಜುನಾಥ ಸೇರಿ ಪುರಸಭೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಜಿಲ್ಲಾ ಪಂಚಾಯಿತಿ ವತಿಯಿಂದ ನಡೆದ ರಾಜ್ಯಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಉದ್ಘಾಟನೆ

ಹೊಸದಾಗಿ 15 ಸಾವಿರ ಶಿಕ್ಷಕರ ನೇಮಕಾತಿ: ಮಧು ಬಂಗಾರಪ್ಪ

• ಉದಯವಾಹಿನಿ ಚಿತ್ರದುರ್ಗ

ಉದಯವಾಹಿನಿ ಚಿತ್ರ

ನೇಮಕಾತಿ ಪ್ರಕ್ರಿಯೆಗೆ ಶೀಘ್ರ ಚಾಲನೆ

ರಾಜ್ಯದಲ್ಲಿ ಹೊಸದಾಗಿ 15 ಸಾವಿರ ಶಿಕ್ಷಕರ ನೇಮಕಕ್ಕೆ ಶೀಘ್ರ ಕ್ರಮ ಕೈಗೊಳ್ಳಲಾಗುವುದು. ಇದರ ಜೊತೆಗೆ ಅನುದಾನಿತ ಶಾಲೆಗಳಿಗೆ ಶಿಕ್ಷಕರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ದೊರೆಯಲಿದೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ನಗರದ ಮುರುಘರಾಜೇಂದ್ರ ಬೃಹನ್ಮಠದ ಅನುಭವ ಮಂಟಪದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ವತಿಯಿಂದ ನಡೆದ ರಾಜ್ಯಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು. 'ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಶಿಕ್ಷಕ ಹುದ್ದೆಗಳಲ್ಲಿ ಶೇ 80ರಷ್ಟು ಶಿಕ್ಷಕರನ್ನು ಶೀಘ್ರ ನೇಮಕಾತಿ ಮಾಡಿ. ಶಿಕ್ಷಣವನ್ನು ಮೇಲ್ದರ್ಜೆಗೆ ಕೊಂಡೊಯುವ ಕೆಲಸ ಮಾಡಲಾಗುವುದು. ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮಕ್ಕೆ ಸರ್ಕಾರದಿಂದ ಹೆಚ್ಚಿನ ಅನುದಾನ ಕೊಡುವುದಿಲ್ಲ. ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿದ್ದು, ಹೆಚ್ಚಿನ ಅನುದಾನಕ್ಕಾಗಿ ಪ್ರಸ್ತಾವ ಸಲ್ಲಿಸಲಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ದೊರೆಯುವ ಸಾಧ್ಯತೆ ಇದೆ' ಎಂದರು.

'ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ದೇಶದ, ರಾಜ್ಯದ ಸಾಂಸ್ಕೃತಿಕ ರಾಯಭಾರಿಗಳಾಗಿ ಕಲೆ, ಸಂಸ್ಕೃತಿ ಉಳಿಸುವ ಕೆಲಸ ಮಾಡಬೇಕು. ನಮ್ಮ ಶ್ರೀಮಂತ ಸಂಸ್ಕೃತಿಯ ಮುಂದಿನ ಪೀಳಿಗೆಗೆ ಕೊಂಡೊಯುವ ಕೆಲಸ ಮಾಡಬೇಕು.

ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮಗಳು ಇದಕ್ಕೆ ಸಹಕಾರಿಯಾಗಿವೆ' ಎಂದರು.

'ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮದಡಿ ಕ್ಲಸ್ಟರ್ ಮಟ್ಟ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾದ ಸುಮಾರು 1,200ಕ್ಕೂ ಹೆಚ್ಚು ಮಕ್ಕಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ಸಂತಸ ತಂದಿದೆ. ಶಿಕ್ಷಣ, ಕಲೆ, ಸಂಸ್ಕೃತಿ ನೆಂಟಸ್ತಿಕೆ ಇದೆ. ಶಿಕ್ಷಣದಿಂದ ಕಲೆ, ಸಂಸ್ಕೃತಿಯು ಬೆಳೆಯಲಿದೆ' ಎಂದು ಹೇಳಿದರು.

'ರಾಜ್ಯದ ವಿವಿಧ ಭಾಗಗಳಿಂದ ತಮ್ಮ ಪ್ರತಿಭೆ ಅನಾವರಣಗೊಳಿಸಲು ಕೋಟೆನಾಡು ಚಿತ್ರದುರ್ಗ ಜಿಲ್ಲೆಗೆ ಬಂದಿರುವುದು ಸಂತಸ ತಂದಿದೆ. ಮಕ್ಕಳು ತಮ್ಮ ಪ್ರತಿಭೆ ಪ್ರದರ್ಶಿಸಲು ಇಂತಹ ಕಾರ್ಯಕ್ರಮಗಳು ಉತ್ತಮ ವೇದಿಕೆಯಾಗಿವೆ' ಎಂದು ಶಾಸಕ ಬಿ.ಜಿ.ಗೋವಿಂದಪ್ಪ ಹೇಳಿದರು.

ಮುರುಘಾ ಮಠದ ಆಡಳಿತ ಮಂಡಳಿ ಸದಸ್ಯ ಬಸವಕುಮಾರ ಸ್ವಾಮೀಜಿ, ಪ್ರತಿಯೊಂದು ಮಗುವಿಗೆ ಸಾಂಸ್ಕೃತಿಕ ಜಗತ್ತು ಇದೆ. ಪ್ರತಿಭೆ ಅನಾವರಣ ನಮ್ಮೆಲ್ಲರ ಜವಾಬ್ದಾರಿ. ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯಾದರೆ ಉಳಿದ ಎಲ್ಲಾ ಕ್ಷೇತ್ರಗಳು ಸಹ ಸುಧಾರಣೆ ಆಗಲು ಸಾಧ್ಯವಾಗಲಿದೆ. ಪ್ರತಿಭಾವಂತರಿಗೆ ಅವಕಾಶ ಬೇಕು' ಎಂದರು.

ವಿಧಾನಪರಿಷತ್ ಸದಸ್ಯರಾದ ಕೆ.ಎಸ್.ನವೀನ್, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಂ.ಕೆ.ತಾಜ್‌ಪೀರ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಆರ್. ಶಿವಣ್ಣ, ಜಿಲ್ಲಾಧಿಕಾರಿ ಟಿ.ವೆಂಕಟೇಶ್, ಜಿಪಂ ಸಿಇಒ ಎಸ್.ಜೆ.ಸೋಮಶೇಖರ್, ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಎಎಸ್ಪಿ ಕುಮಾರಸ್ವಾಮಿ, ಡಿಡಿಪಿಯು ಪುಟ್ಟಸ್ವಾಮಿ, ಡಯಟ್ ಪ್ರಾಂಶುಪಾಲ ನಾಸಿರುದ್ದೀನ್ ಇದ್ದರು.

ಉಚಿತ ನೀಟ್ ಸಿಇಟಿ ತರಬೇತಿ: 'ದ್ವಿತೀಯ ಪಿಯು ಪೂರೈಸಿದ 25000 ವಿದ್ಯಾರ್ಥಿಗಳಿಗೆ ದೇಶದಲ್ಲಿಯೇ ಪ್ರಥಮ ಬಾರಿಗೆ ಉಚಿತವಾಗಿ ನೀಟ್ ಸಿಇಟಿ ಸೇರಿದಂತೆ ವೃತ್ತಿಪರ ಕೋರ್ಸ್ ಗಳಿಗೆ ತರಬೇತಿ ನೀಡುವ ಕಾರ್ಯಕ್ರಮವನ್ನು ಈಗಾಗಲೇ ಅನುಷ್ಠಾನಗೊಳಿಸಲಾಗಿದೆ. 89 ಹಾಗೂ 10ನೇ ತರಗತಿಯ ಮಕ್ಕಳಿಗೆ 'ಸ್ಕಿಲ್ ಆಟ್ ಸ್ಕೂಲ್ ಎಂಬ ಕಾರ್ಯಕ್ರಮವನ್ನು ಇದೇ ಮೊದಲ ಬಾರಿಗೆ ಆರಂಭಿಸಲಾಗುವುದು.
-ಮಧು ಬಂಗಾರಪ್ಪ , ಸಚಿವ

ವಿವಿಧತೆಯಲ್ಲಿ ಏಕತೆ ನಮ್ಮ ಸಂವಿಧಾನದ ವಿಶೇಷತೆ

ಮಕ್ಕಳ ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಉತ್ತಮ ವೇದಿಕೆಯಾಗಿದೆ. ಅನುದಾನಿತ ಶಾಲೆಗಳ ಹುದ್ದೆಗಳ ಭರ್ತಿಗೆ ಅಗತ್ಯ ಕ್ರಮ ವಹಿಸಲಾಗಿದೆ. ಒಪಿಎಸ್‌ಗೆ ಸಂಬಂಧಿಸಿದಂತೆ ಇತರೆ ರಾಜ್ಯಗಳಲ್ಲಿ ಅಳವಡಿಸಿಕೊಂಡಿರುವ ವಿಧಾನಗಳನ್ನು ಪರಿಶೀಲಿಸಿ ನಮ್ಮ ರಾಜ್ಯದಲ್ಲಿ ಜಾರಿಗೊಳಿಸಿ ಶಿಕ್ಷಕರ ನೆಮ್ಮದಿಯ ಜೀವನಕ್ಕೆ ಅವಕಾಶ ಮಾಡಿಕೊಡಲಾಗುವುದು.

• ಉದಯವಾಹಿನಿ, ಚಿಂಚೋಳಿ

ತೆಲಂಗಾಣ ರಾಜ್ಯದಲ್ಲಿ ಮಾದಿಗ ಸಮಾಜಕ್ಕೆ ಒಳಮೀಸಲಾತಿ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮ

ಉದಯವಾಹಿನಿ ಚಿತ್ರ

ಸಿದ್ದರಾಮಯ್ಯ ಆದೇಶ ನೀಡಬೇಕು

ಮಾದಿಗ ಸಮಾಜದ ಬಹುದಿನಗಳ ಬಹಳ ವರ್ಷಗಳ ಬೇಡಿಕೆಯಾದ ಎಬಿಸಿಡಿ ವರ್ಗೀಕರಣದ ಒಳ ಮೀಸಲಾತಿಯನ್ನು ತೆಲಂಗಾಣ ರಾಜ್ಯದ ಮುಖ್ಯಮಂತ್ರಿ ರೇವಂತರೆಡ್ಡಿ ಸರ್ಕಾರವು ಐತಿಹಾಸಿಕ ತೀರ್ಪು ನೀಡಿ ಜಾರಿಗೆ ತಂದಿರುವುದು ಅತ್ಯಂತ ಸಂತೋಷದ ವಿಷಯ ಸದಾ ತೆಲಂಗಾಣ ರಾಜ್ಯ ಸರ್ಕಾರಕ್ಕೆ ಅಭಾರಿಯಾಗಿರುತ್ತೇವೆ ಎಂದು ಮಾದಿಗ ಸಮಾಜದ ರಾಜ್ಯ ಮುಖಂಡ ಗೋಪಾಲರಾವ ಕಟ್ಟಿಮನಿ ಹರ್ಷ ವ್ಯಕ್ತಪಡಿಸಿದರು.

ಪಟ್ಟಣದ ಬಸ್ ನಿಲ್ದಾಣದ ಎದುರು ಮಾದಿಗ ಸಮಾಜದ ಹಿರಿಯ ಮುಖಂಡ ನೇತೃತ್ವದಲ್ಲಿ ತೆಲಂಗಾಣ ರಾಜ್ಯದಲ್ಲಿ ರಾಜ್ಯ ಸರ್ಕಾರವು ಮಾದಿಗ ಸಮಾಜಕ್ಕೆ ಪ್ರತಿಶತಃ 09ರಷ್ಟು ಒಳಮೀಸಲಾತಿ ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿ ಮಾತನಾಡಿದ ಅವರು, ಈಗಾಗಲೇ ಇತ್ತೀಚಿನ ದಿನಗಳಲ್ಲಿ ಸುಪ್ರೀಂ ಕೋರ್ಟ್ ಅನ್ನು ಒಳಮೀಸಲಾತಿ ನೀಡಲು ಆಯಾ ರಾಜ್ಯ ಸರ್ಕಾರ ನಿರ್ಣಯ ತೆಗೆದುಕೊಳ್ಳಬೇಕೆಂದು ಮಹತ್ವದ ಆದೇಶ ನೀಡಿದ ಹಿನ್ನಲೆ ತೆಲಂಗಾಣ ರಾಜ್ಯದಲ್ಲಿ 09 ಪ್ರತಿಶತಃ ಮಾದಿಗ ಸಮಾಜಕ್ಕೆ ಒಳಮೀಸಲಾತಿ ನೀಡಲಾಗಿದೆ ಎಂದು ಮುಖ್ಯಮಂತ್ರಿ ರೇವಂತರೆಡ್ಡಿಯವರು ಘೋಷಣೆ ಮಾಡಿದ್ದಾರೆ.

ತೆಲಂಗಾಣ ಮಾದರಿಯಲ್ಲಿ ಕರ್ನಾಟಕ ರಾಜ್ಯದಲ್ಲಿಯು ಸಹ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆದೇಶ ನೀಡಬೇಕು ನಮ್ಮ ಮಾದಿಗ ಸಮಾಜದ ಬಹುದಿನಗಳ ಹೋರಾಟದ ಪ್ರತಿಫಲ, ನಮ್ಮ ಶ್ರಮ, ನಮ್ಮ ಹಕ್ಕು, ನೀಡಬೇಕು ಎಂದು ಹೇಳಿದರು.

ಮಾದಿಗ ಸಮಾಜದ ಮುಖಂಡರುಗಳಾದ ನರಸಪ್ಪ ಕಿವಣೋರಕರ್, ಸುನೀಲ್ ಸಲಗಾರ, ಸುಂದರ ಡಿ.ಸಾಗರ, ಮಲ್ಲು ಕೋಡಬಂಲ್, ವಿಜಯರಾಜ್ ಕೊರಡಂಪಳ್ಳಿ, ಅನೀಲ ಕಟ್ಟಿ, ಪ್ರಶಾಂತ ಕಟ್ಟಿಮನಿ, ಅನೀಲ ರುಸ್ತಾಂಪೂರ, ನಿಶಾಂತ ಗಾರಂಪಳ್ಳಿ, ಸಾಗರ ಹೋಸಳ್ಳಿ, ವಿಶಾಲ ಸುಂಗಧಿ, ಸಚಿನ ಅಣವಾರ, ಪ್ರಭಾಕರ ಮಿರಿಯಾಣಕರ್, ಶಿವು ದಸ್ತಪೂರ, ಬಸವರಾಜ ಮೇತ್ರಿ, ಮೋಹನ್ ತುಮಕುಂಟಾ, ಬಕ್ಕಣ್ಣ ನೀಮಾ ಹೊಸಳ್ಳಿ, ಶರಣಪ್ಪ ಪಟಪಳ್ಳಿ, ಶರಣು ಗಡ್ಡಿ ಕೇಶ್ವಾರ, ಮಾರುತಿ ಮೋತಕಪಳ್ಳಿ, ರವಿ ರುಸ್ತಾಂಪೂರ, ನಂದು ರುಸ್ತಾಂಪೂರ, ರಾಜು ಗಂಗನಪಳ್ಳಿ, ವಿಲ್ಸನ್ ದಂಡಿನ್, ಜಾನ್ಸನ್ ದಂಡಿನ್, ಅರ್ಜುನ್ ಪೂಜಾರಿ, ದಿವಾಕರ್, ಶಿಕಾರಮೊತಕಪಳ್ಳಿ, ಗುರುನಾಥ, ಪ್ರಭು ಡಿ ಬಸಂತಪುರ, ಜೈಕುಮಾರ ಗಡಿಕೇಶ್ವಾರ ಇದ್ದರು.

ಕೆರೆಯ ಅಭಿವೃದ್ಧಿಯಿಂದ ಅಂತರ್ಜಲ ವೃದ್ಧಿ

• ಉದಯವಾಹಿನಿ, ಗಂಡಸಿ

ಉದಯವಾಹಿನಿ ಚಿತ್ರ

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಮ್ಮೂರು ನಮ್ಮ ಕೆರೆ ಯೋಜನೆಯಡಿ ಗ್ರಾಮಾಂತರ ಪ್ರದೇಶದ ಕೆರೆಕಟ್ಟೆಗಳಲ್ಲಿ ಹೂಳೆತ್ತುವ ಮೂಲಕ ಅಭಿವೃದ್ಧಿ ಪಡಿಸುತ್ತಿರುವುದರಿಂದ ಅಂತರ್ಜಲ ಮಟ್ಟ ವೃದ್ಧಿಯಾಗಿ ರೈತರ ತೋಟ, ಜಮೀನುಗಳಿಗೆ ಅನುಕೂಲವಾಗುತ್ತಿದೆ. ಜನೋಪಯೋಗಿ ಯೋಜನೆ ಕಲ್ಪಿಸುತ್ತಿರುವುದು ಶ್ಲಾಘನೀಯ ಎಂದು ಗಂಡಸಿ ಸಬ್ ಇನ್ಸ್‌ಪೆಕ್ಟರ್ ಆರತಿ ತಿಳಿಸಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ಅಭಿವೃದ್ಧಿ ಪಡಿಸಿದ ಜಿ. ಹೊನ್ನೇನಹಳ್ಳಿಯ ಕೆರೆಯ ಹಸ್ತಾಂತರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರದ ಪ್ರತಿನಿಧಿಗಳು ಮಾಡಬೇಕಾದ ಕೆಲಸಗಳನ್ನು ಧರ್ಮಸ್ಥಳ ಸಂಸ್ಥೆ ಮಾಡುತ್ತಿದೆ. ಬಡ ಕುಟುಂಬಗಳಿಗೆ ಮನೆ, ಮಾಸಾಶನ, ಮಹಿಳೆಯರ ಸಬಲೀಕರಣ ಯೋಜನೆ ಕಲ್ಪಿಸುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ ಎಂದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕಿ ಮಮತಾ ಹರೀಶ್ ರಾವ್ ಮಾತನಾಡಿ, 7 ಲಕ್ಷ ವೆಚ್ಚದಲ್ಲಿ ಜಿ.ಹೊನ್ನೇನಹಳ್ಳಿ ಕೆರೆ ಅಭಿವೃದ್ಧಿ ಪಡಿಸಿದ್ದು, ತ್ಯಾಜ್ಯ ವಸ್ತುಗಳನ್ನು ಕೆರೆಗೆ ಹಾಕಿ ಕಲುಷಿತಗೊಳಿಸಬೇಡಿ. ಕೆರೆಯ ಸುತ್ತ ವಿವಿಧ ಜಾತಿಯ ಸಸಿ ನೆಟ್ಟಿದ್ದು, ಕಾಪಾಡುವ ಜವಾಬ್ದಾರಿ ಕೆರೆ ಅಭಿವೃದ್ಧಿ ಸಮಿತಿ, ಗ್ರಾಮಸ್ಥರು ಸ್ಥಳೀಯ ಗ್ರಾಮ ಪಂಚಾಯಿತಿಯನ್ನು ನಮ್ಮ ಜೊತೆ ಕೈಜೋಡಿಸಿದಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಲವು ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗುವುದು ಎಂದರು.

• ಉದಯವಾಹಿನಿ ಹಾವೇರಿ

ಮೈಲಾರ ಜಾತ್ರೆ - ಭಕ್ತರ ಪ್ರಯಾಣಕ್ಕೆ 145 ಬಸ್

ಉದಯವಾಹಿನಿ ಚಿತ್ರ

ಶಕ್ತಿ ಯೋಜನೆ ಜಾರಿಯಲ್ಲಿರುವುದರಿಂದ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ ಹೀಗಾಗಿ, ಅಗತ್ಯಬಿದ್ದರೆ ಮತ್ತಷ್ಟು ಬಸ್ ಗಳನ್ನು ರಸ್ತೆಗೆ ಇಳಿಸಲು ಸಹ ಅಧಿಕಾರಿಗಳು ತಯಾರಿ ಮಾಡಿಕೊಂಡಿದ್ದಾರೆ. ಜೊತೆಗೆ, ಮಹಿಳಾ ಪ್ರಯಾಣಿಕರ ಜೊತೆಯಲ್ಲಿ ಸೌಜನ್ಯದಿಂದ ವರ್ತಿಸುವಂತೆಯೂ ಚಾಲಕರು ಹಾಗೂ ನಿರ್ವಾಹಕರಿಗೆ ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ಉತ್ತರ ಕರ್ನಾಟಕದಲ್ಲಿಯೇ ಅತೀ ಹೆಚ್ಚು ಭಕ್ತರು ಸೇರುವ ಮೈಲಾರಲಿಂಗೇಶ್ವರ ಜಾತ್ರೆಗೆ ದಿನಗಣನೆ ಶುರುವಾಗಿದ್ದು ಸುಕ್ಷೇತ್ರ ಮೈಲಾರ ಹಾಗೂ ದೇವರಗುಡ್ಡಕ್ಕೆ ಹೋಗಿ ಬರಲು 145 ಬಸ್ ಗಳ ವ್ಯವಸ್ಥೆ ಮಾಡಲಾಗಿದೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಹಾವೇರಿ ಜಿಲ್ಲಾ ಘಟಕದಿಂದ ಪ್ರತಿ ವರ್ಷವೂ ಜಾತ್ರೆಯ ಸಂದರ್ಭದಲ್ಲಿ ಹೆಚ್ಚುವರಿ ಬಸ್‌ಗಳ ವ್ಯವ

ದಿನ ಭವಿಷ್ಯ

ರಾಹುಕಾಲ	ಸಾಯಂಕಾಲ	04:30 ರಿಂದ 06:00
ಗುಳಿಕ ಕಾಲ	ಮಧ್ಯಾಹ್ನ	03:00 ರಿಂದ 04:30
ಯಮಗಂಡ ಕಾಲ	ಮಧ್ಯಾಹ್ನ	12:00 ರಿಂದ 01:30

ಮೇಷ – ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ಅಹಂಭಾವ ಮತ್ತು ಅಸೂಯೆ ಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ.

ವೃಷಭ – ನಿಮ್ಮ ಶಕ್ತಿಯನ್ನು ಸ್ವಯಂ ಸುಧಾರಣೆ ಯೋಜನೆಗಳಲ್ಲಿ ಹಾಗೂ ನಿಮ್ಮನ್ನು ಉತ್ತಮವಾಗಿಸುವ ಯೋಜನೆಗಳಲ್ಲಿ ಹಾಕಿ. ನೀವು ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ.

ಮಿಥುನ – ನೀವು ಮಾನಸಿಕವಾಗಿ ಮತ್ತು ದೈಹಿಕವಾಗಿ ಸ್ವಲ್ಪ ಸುಸ್ತನ್ನು ಅನುಭವಿಸಬಹುದು. ನಿಮ್ಮ ಚೈತನ್ಯವನ್ನು ಹೆಚ್ಚಿಸಲು ಸ್ವಲ್ಪ ವಿಶ್ರಾಂತಿ ಮತ್ತು ಪೌಷ್ಟಿಕ ಆಹಾರ ಬಹಳ ಸಹಾಯ ಮಾಡುತ್ತದೆ.

ಕರ್ಕಾಟಕ – ಸ್ವತಃ ಔಷಧಿ ತೆಗೆದುಕೊಳ್ಳುವುದು ಔಷಧ ಅವಲಂಬನೆಯನ್ನು ಉಂಟುಮಾಡಬಹುದು. ಯಾವುದೇ ಔಷಧ ತೆಗೆದುಕೊಳ್ಳುವ ಮೊದಲು ವೈದ್ಯರ ಸಲಹೆ ಪಡೆಯಿರಿ.

ಸಿಂಹ – ನೀವು ಹೇರಳ ಶಕ್ತಿಯನ್ನು ಹೊಂದಿರುತ್ತೀರಿ – ಆದರೆ ಕೆಲಸದ ಒತ್ತಡ ನಿಮ್ಮನ್ನು ಉದ್ವಿಗ್ನಗೊಳಿಸುವಂತೆ ತೋರುತ್ತದೆ. ಆರ್ಥಿಕ ನಿರ್ಬಂಧಗಳನ್ನು ತಪ್ಪಿಸಲು ನಿಮ್ಮ ಬಜೆಟ್‌ಗೆ ಅಂಟಿಕೊಳ್ಳಿ.

ಕನ್ಯಾ – ನಿಮ್ಮ ಹೆಂಡತಿಯ ಜೊತೆ ಕುಟುಂಬದ ಸಮಸ್ಯೆಗಳನ್ನು ಹಂಚಿಕೊಳ್ಳಿ. ನಮ್ಮನ್ನು ನೀವೇ ಒಂದು ಪ್ರೀತಿಯ ಪೋಷಿಸುವ ಜೋಡಿಯೆನ್ನುವುದನ್ನು ಪುನಃ ಕಂಡುಹಿಡಿಯಲು ಸ್ವಲ್ಪ ಸಮಯ ಖರ್ಚು ಮಾಡಿ.

ತುಲಾ – ನಿಮ್ಮ ಆಹಾರವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ ಮತ್ತು ಫಿಟ್ ಆಗಿ ಉಳಿಯಲು ವ್ಯಾಯಾಮ ಮಾಡಿ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ.

ವೃಶ್ಚಿಕ – ಪ್ರತಿಯೊಬ್ಬರೂ ಇಂದು ನಿಮ್ಮ ಸ್ನೇಹಿತರಾಗಯಸುತ್ತಾರೆ ಮತ್ತು ನಿಮಗೆ ಇದರಿಂದ ಸಂತೋಷವೆನಿಸುತ್ತದೆ. ನಿಮ್ಮ ಕನಸುಗಳು ಹಾಗೂ ವಾಸ್ತವವು ಪ್ರೀತಿಯ ಭಾವಪರವಶತೆಯಲ್ಲಿ ಇಂದು ಸೇರಿಹೋಗುತ್ತವೆ.

ಧನಸ್ಸು – ನೀವು ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ನಿಮ್ಮ ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ನಿಮ್ಮ ದೇಹಕ್ಕೆ ಮಸಾಜ್ ಮಾಡಿ. ಇಂದು ಹಣ ನಿಮ್ಮ ಕೈಯಲ್ಲಿ ಉಳಿಯುದಿಲ್ಲ.

ಮಕರ – ನಿಮ್ಮ ವಿಶ್ವಾಸ ಮತ್ತು ಚೈತನ್ಯ ಇಂದು ಅಧಿಕವಾಗಿರುತ್ತದೆ. ವಿದೇಶದಲ್ಲಿ ಮಲಗಿರುವ ನಿಮ್ಮ ಭೂಮಿಯನ್ನು ಉತ್ತಮ ಬೆಲೆಗೆ ಮಾರಾಟ ಮಾಡಬಹುದು, ಅದು ನಿಮಗೆ ಲಾಭದಾಯಕವಾಗಲಿದೆ.

ಕುಂಭ – ನಿಮ್ಮಲ್ಲಿ ಕೆಲವು ಆಭರಣ ಅಥವಾ ಗೃಹಬಳಕೆಯ ಸಾಧನಗಳನ್ನು ಖರೀದಿಸುವ ಸಾಧ್ಯತೆಗಳಿವೆ. ಪ್ರೀತಿಯ ಸಂಗೀತವನ್ನು ಯಾವಾಗಲೂ ಅದರಲ್ಲೇ ಮುಳುಗಿರುವವರು ಕೇಳಬಹುದು.

ಮೀನ – ನಿಮ್ಮ ವಂಶಸ್ಥರಿಗೆ ಏನಾದರೂ ವಿಶೇಷವಾದದ್ದನ್ನು ಯೋಜಿಸಿ. ನಿಮಗೆ ಕಾರ್ಯಗತಗೊಳಿಸಲು / ಸಾಧಿಸಲು ಸಾಧ್ಯವಾಗುವ ಹಾಗೆ ಏನಾದರೂ ವಾಸ್ತವವಾದದ್ದನ್ನು ಯೋಜಿಸಿ.

ಗ್ಯಾರಂಟಿ ಯೋಜನೆಗಳಿಗೆ ವಿಶ್ವಸಂಸ್ಥೆ ಅಧ್ಯಕ್ಷ 'ಫಿಲೆಮನ್ ಯಾಂಗ್' ಶ್ಲಾಘನೆ

ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೂಲಕ ಕರ್ನಾಟಕ ಸಾಧಿಸಿರುವ ಲಿಂಗ ಸಮಾನತೆಯ ಉಪಕ್ರಮಗಳಿಗೆ ಮೆಚ್ಚುಗೆ

ವಿಶ್ವಸಂಸ್ಥೆಯ ಅಧ್ಯಕ್ಷರು ಪ್ರಶಂಸೆ

• ಉದಯವಾಹಿನಿ ಬಳ್ಳಾರಿ

ಮಹಿಳೆಯರನ್ನು ಪ್ರಮುಖ ಫಲಾನುಭವಿಗಳನ್ನಾಗಿ ಕೇಂದ್ರೀಕರಿಸಿ ರಾಜ್ಯದಲ್ಲಿ ಜಾರಿಗೊಳಿಸಿರುವ 5 ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೂಲಕ ಕರ್ನಾಟಕ ಸಾಧಿಸಿರುವ ಲಿಂಗ ಸಮಾನತೆಯ ಉಪಕ್ರಮಗಳಿಗೆ ವಿಶ್ವಸಂಸ್ಥೆ ಸಾಮಾನ್ಯ ಸಭೆಯ ಅಧ್ಯಕ್ಷ ಕ್ಯಾಮರೂನ್ನ ಫಿಲೆಮನ್ ಯಾಂಗ್ ಮೆಚ್ಚುಗೆ ಸೂಚಿಸಿದ್ದಾರೆ.

ಅವರು ಬೆಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನಗರದ ಖಾಸಗಿ ಹೋಟೆಲ್ ತಾಜ್ ವೆಸ್ಟೆಂಡ್‌ನಲ್ಲಿ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರು ಸ್ವಸಹಾಯ ಗುಂಪಿನ ಮಹಿಳೆಯರು ರೇಷ್ಮೆ ಗೂಡುಗಳಿಂದ ತಯಾರಿಸಿದ ಪುಷ್ಪಗುಚ್ಛದೊಂದಿಗೆ ಸ್ವಾಗತಿಸಿದರು.

ಒಂದು ಜಗತ್ತು ಹಲವು ಸಾಧ್ಯತೆಗಳನ್ನು ಬಿಂಬಿಸುವ ಕರ್ನಾಟಕ ಕುರಿತಾದ ಪುಸ್ತಕವನ್ನು ನೀಡಿದರು. ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಕರ್ನಾಟಕವು ಉನ್ನತ ಸ್ಥಾನ ಪಡೆಯಲು ಸಾಧ್ಯವಾಗಿರುವ ಬಗ್ಗೆ ವಿಶ್ವಸಂಸ್ಥೆಯ ಅಧ್ಯಕ್ಷರು ಆಸಕ್ತಿಯಿಂದ ಹೆಚ್ಚು ಮಾಹಿತಿ ಹಾಗೂ ವಿವರಗಳನ್ನು ಬಯಸಿದರು.

ಗ್ಯಾರಂಟಿ ಯೋಜನೆಗಳಲ್ಲಿ ಮಹಿಳೆಯರ ಕೈಗೆ ನಗದು ಹಣ ನೀಡುವ ಗೃಹಲಕ್ಷ್ಮಿ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಅವಕಾಶ ನೀಡುವ ಶಕ್ತಿ, ಕಾರ್ಮಿಕ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆಯ ದರವನ್ನು ಸುಧಾರಿಸಲು ಕೈಗೊಂಡಿರುವ ಕ್ರಮಗಳು, ಹಸಿವು ಮತ್ತು ಅಪೌಷ್ಟಿಕತೆಯನ್ನು ತಡೆಗಟ್ಟಲು ತಲಾವಾರು ಪೋಷಕಾಂಶ ನೀಡಿಕೆ, ಕೌಶಲ್ಯದ ಮೂಲಕ ಉದ್ಯೋಗಗಳಿಕೆ, ಅಡುಗೆ ಅನಿಲ ಪೂರೈಕೆ, ಉಚಿತ ವಿದ್ಯುತ್ ಪೂರೈಕೆ ಕುರಿತ ಕಾರ್ಯಕ್ರಮಗಳ ವಿವರಗಳನ್ನು ಮುಖ್ಯ ಕಾರ್ಯದರ್ಶಿಗಳು ನೀಡಿದರು.

ಮಹಿಳೆಯರು ಸ್ವಸಹಾಯ ಗುಂಪುಗಳನ್ನು ಸಂಘಟಿಸಲು, ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಮೌಲ್ಯವರ್ಧನೆಗೆ ಪ್ರೋತ್ಸಾಹ,

ಉದಯವಾಹಿನಿ ಚಿತ್ರ

ವಿಷಕಾರಿ ಮುಕ್ತ ವಾತಾವರಣಕ್ಕಾಗಿ ಸಮಗ್ರ ಮತ್ತು ಸಾವಯವ ಕೃಷಿಗೆ ಪ್ರೋತ್ಸಾಹ ಕ್ರಮಗಳು ಸಮಗ್ರ ಹವಾಮಾನ ಬದಲಾವಣೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಸಹಾಯ ಮಾಡುತ್ತದೆ ಎಂದು ಸಂತಸ ವ್ಯಕ್ತಪಡಿಸಿದರು.

ಮಾಹಿತಿ ತಂತ್ರಜ್ಞಾನ, ತಂತ್ರಾಂಶ ಅಭಿವೃದ್ಧಿ, ಕೃತಕ ಬುದ್ಧಿಮತ್ತೆ (ಎಐ), ಸಂಶೋಧನೆ ಮತ್ತು ನಾವೀನ್ಯತೆಗಾಗಿ ಜಾಗತಿಕ ಸಾಮರ್ಥ್ಯ ಕೇಂದ್ರಗಳ ಸ್ಥಾಪನೆಯಲ್ಲಿ ಕರ್ನಾಟಕವು ಸಾಧಿಸಿರುವ ಪ್ರಗತಿಯನ್ನು ವಿಶ್ವಸಂಸ್ಥೆಯ ಮೆಚ್ಚಿದರು.

ಇತರ ದೇಶಗಳಿಗೆ ಡಿಜಿಟಲ್ ರೂಪಾಂತರವನ್ನು ಉತ್ತೇಜಿಸುವ ಸಲುವಾಗಿ ಸಹಾಯದ ಅಗತ್ಯವಿದ್ದು, ರಾಜ್ಯದ ಬೆಂಬಲವನ್ನು ಕೋರಿದರು. ರಾಜ್ಯ, ಜಿಲ್ಲೆ ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ ಸುಸ್ಥಿರ ಅಭಿವೃದ್ಧಿ ಸೂಚಕಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಕರ್ನಾಟಕ ರಚಿಸಿದ ಸುಸ್ಥಿರ ಅಭಿವೃದ್ಧಿ ಗುರಿಗಳ ಡ್ಯಾಶ್‌ಡ್ಯಾ ವೀಕ್ಷಿಸಿ ಶ್ಲಾಘಿಸಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿ ಜಿ.ಸತ್ಯವತಿ ಮತ್ತಿತರರು ಇದ್ದರು.

ಕಾರ್ಯಕ್ಕೆ ಶ್ಲಾಘನೆ

ರಾಜ್ಯದಲ್ಲಿ ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ಸಮಾನತೆಯನ್ನು ಉತ್ತೇಜಿಸಲು ಮಹಿಳಾ ಪರ ಕಾರ್ಯಕ್ರಮಗಳನ್ನು ಮುನ್ನಡೆಸುತ್ತಿರುವ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಾಳಜಿಯನ್ನು ವಿಶ್ವಸಂಸ್ಥೆಯ ಅಧ್ಯಕ್ಷರು ಶ್ಲಾಘಿಸಿದರು. ಮುಂಬರುವ ವಿಶ್ವಸಂಸ್ಥೆಯ ಕಾರ್ಯಾಗಾರಗಳಲ್ಲಿ ಕರ್ನಾಟಕದ ಯಶೋಗಾಥೆಗಳನ್ನು ಹಂಚಿಕೊಳ್ಳಬೇಕೆಂದು ಅವರು ಸಲಹೆ ನೀಡಿದರು. ಇದರಿಂದ ಇತರ ದೇಶಗಳು ಸಹ ಈ ಅತ್ಯುತ್ತಮ ಅಭ್ಯಾಸಗಳನ್ನು ಅಳವಡಿಸಿಕೊಳ್ಳಬಹುದು ಎಂದು ಅಭಿಪ್ರಾಯ ಪಟ್ಟರು.

ನವೀಕರಿಸಬಹುದಾದ ಇಂಧನ ಉತ್ಪಾದನೆ ರಾಜ್ಯಕ್ಕೆ ಅಗ್ರಸ್ಥಾನ ಒಟ್ಟು ಇಂಧನ ಉತ್ಪಾದನೆಯಲ್ಲಿ ಶೇ. 40 ರಷ್ಟು ಪಾಲು ನವೀಕರಿಸಬಹುದಾದ ಮೂಲಗಳಿಂದ ಬರುತ್ತಿರುವುದರಿಂದ ಕರ್ನಾಟಕವು ಶುದ್ಧ ಮತ್ತು ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ದೇಶದಲ್ಲಿಯೇ ಅಗ್ರಸ್ಥಾನ ಪಡೆದಿರುವುದಕ್ಕೆ ವಿಶ್ವಸಂಸ್ಥೆಯ ಅಧ್ಯಕ್ಷರು ಸಂತೋಷ ವ್ಯಕ್ತಪಡಿಸಿದರು.

ಕಂದಕಕ್ಕೆ ಉರುಳಿದ ಬಸ್: ಪ್ರಯಾಣಿಕರು ಪಾರು

• ಉದಯವಾಹಿನಿ ವಡಗೇರಾ

ಪಟ್ಟಣದ ಹೊರವಲಯದ ಆದಿ ಬಸವಣ್ಣ ದೇವಸ್ಥಾನದ ಹತ್ತಿರ ಕಲ್ಯಾಣ ಕರ್ನಾಟಕ ಸಾರಿಗೆ ಇಲಾಖೆಗೆ ಸೇರಿದ ಬಸ್ಸು ತಾಲೂಕಿನ ಸಂಗಮ ದಿಂದ ಯಾದಗಿರಿ ನಗರಕ್ಕೆ ತೆರಳುತ್ತಿರುವಾಗ ಬೆಳಗ್ಗೆ 9. ಗಂಟೆ ಸುಮಾರಿಗೆ ಕಂದಕಕ್ಕೆ ಬಸ್ಸು ಉರುಳಿ ಬಿದ್ದಿದೆ ಅದೃಷ್ಟಾವಶ ಪ್ರಯಾಣಿಕರು ಪ್ರಾಣಪಾಯದಿಂದ ಪಾರಾಗಿದ್ದಾರೆ.ಈ ಘಟನೆಗೆ ಪ್ರಮುಖ ಕಾರಣ ಬೈಕ್ ಸವಾರನೊಬ್ಬ ಬಸ್ಸನ್ನು ಹಿಂದಿಕ್ಕಿ ಮುಂದೆ ಹೋಗಿ ಆಯತಪ್ಪಿ ರಸ್ತೆಯ ಮೇಲೆ ಉರುಳಿ ಬಿದ್ದಿದ್ದಾನೆ ಬೈಕ್ ಸವಾರನನ್ನು ಉಳಿಸಲು ಹೋಗಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಪಕ್ಕದ ಕಂದಕಕ್ಕೆ ಬಸ್ಸು ಉರುಳಿದೆ ಈ ಬಸ್ಸಿನಲ್ಲಿ ಸುಮಾರು 50 ಕ್ಕೂ ಹೆಚ್ಚು ಪ್ರಯಾಣಿಕರು ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳು ಪ್ರಯಾಣಿಸುತ್ತಿದ್ದರು .

ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಪಟ್ಟಣದ ಸಾರ್ವಜನಿಕರು ಆರೋಗ್ಯ ಇಲಾಖೆಯ ಸಿಬ್ಬಂದಿಗಳ ಸಹಾಯದಿಂದ ಆಂಬುಲೆನ್ಸ್ ಮೂಲಕ ಅವರನ್ನು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ

ಉದಯವಾಹಿನಿ ಚಿತ್ರ

ಕರೆತಂದು ಸೂಕ್ತ ಚಿಕಿತ್ಸೆ ವ್ಯವಸ್ಥೆ ಮಾಡಿ ಮಾನವೀಯತೆ ಮೆರೆದಿದ್ದಾರೆ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಜಗನ್ನಾಥ್ ರೆಡ್ಡಿ ಮಾತನಾಡಿ ಪ್ರಯಾಣಿಕರು ಮತ್ತು ಚಿಕ್ಕ ಮಕ್ಕಳಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು ನಮ್ಮ ಆರೋಗ್ಯ ಕೇಂದ್ರದಲ್ಲಿ ಸೂಕ್ತ ಚಿಕಿತ್ಸೆ ವ್ಯವಸ್ಥೆಯನ್ನು ನೀಡಲಾಗುತ್ತಿದೆ .

7. ಜನರನ್ನು ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಡಲಾಗಿದೆ, ಯಾರು ಭಯಪಡುವ ಅವಶ್ಯಕತೆ ಇಲ್ಲ ಎಂದು ಅವರು ತಿಳಿಸಿದ್ದಾರೆ .ಈ ಘಟನೆ ಕುರಿತು ವಡಗೇರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ತಿಳಿದು ಬಂದಿದೆ

ಠಾಣೆಯ ಮುಂದೆ ತಂದೆಯ ಶವವಿಟ್ಟು ಪ್ರತಿಭಟನೆ ನಡೆಸಿದ ಇನ್ಸ್‌ಪೆಕ್ಟರ್
ಪಿಎಸ್‌ಐ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹ

• ಉದಯವಾಹಿನಿ ಬೆಳಗಾವಿ

ಇನ್ಸ್‌ಪೆಕ್ಟರ್ ಓರ್ವರು ಪೊಲೀಸ್ ಠಾಣೆಯ ಮುಂದೆ ತಂದೆಯ ಶವಿಟ್ಟು ಪ್ರತಿಭಟನೆ ನಡೆಸಿರುವ ಘಟನೆ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಹಾರುಗೇರಿಯಲ್ಲಿ ನಡೆದಿದೆ.

ವಿಜಯಪುರ ಜಿಲ್ಲೆಯ ದೇವದುರ್ಗ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಅಶೋಕ್ ಸದಲಗಿ ಹಾರೂಗೇರಿ ಪೊಲಿಸ್ ಠಾಣೆಯ ಪಿಎಸ್ ಐ ಮಾಳಪ್ಪ ಪೂಜಾರಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಪೊಲೀಸ್ ಠಾಣೆ ಮುಂದೆ ಧರಣಿ ನಡೆಸಿದ್ದಾರೆ.

ಇನ್ಸ್ ಪೆಕ್ಟರ್ ಅಶೋಕ್ ಸದಲಗಿ ತಂದೆ ಅಣ್ಣಪ್ಪ ಅವರ ಜಮೀನಿಗೆ ಬಾಬು ನೋಡಣಿ, ಪ್ರತಾಪ್ ಹರೋಲಿ, ವಸಂತ ಚೌಗಲಾ ಎಂಬುವವರು ಅಕ್ರಮವಾಗಿ ಪ್ರವೇಶ ಮಾಡಿದ್ದರು. ಜ.10ರಂದು ಈ ಘಟನೆ ನಡೆದಿತ್ತು.


ಉದಯವಾಹಿನಿ ಚಿತ್ರ

ಕಿರುಕುಳ ನೀಡಿದ ಆರೋಪ

ಅಕ್ರಮವಾಗಿ ಜಮೀನಿಗೆ ಪ್ರವೇಶಿಸಿರುವುದನ್ನು ಪ್ರಶ್ನಿಸಿದ್ದಕ್ಕೆ ಅಣ್ಣಪ್ಪ ಅವರ ಮೇಲೆ ಬಾಬು ವಸಂತ, ಪ್ರತಾಪ್ ಗ್ಯಾಂಗ್ ಹಲ್ಲೆ ನಡೆಸಿದೆ. ತಕ್ಷಣ ಅಣ್ಣಪ್ಪ ಅವರು 112 ಸಂಖ್ಯೆಗೆ ಕರೆ ಮಾಡಿ ಪೊಲೀಸರಿಗೆ ಕರೆದಿದ್ದರು.

ಬಳಿಕ ಅಣ್ಣಪ್ಪ, ಬಾಬು ನಡೋಣಿ ಸೇರಿ ಎಲ್ಲರನ್ನೂ ಪೊಲೀಸರು ಠಾಣೆಗೆ ಕರೆದೊಯ್ದಿದ್ದಾರೆ. ಠಾಣೆಯಲ್ಲಿ ಅನ್ನಪ್ಪ ಅವರಿಗೆ ಕಿರುಕುಳ ನೀಡಲಾಗಿದೆ ಎಂಬ ಆರೋಪ ಕೇಳಿಬಂದಿದೆ.

ಸಂಜೆ ವೇಳೆಗೆ ಅಣ್ಣಪ್ಪ ಅವರ ಶುಗರ್ ಡೌನ್ ಆಗಿದೆ. ಬಿಪಿ ಹೆಚ್ಚಾಗಿದೆ ತೀವ್ರವಾಗಿ ಅಸ್ವಸ್ಥರಾದ ಅಣ್ಣಪ್ಪ ಅವರನ್ನು ಎರಡನೇ ಪುತ್ರ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆರೋಪಿಗಳ ವಿರುದ್ಧ ದೂರು ದಾಖಲಿಸಿ ಕ್ರಮ ಕೈಗೊಳ್ಳುವಂತೆ ಇನ್ಸ್ ಪೆಕ್ಟರ್ ಅಶೋಕ್ ಹಾರೂಗೇರಿ ಪಿಎಸ್ ಐ, ಸಿಪಿಐ, ಅಥಣಿ ಡಿವೈ ಎಸ್ ಪಿ ಅವರಿಗೆ ಮನವಿ ಮಾಡಿದ್ದರು.

ಆದಾಗ್ಯೂ ದೂರು ದಾಖಲಿಸಿಕೊಳ್ಳದೇ ಪೊಲೀಸರು ನಿರ್ಲಕ್ಷ್ಯ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಇನ್ಸ್ ಪೆಕ್ಟರ್ ಅಶೋಕ್ ಸಹೋದರನ ಮೇಲೆ ಪಿಎಸ್ ಐ ಮಾಳಪ್ಪ ಅಟ್ರಾಸಿಟಿ ಕೇಸ್ ದಾಖಲಿಸಿದ್ದಾರೆ.

ಪ್ರಿಯಕರನ ಜೊತೆ ಸೇರಿ ಪತಿಯನ್ನು ಹತ್ಯೆಗೈದ ಪತ್ನಿ

• ಉದಯವಾಹಿನಿ ಬೆಳಗಾವಿ

ತನ್ನ ಅನೈತಿಕ ಸಂಬಂಧಕ್ಕೆ ಪತಿ ಅಡ್ಡಿಯಾಗುತ್ತಾನೆ ಎಂದು ಪ್ರಿಯಕರನ ಜೊತೆ ಸೇರಿ ಪತಿಯನ್ನು ಕಲ್ಲಿನಿಂದ ಜಜ್ಜಿ ಭೀಕರವಾಗಿ ಕೊಲೆ ಮಾಡಿರುವ ಘಟನೆ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಬಾವನಸವದತ್ತಿ ಎಂಬ ಗ್ರಾಮದಲ್ಲಿ ನಡೆದಿದೆ. ಕೊಲೆಯಾದ ವ್ಯಕ್ತಿಯನ್ನು ಬಸ್ತವಾಡ ಗ್ರಾಮದ ನಿವಾಸಿ ಮಹೇಂದ್ರ ಓಲೆಕಾರ್ (45) ಕೊಲೆಯಾದ ವ್ಯಕ್ತಿ ಎಂದು ತಿಳಿದು ಬಂದಿದೆ.

ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಬಾವನಸೌದತ್ತಿಯಲ್ಲಿ ಈ ಒಂದು ಘಟನೆ ನಡೆದಿದ್ದು, ಘಟನೆಗೆ ಸಂಬಂಧಿಸಿದಂತೆ ಪತ್ನಿ ಸಿದ್ದವ್ವ ಮತ್ತು ಗಣಪತಿ ಕಾಂಬಳೆಯನ್ನು ಇದೀಗ ಪೊಲೀಸರು ಅರೆಸ್ಟ್ ಮಾಡಿದ್ದಾರೆ. ಜನವರಿ 5ರಂದು ಸೌಗಂಧದೇವಿ ದರ್ಶನಕ್ಕೆ

ಉದಯವಾಹಿನಿ ಚಿತ್ರ

ಪತ್ನಿ ಪತಿಯನ್ನು ಕರೆದುಕೊಂಡು ಹೋಗಿದ್ದಾಳೆ. ಈ ವೇಳೆ ಕೃಷ್ಣಾ ನದಿ ದಂಡೆಯ ಮೇಲೆ ಸ್ನಾನ ಮಾಡುವಾಗ ಪತಿಯನ್ನು ಹತ್ಯೆಗಯ್ಯಲಾಗಿದೆ. ಕಲ್ಲಿನಿಂದ ಜಜ್ಜಿ ಪತ್ನಿ ಸಿದ್ದವ್ವ ಹಾಗೂ ಗಣಪತಿಯಿಂದ ಕೊಲೆ ಮಾಡಲಾಗಿದೆ. ಬಳಿಕ ಶವವನ್ನು ಕೃಷ್ಣಾ ನದಿಗೆ ಎಸೆದು ಆರೋಪಿಗಳು ಪರಾರಿಯಾಗಿದ್ದರು. ಬಳಿಕ ಕೊಲೆ ಕೇಸ್ ದಾಖಲಿಸಿದ್ದ ರಾಯಭಾಗ ಪೊಲೀಸರು ತನಿಖೆ ಬೆಳೆ ಹೆಂಡತಿ ಮತ್ತು ಪ್ರಿಯಕರ ಕೊಲೆ ಮಾಡಿದ್ದು ಬಹಿರಂಗವಾಗಿದೆ.

ಮಗಳನ್ನೇ ಹತ್ಯೆಗೈದ ತಂದೆ

• ಉದಯವಾಹಿನಿ ಬೀದರ್

ಪ್ರೀತಿ ಮಾಡಿದ್ದಕ್ಕೆ ರೊಚ್ಚಿಗೆದ್ದು ತಂದೆಯೇ ದೊಣ್ಣೆಯಿಂದ ಮಗಳನ್ನ ಹೊಡೆದು ಬರ್ಬರ ಹತ್ಯೆ ಮಾಡಿದ ಘಟನೆ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಬರಗೇನ್ ತಾಂಡಾದಲ್ಲಿ ನಡೆದಿದೆ. ಕೊಲೆಯಾದವರನ್ನು ಮೋನಿಕಾ ಮೋತಿರಾಮ ಜಾಧವ್ ಎಂದು ಗುರುತಿಸಲಾಗಿದೆ.ಪ್ರೀತಿ-ಪ್ರೇಮದಿಂದ ದೂರವಿರುವಂತೆ ಮಗಳಿಗೆ ತಂದೆ ತಿಳುವಳಿಕೆ ಹೇಳಿ,ನಿನಗೆ ಒಳ್ಳೆಯ ಹುಡುಗನನ್ನ ನೋಡಿ ಮದುವೆ ಮಾಡುತ್ತೇನೆ ಎಂದಿದ್ದಾನೆ. ಈ ವೇಳೆ ತಂದೆಯ ಎದುರು ಮಗಳು ಪ್ರೀತಿ ವಿಷಯ ಪ್ರಸ್ತಾಪಿಸಿದ್ದಲ್ಲದೇ ಅವನನ್ನೇ ಮದುವೆ ಆಗುತ್ತೇನೆ ಎಂದು ಗಲಾಟೆ ಮಾಡಿದ್ದಾಳೆ. ಬುದ್ಧಿಮಾತು ಹೇಳಿದ್ರೂ ಕೇಳದ ಹಿನ್ನೆಲೆ ಕೋಪಗೊಂಡು ತಂದೆ ಮಗಳನ್ನು, ಕೊಲೆ ಮಾಡಿ ತಂದೆ ಮೋತಿರಾಮ ಸ್ಥಳದಿಂದ ಪರಾರಿಯಾಗಿದ್ದಾನೆ.

ಬುದ್ಧಿ ಹೇಳಿದ ಪತ್ನಿಯನ್ನೇ ಕೊಂದ ಪತಿ

• ಉದಯವಾಹಿನಿ ಚಿತ್ರದುರ್ಗ

ಗಳಿಸಿರುವ ಹಣ, ಆಸ್ತಿಯನ್ನು ದುಂದು ವೆಚ್ಚ ಮಾಡಿ ಹಾಳು ಮಾಡಬೇಡ ಎಂದು ಪತ್ನಿ ಬುದ್ಧಿ ಹೇಳಿದಕ್ಕೆ ಕುಪಿತಗೊಂಡ ಪತಿರಾಯ ಒಬ್ಬ ಕತ್

ಅಮೆರಿಕದಲ್ಲಿ ವಿಮಾನ ದುರಂತ

10 ಜನ ಸಾವು

ಜೆಟ್ ಮತ್ತು ಸೇನಾ ಹೆಲಿಕಾಪ್ಟರ್ ನಡುವೆ ಭೀಕರ ಅಪಘಾತ

ಅಲಾಸ್ಕ ಅಮೆರಿಕ: ಪಶ್ಚಿಮ ಅಲಾಸ್ಕದಲ್ಲಿ ಸಣ್ಣ ವಿಮಾನ ಪತನಗೊಂಡು 10 ಜನ ಸಾವನ್ನಪ್ಪಿದ್ದಾರೆ ಎಂದು ಅಮೆರಿಕಾದ ಕೋಸ್ಟ್‌ಗಾರ್ಡ್ ಹೇಳಿದೆ.ಅಲಾಸ್ಕದ ಪಶ್ಚಿಮ ಕರಾವಳಿಯಲ್ಲಿ ನಿಯಂತ್ರಣ ಕಳೆದುಕೊಂಡು ನಾಪತ್ತೆಯಾದ ವಿಮಾನ ಪತನವಾಗಿರುವ ಸ್ಥಳವನ್ನು ಅಮೆರಿಕದ ಕೋಸ್ಟ್‌ಗಾರ್ಡ್ ನಿನ್ನೆ ಪತ್ತೆ ಮಾಡಿದ್ದು, ಎಕ್ಸ್ ಖಾತೆಯಲ್ಲಿ ಈ ಬಗ್ಗೆ ಮಾಹಿತಿ ನೀಡಿದೆ.

ವಿಮಾನವು ನೋಮ್‌ನಿಂದ ಆಗ್ನೇಯಕ್ಕೆ 34 ಮೈಲಿಗಳಷ್ಟು ದೂರದಲ್ಲಿ ಕಂಡುಬಂದಿದೆ ಎಂದು ಹೇಳಿದೆ. ವಿಮಾನದಲ್ಲಿ ಎಲ್ಲಾ ಪ್ರಯಾಣಿಕರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳಪೆ ಹವಾಮಾನ ಮತ್ತು ಕಡಿಮೆ ಗೋಚರತೆಯಿಂದಾಗಿ ವಿಮಾನ ನಿಯಂತ್ರಣ ಕಳೆದುಕೊಂಡು ಪತನವಾಗಿದೆ. ಅಗ್ನಿಶಾಮಕ ಸಿಬ್ಬಂದಿ ನೋಮ್‌ನಿಂದ ಟಾಪ್‌ವಾಕ್‌ವರೆಗೆ ತೀವ್ರ ಹುಡುಕಾಟ ನಡೆಸಿತು. ಯುಎಸ್ ಕೋಸ್ಟ್‌ಗಾರ್ಡ್ ವಿಮಾನ ಸಿಬ್ಬಂದಿ ವಾಯು ಪ್ರದೇಶದಲ್ಲಿ ಶೋಧ ಕೈಗೊಂಡರು.

ಅಲಸ್ಕಾ ಸಾರ್ವಜನಿಕ ಸುರಕ್ಷತೆ ಪ್ರಕಾರ ಬೇರಿಂಗ್ ಏರ್ ನಿರ್ವಹಿಸುವ ಟರ್ಬೊಪ್ರಾಪ್ ಸೆಸ್ನಾಕಾರವಾನ್ ಗುರುವಾರ ಮಧ್ಯಾಹ್ನ ಕಾಣೆಯಾಗಿದೆ ಎಂದು ವರದಿಯಾಗಿತ್ತು. ಸ್ಥಳೀಯ ಕಾಲಮಾನ ಪ್ರಕಾರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ವಿಮಾನದಲ್ಲಿದ್ದ ಪ್ರತಿಯೊಬ್ಬರ ಕುಟುಂಬಗಳಿಗೆ ಸೂಚನೆ ನೀಡಲಾಗಿದೆ. ಜನವರಿಯಲ್ಲಿ ಪ್ಯಾಸೆಂಜರ್ ಜೆಟ್ ಮತ್ತು ಸೇನಾ ಹೆಲಿಕಾಪ್ಟರ್ ನಡುವೆ ಭೀಕರ ಅಪಘಾತ ಸಂಭವಿಸಿ 67 ಮಂದಿ ಸಾವನ್ನಪ್ಪಿದ್ದರು.

ಅಕ್ರಮ ವಲಸಿಗರ ವಿರುದ್ಧ ಗ್ಲೋಬಲ್ ವಾರ್!

ದೇಶ ತೊರೆಯಲು ಸ್ವೀಡನ್ 28 ಲಕ್ಷ ರೂ. ಆಫರ್!

ಅಮೆರಿಕದಂತೆ ಸ್ವೀಡನ್‌ಗೂ ಅಕ್ರಮ ವಲಸಿಗರ ಚಿಂತೆ. ತನ್ನ ನೆಲದಲ್ಲಿ ಬೀಡುಬಿಟ್ಟಿರುವ ಅಕ್ರಮ ವಲಸಿಗರನ್ನು ಹೊರಗೆ ಕಳುಹಿಸಲು ಸ್ವೀಡನ್ 2022ರಿಂದಲೇ ಯೋಜನೆ ಕೈಗೆತ್ತಿಕೊಂಡಿದೆ. ದೇಶ ತೊರೆಯುವ ಅಕ್ರಮ ವಲಸಿಗರಿಗೆ ಸ್ವೀಡನ್ 28 ಲಕ್ಷ ರೂ.ಗಳನ್ನು ನೀಡುತ್ತಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಅಕ್ರಮ ವಲಸಿಗರ ಪ್ರಮಾಣ ಶೇ.8.1ಕ್ಕೆ ತಲುಪಿದ್ದು, ಮಧ್ಯಪ್ರಾಚ್ಯ ಹಾಗೂ ಮುಸ್ಲಿಂ ರಾಷ್ಟ್ರಗಳ ವಲಸಿಗರೇ ಇದರಲ್ಲಿ ಬಹುಪಾಲು ಆಕ್ರಮಿಸಿಕೊಂಡಿದ್ದಾರೆ. ಇವರ ಸಂಖ್ಯೆ ತಗ್ಗಿಸುವುದಕ್ಕಾಗಿ ಸ್ವೀಡನ್ ಪ್ರೋತ್ಸಾಹ ಧನದ ಉಪಾಯ ಹೂಡಿದೆ. ಸ್ವೀಡನ್‌ನ ನೀತಿ ಬಹುಪಾಲು ವರ್ಕೌಟ್ ಆಗುತ್ತಿದೆ ಕೂಡ. ಸ್ವೀಡನ್‌ಗೆ ವಲಸೆ ಬರುತ್ತಿರುವವರಲ್ಲಿ ಹೆಚ್ಚಿನವರು ಸಿರಿಯಾದವರು. ನಂತರ ಇರಾಕ್, ಆಫ್ಘಾನಿಸ್ತಾನದವರು. ಹೀಗೆ ಬಂದವರಿಗೆ 28 ಲಕ್ಷ ರೂ. ಅತಿದೊಡ್ಡ ಮೊತ್ತವಾಗಿ ಕಾಣುತ್ತಿರುವುದರಿಂದ ಪುನಃ ಅವರು ತಮ್ಮ ದೇಶಕ್ಕೆ ಮರಳಲು ಉತ್ಸಾಹ ತೋರುತ್ತಿದ್ದಾರೆ.

ದೇಶ ತೊರೆಯಲು ಲಕ್ಷ ಲಕ್ಷ ಆಫರ್ ನೀಡ್ತೀವೆ ಹಲವು ದೇಶಗಳು!

ದೇಶ ಖಾಲಿ ಮಾಡೋರಿಗೆ ದುಡ್ಡೋ ದುಡ್ಡು!

ಅಕ್ರಮ ವಲಸಿಗರನ್ನು ಖಾಲಿ ಮಾಡುವ ಸ್ವೀಡನ್‌ನ ಪ್ಯಾಕೇಜ್ ಯೋಜನೆಯನ್ನು ಯುರೋಪ್‌ನ ಇತರೆ ರಾಷ್ಟ್ರಗಳು ಕೂಡ ಅನುಸರಿಸುತ್ತಿವೆ. ಅದರಲ್ಲಿ ಪ್ರಮುಖವಾಗಿ ಡೆನ್ಮಾರ್ಕ್, ನಾರ್ವೆ, ಜರ್ಮನಿ, ಫ್ರಾನ್ಸ್ ಇವೆ. 59.95 ಲಕ್ಷ ಜನಸಂಖ್ಯೆ ಇರುವ ಡೆನ್ಮಾರ್ಕ್‌ನಲ್ಲಿ 6.50 ಲಕ್ಷ ಅಕ್ರಮ ವಲಸಿಗರೇ ತುಂಬಿಕೊಂಡಿದ್ದಾರೆ. ತನ್ನ ನೆಲ ತೊರೆಯುವ ಅಕ್ರಮ ವಲಸಿಗನಿಗೆ ಡೆನ್ಮಾರ್ಕ್ ಸರಕಾರ 13.14 ಲಕ್ಷ ರೂ. ನೀಡುತ್ತಿದೆ. ಇನ್ನು, 55 ಲಕ್ಷ ಜನರಿರುವ ನಾರ್ವೆಯಲ್ಲಿ 9.31 ಲಕ್ಷ ಅಕ್ರಮ ವಲಸಿಗರಿದ್ದಾರೆ. ನಾರ್ವೆ ತೊರೆಯುವ ಅಕ್ರಮ ವಲಸಿಗನಿಗೆ 1.22 ಲಕ್ಷ ರೂ. ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಇದರ ಜೊತೆ 8.45 ಕೋಟಿ ಜನಸಂಖ್ಯೆ ಇರುವ ಜರ್ಮನಿಯೂ ಅಕ್ರಮ ವಲಸಿಗರ ಬೀಡು. ಇಲ್ಲಿ 34 ಲಕ್ಷ ಅಕ್ರಮ ವಲಸಿಗರಿದ್ದು, ಇವರಲ್ಲಿ ಜರ್ಮನಿ ತೊರೆಯುವವರಿಗೆ 1.75 ಲಕ್ಷ ರೂ.ಗಳನ್ನು ಸರಕಾರ ನೀಡುತ್ತಿದೆ. ಫ್ರಾನ್ಸ್ ಕೂಡ ಅಕ್ರಮ ವಲಸಿಗರಿಂದ ಸಾಕಷ್ಟು ಏಟು ತಿಂದ ರಾಷ್ಟ್ರ. 6.65 ಕೋಟಿ ಜನರಿರುವ ಫ್ರಾನ್ಸ್‌ನಲ್ಲಿ ಸುಮಾರು 4 ಲಕ್ಷ ಅಕ್ರಮ ವಲಸಿಗರಿದ್ದಾರೆ. ಈ ಪೈಕಿ ದೇಶ ತೊರೆಯುವವರಿಗೆ 65,744 ರೂ. ಆಫರ್ ಅನ್ನು ಅಲ್ಲಿನ ಸರ್ಕಾರ ನೀಡುತ್ತಿದೆ.

ಆಸ್ಟ್ರೇಲಿಯಾ ನುಗ್ಗಿದವರಿಗೆ ಪಪ್ಪುವಾ ದ್ವೀಪಕ್ಕೆ ಗೇಟ್‌ಪಾಸ್!

ಜಗತ್ತಿನ 6ನೇ ಅತಿದೊಡ್ಡ ರಾಷ್ಟ್ರವಾದರೂ ಆಸ್ಟ್ರೇಲಿಯಾವು ಅಕ್ರಮ ವಲಸಿಗರ ಬಗ್ಗೆ ಬಹಳ ಕಟ್ಟುನಿಟ್ಟಿನ ಕ್ರಮಗಳನ್ನೇ ಕೈಗೊಂಡಿದೆ. ಅದರಲ್ಲೂ 2013-21ರ ನಡುವೆ ತನ್ನಲ್ಲಿದ್ದ ಅಕ್ರಮ ವಲಸಿಗರನ್ನು ಬಹುತೇಕವಾಗಿ ಈ ದೇಶ ಪಪುವಾ ನ್ಯೂಗಿನಿಯಾ ದ್ವೀಪಕ್ಕೆ ರವಾನಿಸಿದೆ. 'ಆಸಲೀಂ' ಯೋಜನೆಯಡಿ ಪೆಸಿಫಿಕ್ ಮಹಾಸಾಗರದ ಈ ದ್ವೀಪಕ್ಕೆ ಸಹಸ್ರಾರು ಸಂಖ್ಯೆಯ ಅಕ್ರಮ ವಲಸಿಗರು ತೆರಳಿದ್ದಾರೆ. ಇವರು ಸಾಕಲು ಆ ದ್ವೀಪ ರಾಷ್ಟ್ರ ಬರೋಬ್ಬರಿ ಪ್ಯಾಕೇಜ್ ಪಡೆದರೂ, ಆ ದ್ವೀಪಕ್ಕೆ ಹೋದಾಗ ಹೊಸ ತೊಂದರೆಗಳೇ ಸೃಷ್ಟಿಯಾದವು. ವಾಸಿಸಲು ಮನೆಗಳಿಲ್ಲ, ತಿನ್ನಲು ಆಹಾರವಿಲ್ಲ, ಜೀವನ ದೂಡಲು ಹಣವಿಲ್ಲ ಎಂಬ ಸ್ಥಿತಿ. ಹ್ಯೂಮನ್ ರೈಟ್ಸ್ ವಾಚ್ ಸಂಸ್ಥೆ ಅಲ್ಲಿನ ಘೋರ ಚಿತ್ರಣವನ್ನು ಬಯಲು ಮಾಡಿ, ಆಸ್ಟ್ರೇಲಿಯಾ- ಪಪುವಾ ನಡುವಿನ ಒಪ್ಪಂದವನ್ನೇ ರದ್ದು ಮಾಡಿತು. ಅಷ್ಟರಲ್ಲಾಗಲೇ ಸಹಸ್ರಾರು ಅಕ್ರಮ ವಲಸಿಗರು ಆತ್ಮಹತ್ಯೆ ಮಾಡಿಕೊಂಡಿದ್ದರು. ಅನೇಕರು ಕಣ್ಮರೆಯಾಗಿದ್ದರು.

ಸದ್ಯ ದೇಶ, ವಿದೇಶದಲ್ಲಿ ಟ್ರೆಂಡಿಂಗ್ ಆಲ್ಲಿರೋ ಸ್ಟೋರಿ ಹೇಳ್ತೀನಿ ಕೇಳಿ.. ಆತ ಹರ್ವಿಂದರ್ ಸಿಂಗ್, ಪಂಜಾಬ್‌ನ ಹೋಶಿಯಾರ್‌ಪುರದ ತಾಹ್ಲಿ ಗ್ರಾಮದವ.. ಮೊನ್ನೆ ತಾನೆ ಅಮೆರಿಕದಿಂದ ಬಂದಿಳಿದವನು. ಸಾಮಾನ್ಯವಾಗಿ ಫಾರಿನ್‌ನಿಂದ ತಾಯ್ನಾಡಿಗೆ ಬಂದ ಕೂಡಲೇ ಅವರಿಗೊಂದು ಭವ್ಯ ಸ್ವಾಗತವಿರುತ್ತೆ ಎಂಬುದು ನಿಮಗೆ ಗೊತ್ತು. ಕುಟುಂಬಸ್ಥರೆಲ್ಲ ಪ್ಲಕಾರ್ಡ್ ಹಿಡಿದು ಏರ್‌ಪೋರ್ಟ್ ಬಾಗಿಲಲ್ಲೇ ಕಾಯುತ್ತಿರುತ್ತಾರೆ. ಊರಿನಲ್ಲೋ, 'ಫಾರಿನ್ನಿಂದ ಬಂದವ್ರೆ' ಎಂಬ ರಾಜ ಮರ್ಯಾದೆ ಕೊಡ್ತಿರ್ತಾರೆ. ಹಾಗೆ ಬಂದವರೂ ಹಿತೈಷಿಗಳಿಗೆ ಚಾಕ್ಲೆಟು, ಗಿಫ್ಟು ಇನ್ನಿತರೆ ವಸ್ತುಗಳನ್ನು ಹೊತ್ತು ತಂದಿರುತ್ತಾರೆ. ಆದರೆ, ಹರ್ವಿಂದರ್ ಸೇರಿ ಅಮೆರಿಕದಿಂದ ದಿಢೀರ್ ಭಾರತಕ್ಕೆ ಬಂದ 104 ಮಂದಿಯ ಸ್ಥಿತಿ ಹೀಗಂತೂ ಇರಲಿಲ್ಲ. 40 ಗಂಟೆಗಳ ಕಾಲ ಕೈಗೆ ಕೋಳ ಹಾಕಿದ್ದರು. ಕಾಲಿಗೂ ಸಂಕೋಲೆ ಬಿಗಿದಿದ್ದರು. ವಾಶ್‌ರೂಂಗೆ ಹೋಗಲು ಅಂಗಲಾಚಿದರಷ್ಟೇ ಅಮೆರಿಕ ಸೈನಿಕರಿಂದ ಅಪ್ಪಣೆ ಸಿಗುತ್ತಿತ್ತು. ಇದರ ಬೆನ್ನಲ್ಲೇ ಗಡಿಪಾರಾದ ವಲಸಿಗರ ಬಗ್ಗೆ ಭಾರೀ ಚರ್ಚೆಯಾಗುತ್ತಿದೆ. ಕೇವಲ ಅಮೆರಿಕ ಮಾತ್ರವಲ್ಲ ಬೇರೆ ದೇಶಗಳು ಕೂಡ ಅಕ್ರಮ ವಲಸಿಗರ ವಿರುದ್ಧ ಕ್ರಮಗಳನ್ನು ವಿವಿಧ ರೀತಿಯಲ್ಲಿ ತೆಗೆದುಕೊಳ್ಳುತ್ತಿವೆ. ಒಂದಿಷ್ಟು ದೇಶಗಳು ಅಕ್ರಮ ವಲಸಿಗರಿಗೆ ತಮ್ಮ ದೇಶವನ್ನು ತೊರೆಯಲು ಹಣದ ಆಫರ್ ಅನ್ನು ನೀಡುತ್ತಿವೆ. ಬನ್ನಿ ಏನಂಥ ನೋಡೋಣ..

ಹೌದು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 'ಲೇಕನ್ ರಿಲೇ ಆಕ್ಟ್'ಗೆ ಸಹಿ ಹಾಕಿದ್ದೇ ಹಾಕಿದ್ದು, ಅಕ್ರಮ ವಲಸಿಗರನ್ನೆಲ್ಲ ಹಿಡಿದ್ದಿಡಿದು, ವಿಮಾನಕ್ಕೆ ತುಂಬಿ ಆಯಾ ರಾಷ್ಟ್ರಗಳಿಗೆ ಕಳಿಸಲಾಗುತ್ತಿದೆ. ಅಮೆರಿಕ 15 ಲಕ್ಷ ಅಕ್ರಮ ವಲಸಿಗರನ್ನು ಪಟ್ಟಿ ಮಾಡಿದ್ದು, ಇದರಲ್ಲಿ ಭಾರತೀಯರೇ 20,407 ಮಂದಿ. ಈ 104 ಮಂದಿ ಮೊದಲ ಬ್ಯಾಚ್ ಅಷ್ಟೇ! ಇದೇ ಅವಸ್ಥೆಯಲ್ಲಿ ಭಾರತಕ್ಕೆ ಮರಳುವ ಸಹಸ್ರಾರು ಮುಖಗಳು ಇನ್ನೂ ಅಮೆರಿಕದಲ್ಲೇ ಉಳಿದಿದ್ದಾರೆ. ಇವರೆಲ್ಲ ಏಜೆಂಟುಗಳ ಮಾತುಗಳನ್ನು ನಂಬಿ, ಡಾಂಕಿ ಮಾರ್ಗದ ಮೂಲಕ ಅಮೆರಿಕವನ್ನು ಹಿಂಬಾಗಿಲಿನಿಂದ ಪ್ರವೇಶಿಸಿದವರು. ಇವರಾರ ಬಳಿಯೂ ಸೂಕ್ತ ದಾಖಲೆಗಳಿಲ್ಲ. ವಿಮಾನಗಳಲ್ಲಿ, ಕೆಲವೊಮ್ಮೆ ಹಡಗುಗಳ ಕಂಟೈನರ್‌ಗಳಲ್ಲಿ ಕುಳಿತು ಪ್ರಯಾಣಿಸಿದವರು. ಮಾರ್ಗ ಮಧ್ಯೆ ಕೆಲವೊಂದು ರಾಷ್ಟ್ರಗಳ ಗಡಿ ದಾಟಲು ಕಾರಿನ ಡಿಕ್ಕಿಯೊಳಗೂ ಕುಳಿತವರು. ಜೀವಕ್ಕೆ ಅಪಾಯವನ್ನು ಲೆಕ್ಕಿಸದೆ, ಭಂಡ ಧೈರ್ಯದಲ್ಲಿ ಹೋದವರಿಗೆ ಅಮೆರಿಕ ಯಾವುದೇ ವಿನಾಯಿತಿ, ರಿಯಾಯಿತಿ ನೀಡದೆ ಹೊರ ಹಾಕುತ್ತಿದೆ. ಅಕ್ರಮ ವಲಸಿಗರ ವಿಚಾರದಲ್ಲಿ ಅಮೆರಿಕ ನೇರಾನೇರ ಕಾರ್ಯಾಚರಣೆ ಕೈಗೊಳ್ಳುತ್ತಿದೆ. ಇದರೊಂದಿಗೆ ಜಗತ್ತಿನ ಇತರೆ ರಾಷ್ಟ್ರಗಳೂ ಬೇರೆಬೇರೆ ತಂತ್ರಗಳನ್ನು ಅನುಸರಿಸುತ್ತಿವೆ. ದುಡ್ಡನ್ನು ಕೂಡ ಅಕ್ರಮ ವಲಸಿಗರಿಗೆ ನೀಡುತ್ತಿವೆ.

ಇಂಗ್ಲೆಂಡ್‌ಗೂ ತಪ್ಪಿಲ್ಲ ಅಕ್ರಮ ವಲಸಿಗರ ಕಾಟ

ಇತ್ತ ಇಂಗ್ಲೆಂಡ್‌ಗೂ ಕೂಡ ವಲಸಿಗರ ಕಾಟ ತಪ್ಪಿಲ್ಲ. ಇಂಗ್ಲಿಷ್ ಕಡಲ್ಗಾಲುವೆ ಮೂಲಕ ಅಪಾರ ಪ್ರಮಾಣದಲ್ಲಿ ಅಕ್ರಮ ವಲಸಿಗರು ಇಂಗ್ಲೆಂಡನ್ನು ತಲುಪುತ್ತಿರುವುದು ಅಲ್ಲಿನ ಸರಕಾರದ ನಿದ್ದೆಗೆಡಿಸಿದೆ. 2024ರಲ್ಲಿ ಸಣ್ಣ ದೋಣಿ ಹತ್ತಿಕೊಂಡು ಬ್ರಿಟನ್ ತಲುಪಿದವರ ಸಂಖ್ಯೆಯೇ ಬರೋಬ್ಬರಿ 37 ಸಾವಿರ. ಬ್ರಿಟಿಷ್ ರಾಷ್ಟ್ರೀಯತೆ ಮತ್ತು ಗಡಿ ಕಾಯಿದೆ ಪ್ರಕಾರ, ಕಾನೂನು ಬದ್ಧವಾಗಿ ಬಂದವರು ಮತ್ತು ಯುರೋಪಿನ ಯಾವುದೇ ದೇಶದ ನಿವಾಸಿಗಳು ಮಾತ್ರವೇ ಇಂಗ್ಲೆಂಡಿನಲ್ಲಿ ಆಶ್ರಯ ಪಡೆಯಬಹುದು. ಆದರೆ, ಈಗ ಅಕ್ರಮವಾಗಿ ಬರುತ್ತಿರುವವರಲ್ಲಿ ಹೆಚ್ಚಿನವರು ಸಂಘರ್ಷ, ಯುದ್ಧಪೀಡಿತ ದೇಶಗಳಿಂದ ಪಲಾಯನ ಮಾಡಿದವರಾಗಿದ್ದಾರೆ. ಅವರನ್ನು ಹಿಂದಕ್ಕೆ ಓಡಿಸುವ ಮೂಲಕ ಬ್ರಿಟನ್ ತನ್ನ ಕ್ರೌರ್ಯ ಮುಖ ತೋರಿಸಿಕೊಳ್ಳಲು ಇಚ್ಛಿಸುತ್ತಿಲ್ಲ. ಬದಲಾಗಿ, ಇವರನ್ನೆಲ್ಲ 6,470 ಕಿ.ಮೀ. ದೂರದ ಆಫ್ರಿಕದ ರವಾಂಡ ದೇಶಕ್ಕೆ ರವಾನಿಸಲು ಯೋಜನೆ ರೂಪಿಸಿದೆ. ರವಾಂಡಾದ ಜತೆ ಈ ಆಶ್ರಯ ನೀತಿ ಒಪ್ಪಂದಕ್ಕೆ ಬ್ರಿಟನ್ 2022ರಲ್ಲಿಯೇ ಸಹಿ ಹಾಕಿದೆ. ಈ ಒಪ್ಪಂದದ ಕಾಲಾವಧಿ 5 ವರ್ಷಗಳು. ಇದಕ್ಕೆ ಪ್ರತಿಯಾಗಿ ರವಾಂಡಕ್ಕೆ ಬ್ರಿಟನ್ ಸರಕಾರ 120 ದಶಲಕ್ಷ ಪೌಂಡ್ ಸಹಾಯಧನ ನೀಡಲಿದೆ.

ಮಧ್ಯಪ್ರದೇಶ ಸಿಎಂ ಮೋಹನ್ ಯಾದವ್

ತುಕ್ಡೆ-ತುಕ್ಡೆ ಗ್ಯಾಂಗ್‌ಗೆ ನಿರಂತರ ಸೋಲು

ಇಂದೋರ್: ದೆಹಲಿಯ 70 ವಿಧಾನಸಭಾ ಸ್ಥಾನಗಳ ಪೈಕಿ 48 ಸ್ಥಾನಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದ್ದು, ತುಕ್ಡೆ-ತುಕ್ಡೆ ಗ್ಯಾಂಗ್‌ನ ಭಾಗವಾಗಿದ್ದ ಮತ್ತು ಸಂಕುಚಿತ ಮನಸ್ಥಿತಿಯನ್ನು ಹೊಂದಿದ್ದ ನಾಯಕರು ನಿರಂತರವಾಗಿ ಸೋಲು ಅನುಭವಿಸುತ್ತಿದ್ದಾರೆ ಎಂದು ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಹೇಳಿದ್ದಾರೆ.



ಇಂದೋರ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಯಾದವ್, ವಿರೋಧ ಪಕ್ಷಗಳು ಚುನಾವಣೆಯಲ್ಲಿ ಪದೇ ಪದೇ ಸೋತ ನಂತರ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು. ಭಾರತೀಯ ಜನತಾ ಪಕ್ಷ(ಬಿಜೆಪಿ) ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಸಾರ್ವಜನಿಕರೊಂದಿಗಿನ ಸಂಬಂಧ, ಅವರ ಕಠಿಣ ಪರಿಶ್ರಮ ಮತ್ತು ದೇಶದ ಬದಲಾಗುತ್ತಿರುವ ಮನಸ್ಥಿತಿ ಒಂದೇ ದಿಕ್ಕಿನತ್ತ ಸಾಗುತ್ತಿದೆ ಎಂದು ಅವರು ಹೇಳಿದರು.

ಮಿಲ್ಕಿಪುರದಲ್ಲಿ ಬಿಜೆಪಿ ಮೇಲುಗೈ ಐತಿಹಾಸಿಕ ಗೆಲುವು

ಲಖನೌ: ಉತ್ತರಪ್ರದೇಶದ ಮಿಲ್ಕಿಪುರ ವಿಧಾನಸಭೆ ಉಪಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದ್ದು, ತಮಿಳುನಾಡಿನ ಈರೋಡ್ ವಿಧಾನಸಭೆ ಉಪಚುನಾವಣೆಯಲ್ಲಿ ಡಿಎಂಕೆ ಪಕ್ಷವು ಮುನ್ನಡೆ ಸಾಧಿಸಿದೆ.

ಮಿಲ್ಕಿಪುರ ವಿಧಾನಸಭೆ ಉಪಚುನಾವಣೆ ಮತ್ತು ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸಲು ಕಾರಣರಾದ ಕಾರ್ಯಕರ್ತರನ್ನು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಶನಿವಾರ ಶ್ಲಾಘಿಸಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ, ಮಿಲ್ಕಿಪುರ ವಿಧಾನಸಭಾ ಉಪಚುನಾವಣೆ ಬಿಜೆಪಿ ಗೆಲುವಿಗೆ ಶ್ರಮಿಸಿದ ಕಾರ್ಯಕರ್ತರಿಗೆ ಅಭಿನಂದನೆಗಳು.

ಈ ಗೆಲುವು ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಮತ್ತು ರಾಜ್ಯ ಸರ್ಕಾರದ ಜನ ಕಲ್ಯಾಣ ಯೋಜನೆ, ಅಭಿವೃದ್ಧಿಯ ಸಂಕೇತವಾಗಿದೆ ಎಂದು ತಿಳಿಸಿದ್ದಾರೆ. 'ಈ ಗೆಲುವು ಪ್ರಧಾನಿ ಮೋದಿಯವರ ಯಶಸ್ವಿ ನಾಯಕತ್ವ, ಅಭಿವೃದ್ಧಿ ನೀತಿಗಳ ಮೇಲಿನ ದೆಹಲಿ ಜನರ ನಂಬಿಕೆಯ ಮುದ್ರೆಯೂ ಆಗಿದೆ. ದೇಶದ ಅಭಿವೃದ್ಧಿಗಾಗಿ ಶ್ರಮಿಸಲು ಡಬಲ್ ಎಂಜಿನ್ ಸರ್ಕಾರ ನೆರವಾಗಲಿದೆ' ಎಂದು ಆದಿತ್ಯನಾಥ್ ಹೇಳಿದ್ದಾರೆ. 26 ವರ್ಷಗಳ ನಂತರ ಬಿಜೆಪಿ ದೆಹಲಿಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದು, ಚುನಾವಣಾ ಆಯೋಗದ ಈಗಿನ ಟ್ರೆಂಡ್ (ಸಂಜೆ 4.30) ಪ್ರಕಾರ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 48 ಹಾಗೂ ಎಎಪಿ 22 ಸ್ಥಾನಗಳಲ್ಲಿ ಮುನ್ನಡೆಯಲ್ಲಿದೆ

ದೆಹಲಿ ದಂಗೆಯ ಆರೋಪಿಗೆ ಟಿಕೆಟ್



ನವದೆಹಲಿ: ದೆಹಲಿ ವಿಧಾನಸಭಾ ಚುನಾವಣೆ ಫಲಿತಾಂಶ ಪ್ರಕಟ ಆಗುತ್ತಿದ್ದು, 27 ವರ್ಷಗಳ ಬಳಿಕ ರಾಷ್ಟ್ರ ರಾಜಧಾನಿಯಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿಯನ್ನು ಹಿಡಿಯುತ್ತಿದೆ. ಆಡಳಿತ ವಿರೋಧಿ ಅಲೆಯಲ್ಲಿ ಎಎಪಿ ಕೊಚ್ಚಿ ಹೋಗಿದ್ದು, ಪಕ್ಷದ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಸೋಲಿನ ಸುಳಿಯಲ್ಲಿ ಸಿಲುಕಿದ್ದಾರೆ.

70 ಕ್ಷೇತ್ರಗಳ ಪೈಕಿ ಮುಸ್ತಾಫಾಬಾದ್ ವಿಧಾನಸಭಾ ಕ್ಷೇತ್ರ ಸದ್ಯ ಭಾರೀ ಚರ್ಚೆಯಲ್ಲಿದೆ. ಮುಸ್ತಾಫಾಬಾದ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೋಹನ್ ಸಿಂಗ್ ಬಿಷ್ಟ 30 ಸಾವಿರ ಮತಗಳ ಮುನ್ನಡೆಯಲ್ಲಿದ್ದು, ಬಹುತೇಕ ಗೆಲುವು ಖಚಿತ ಎನ್ನಲಾಗುತ್ತಿದೆ. ಕರ್ವಾಲ ನಗರ ಕ್ಷೇತ್ರದ ಶಾಸಕರಾಗಿದ್ದ ಮೋಹನ್ ಸಿಂಗ್ ಅವರಿಗೆ ಬಿಜೆಪಿ ಮುಸ್ತಾಫಾಬಾದ್‌ದಿಂದ ಟಿಕೆಟ್ ನೀಡಿತ್ತು.

ದೆಹಲಿಯಲ್ಲಿ ಮುಸ್ಲಿಮರ ಪ್ರಾಬಲ್ಯವುಳ್ಳ ಐದು ಕ್ಷೇತ್ರಗಳಲ್ಲಿ ಮುಸ್ತಾಫಾಬಾದ್ ಸಹ ಒಂದಾಗಿದೆ.

ಈ ಕ್ಷೇತ್ರದಲ್ಲಿ ಶೇ.40ರಷ್ಟು ಮುಸ್ಲಿಂ ಸಮುದಾಯದ ಮತಗಳಿವೆ. ಶೇ.12ರಷ್ಟು ಠಾಕೂರ್ ಮತ್ತು ಶೇ. 10ರ ಆಸುಪಾಸಿನಲ್ಲಿ ದಲಿತ ಸಮುದಾಯದ ಮತಗಳಿವೆ. ಮುಸ್ಲಿಂ ಪ್ರಾಬಲ್ಯದ ಕ್ಷೇತ್ರದಲ್ಲಿ ಬಿಜೆಪಿ ಬಾವುಟ ಹಾರಿಸುವಲ್ಲಿ ಯಶಸ್ವಿಯಾಗಿದೆ. ಈ ಕ್ಷೇತ್ರದಲ್ಲಿ ಬಿಜೆಪಿ ಗೆದ್ದಿದ್ದು ಹೇಗೆ ಎಂಬುವುದು ತಿಳಿದುಕೊಳ್ಳುವುದು ಮುಖ್ಯವಾಗಿದೆ.

ಜಗದೀಶ್ ಪ್ರಧಾನ್ ಅವರು ಮುಸ್ತಾಫಾಬಾದ್ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ

ಸಮಂತಾಗೆ ಡಿವೋರ್ಸ್ ಕೊಟ್ಟು ನಾನು ಕ್ರಿಮಿನಲ್ ಆಗಿದ್ದೀನಿ

ನಟ ಅಕ್ಕಿನೇನಿ ನಾಗ ಚೈತನ್ಯ ಮತ್ತು ಸಾಯಿ ಪಲ್ಲವಿ ನಟಿಸಿರುವ 'ತಂಡೇಲ್' ಸಿನಿಮಾ ಫೆಬ್ರವರಿ 7 ರಂದು ಬಿಡುಗಡೆಯಾಗಿದೆ. ಈ ಸಿನಿಮಾ ಒಳ್ಳೆ ಓಪನಿಂಗ್ ಪಡೆದುಕೊಳ್ಳುವುದರ ಮೂಲಕ ನೋಡುಗರ ಮನಮುಟ್ಟಿದೆ. ಸದ್ಯ ನಟ ಚೈತನ್ಯ 'ತಂಡೇಲ್' ಸಿನಿಮಾದ ಪ್ರಮೋಷನ್‌ನಲ್ಲಿ ಬ್ಯುಸಿಯಾಗಿದ್ದಾರೆ. ಹೀಗಿರುವಾಗಲೇ, ಪ್ರಚಾರದ ಭಾಗವಾಗಿ ತೆಲುಗು ಪಾಡ್‌ಕಾಸ್ಟ್ ಸಂದರ್ಶನವೊಂದರಲ್ಲಿ ನಾಗ ಚೈತನ್ಯ ಭಾಗಿಯಾಗಿದ್ದಾರೆ. ಈ ವೇಳೆ ತಮ್ಮ ವೈಯಕ್ತಿಕ ವಿಚಾರ, ಸಿನಿ ಲೈಫ್ ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಮಾತನಾಡಿದ್ದಾರೆ ನಟ ನಾಗ ಚೈತನ್ಯ. ಡಿವೋರ್ಸ್ ನಂತರ ಸಮಂತಾ ಮತ್ತು ನಾಗ ಚೈತನ್ಯ.. ಅವರದ್ದೇ ಆದ ಜೀವನ ನಡೆಸುತ್ತಿದ್ದಾರೆ. ಸಮಂತಾ, ನಾಗ ಚೈತನ್ಯರಿಂದ ದೂರಾದ ನಂತರ ಸಾಕಷ್ಟು ಕುಗ್ಗಿ ಹೋಗಿದ್ದರು. ಮಯೋಸೈಟಿಸ್ ಎಂಬ ಕಾಯಿಲೆಗೆ ತುತ್ತಾಗಿದ್ದರು. ಇದರಿಂದ ಹೊರ ಬರೋದಕ್ಕೆ ಆಧ್ಯಾತ್ಮದತ್ತ ವಾಲಿದ್ದರು.

ಸಮಂತಾ ಜೊತೆ ಡಿವೋರ್ಸ್ ಪಡೆದ ವರ್ಷಗಳ ನಂತರ ನಾಗ ಚೈತನ್ಯ 2ನೇ ಮದುವೆಯಾಗಿದ್ದಾರೆ. ಶೋಭಿತಾ ಧೂಳಿಪಾಲ ಜೊತೆ ಸುಖಕರ ಜೀವನ ನಡೆಸುತ್ತಿದ್ದಾರೆ.

ಡಿವೋರ್ಸ್ ಬಗ್ಗೆ ನಾಗ ಚೈತನ್ಯ ಮಾತು: ಮೊನ್ನೆಯಷ್ಟೇ ನಟಿ ಸಮಂತಾ, ತಮ್ಮ ಮಾಜಿ ಪತಿ ನಾಗ ಚೈತನ್ಯ ಹಾಗೂ ಶೋಭಿತಾ ಧೂಳಿಪಾಲ ಮದುವೆಯಾಗಿರುವ ಬಗ್ಗೆ ಸಂದರ್ಶನವೊಂದರಲ್ಲಿ ಮಾತನಾಡಿದ್ದರು. ಮಾಜಿ ಪತಿಯ 2ನೇ ಮದುವೆ ಬಗ್ಗೆ ನನಗೆ ಅಸೂಯೆ ಇಲ್ಲ, ನನ್ನಲ್ಲಿ ಅದಕ್ಕೆಲ್ಲಾ ಜಾಗವಿಲ್ಲ ಅಂತೇಳಿ ಸುದ್ದಿಯಾಗಿದ್ದರು.

ಈಗ ಸಮಂತಾ ಮಾಜಿ ಪತಿ ನಾಗ ಚೈತನ್ಯ ಸರದಿ. ಹೌದು ತೆಲುಗು ಪಾಡ್‌ಕಾಸ್ಟ್‌ನಲ್ಲಿ ನಟ ನಾಗ ಚೈತನ್ಯ ಡಿವೋರ್ಸ್ ಬಗ್ಗೆ ಮುಕ್ತವಾಗಿ ಮಾತನಾಡಿದ್ದಾರೆ. ''ನಾನು ಏನೋ ಹೇಳಿದ್ರೆ ಅಲ್ಲಿ ಇನ್ನೇನನ್ನೋ ಬಿಂಬಿಸುತ್ತಾರೆ. ಇದೇ ಕಾರಣಕ್ಕೆ ನಾನು ಹೆಚ್ಚಾಗಿ ಡಿವೋರ್ಸ್ ವಿಚಾರವಾಗಿ ಎಲ್ಲಿಯೂ ಮಾತನಾಡುತ್ತಿರಲಿಲ್ಲ'' ಎಂದು ನಾಗಚೈತನ್ಯ ಹೇಳಿದ್ದಾರೆ. ''ನಾನು ಕ್ರಿಮಿನಲ್ ಅಲ್ಲ, ನನ್ನ ಮೇಲೆ ಗಮನ ಹರಿಸುವುದನ್ನು ಬಿಟ್ಟು ನಿಮ್ಮ ಮೇಲೆ ಗಮನವಿಡಿ'' ಟೀಕೆ ಮಾಡುವವರಿಗೆ ನಟ ನಾಗ ಚೈತನ್ಯ ತಿರುಗೇಟು ಕೊಟ್ಟಿದ್ದಾರೆ. ನಾನೇನು ಕ್ರಮಿನಲ್ ಅಲ್ಲ

ನಮ್ಮ ವಿಚ್ಛೇದನವು ಮನರಂಜನೆಯಾಗಿ ಬದಲಾಗಿಬಿಟ್ಟಿದೆ. ಎಲ್ಲರ ಜೀವನದಲ್ಲೂ ನಡೆಯುವುದೇ ನನ್ನ ಜೀವನದಲ್ಲೂ ನಡೆದಿದ್ದು. ನಾನು ವಿಚ್ಛೇದನ ಪಡೆಯಲು 1000 ಬಾರಿ ಯೋಚಿಸಿದೆ. ನಾನೇನು ರಾತ್ರೋ ರಾತ್ರಿ ತೆಗೆದುಕೊಂಡ ನಿರ್ಧಾರವಲ್ಲ ಇದು. ಸಮಂತಾ ಮತ್ತು ನಾನು ಪರಸ್ಪರ ಒಪ್ಪಿಗೆಯೊಂದಿಗೆ ಬೇರ್ಪಟ್ಟೆವು. ಬೇರೆ ಬೇರೆ ದಾರಿಯಲ್ಲಿ ನಾವಿಬ್ಬರು ಯಶಸ್ವಿಯಾಗಿ ಜೀವನ ನಡೆಸುತ್ತಿದ್ದೇವೆ. ಆದರೂ ಇಲ್ಲಿಯವರೆಗೂ ಟೀಕೆಗಳು ನಿಲ್ಲಲೇ ಇಲ್ಲ. ನನ್ನನ್ನ ಕ್ರಿಮಿನಲ್ ರೀತಿ ಯಾಕೆ ಬಿಂಬಿಸುತ್ತಿದ್ದಾರೆ ಅನ್ನೋದು ನನಗೆ ಅರ್ಥವಾಗುತ್ತಿಲ್ಲ ಎಂದು ಹೇಳಿ ನಾಗ ಚೈತನ್ಯ ತಮ್ಮ ಬೇಸರವನ್ನು ಹೊರಹಾಕಿದ್ದಾರೆ.

ನನ್ನ ಪ್ರೀತಿಯ ಸೆಲೆಬ್ರಿಟಿಗಳೇ ದಯಮಾಡಿ ನನ್ನನ್ನ ಕ್ಷಮಿಸಿ

ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ಸಿಲುಕಿದ್ಮೇಲೆ, ಜೈಲಿನಿಂದ ಹೊರಗೆ ಬಂದ್ಮೇಲೆ ದರ್ಶನ್ ಬಹಿರಂಗವಾಗಿ ಒಂದು ಮಾತನ್ನೂ ಆಡಿರಲಿಲ್ಲ. ಇದೀಗ ಕ್ಯಾಮರಾ ಮುಂದೆ ಬಂದಿರುವ ತಮ್ಮೆಲ್ಲಾ ಅಭಿಮಾನಿಗಳಿಗೆ (ಸೆಲೆಬ್ರಿಟಿಗಳಿಗೆ) ವಿಡಿಯೋ ಸಂದೇಶ ನೀಡಿದ್ದಾರೆ. ಅಭಿಮಾನಿಗಳಲ್ಲಿ ದರ್ಶನ್ ಕ್ಷಮೆಯಾಚಿಸಿದ್ದಾರೆ.

ಎಲ್ಲವೂ ಪ್ಲಾನ್ ಪ್ರಕಾರ ನಡೆದಿದ್ದರೆ, ಇಷ್ಟೊತ್ತಿಗಾಗಲೇ 'ಡೆವಿಲ್' ಶೂಟಿಂಗ್ ಮುಗಿದು ರಿಲೀಸ್ ಆಗಿರಬೇಕಿತ್ತು. ಆದರೆ, 'ಡೆವಿಲ್' ಚಿತ್ರೀಕರಣದಲ್ಲಿ ಬಿಜಿಯಾಗಿರುವಾಗಲೇ ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಕೇಸ್‌ನಲ್ಲಿ ಚಾಲೆಂಜಿಂಗ್ ಸ್ಟಾರ್ ದರ್ಶನ್ ಸಿಲುಕಿದರು. ಪ್ರಕರಣದಲ್ಲಿ ಎ2 ಆರೋಪಿಯಾದ ದರ್ಶನ್ ಜೈಲುವಾಸ ಅನುಭವಿಸಿದರು. ಇತ್ತೀಚೆಗಷ್ಟೇ ಜಾಮೀನಿನ ಮೇಲೆ ನಟ ದರ್ಶನ್ ಹೊರಬಂದರು. ನಟ ದರ್ಶನ್ ಹೊರಗೆ ಬಂದ್ಮೇಲೆ ಇದೇ ಮೊದಲ ಬಾರಿಗೆ ಬಹಿರಂಗವಾಗಿ ತಮ್ಮೆಲ್ಲಾ ಅಭಿಮಾನಿಗಳಿಗೆ ವಿಡಿಯೋ ಸಂದೇಶ ನೀಡಿದ್ದಾರೆ. ''ಇದೊಂದು ಬಾರಿ ದಯಮಾಡಿ ನನ್ನನ್ನ ಕ್ಷಮಿಸಿ. ಹೊಟ್ಟೆಗೆ ಹಾಕಿಕೊಳ್ಳಿ'' ಎಂದು ವಿಡಿಯೋದಲ್ಲಿ ನಟ ದರ್ಶನ್ ಮನವಿ ಮಾಡಿದ್ದಾರೆ. ಅಸಲಿಗೆ, ಇದೇ ತಿಂಗಳು.. ಅಂದ್ರೆ ಫೆಬ್ರವರಿ 16 ರಂದು ದರ್ಶನ್ ಅವರ ಹುಟ್ಟುಹಬ್ಬ. ಜನ್ಮದಿನದಂದು ಅಭಿಮಾನಿಗಳನ್ನ ಭೇಟಿಯಾಗಲು ದರ್ಶನ್‌ರಿಂದ ಸಾಧ್ಯವಾಗುತ್ತಿಲ್ಲ. ಹೀಗಾಗಿ, ಫ್ಯಾನ್ಸ್‌ಗೆ ದರ್ಶನ್ ಕ್ಷಮೆ ಕೇಳಿದ್ದಾರೆ. ''ನನ್ನೆಲ್ಲಾ ಪ್ರೀತಿಯ ಸೆಲೆಬ್ರಿಟಿಗಳಿಗೆ ನಾನು ನಮಸ್ಕಾರ ಹೇಳಲಾ, ಥ್ಯಾಂಕ್ಸ್ ಹೇಳಲಾ, ಧನ್ಯವಾದ ಹೇಳಲಾ, ನಾನು ಏನೇ ಹೇಳಿದರೂ ತುಂಬಾ ಚಿಕ್ಕ ಪದ ಆಗುತ್ತದೆ. ಯಾಕಂದ್ರೆ, ನೀವು ತೋರಿಸಿರುವ ಪ್ರೀತಿ, ಅಭಿಮಾನ ಅಂಥದ್ದು. ಆ ಋಣವನ್ನ ನಾನು ತೀರಿಸೋಕೆ ಆಗಲ್ಲ''

''ನನ್ನ ಹುಟ್ಟುಹಬ್ಬ ಬರ್ತಿದೆ. ನೀವುಗಳು ತುಂಬಾ ಆಸೆ ಪಟ್ಟಿದ್ರಿ? ನನಗೂ ತುಂಬಾ ಆಸೆ ಇತ್ತು? ಪ್ರತಿಯೊಬ್ಬರನ್ನೂ ಮೀಟ್ ಮಾಡಿ, ಥ್ಯಾಂಕ್ಸ್ ಹೇಳಬೇಕು ಅಂತ. ಪ್ರತಿ ಬಾರಿಯೂ ನಾನು ನಿಂತುಕೊಂಡೇ ಪ್ರತಿಯೊಬ್ಬರಿಗೂ ಥ್ಯಾಂಕ್ಸ್ ಹೇಳುತ್ತಿದ್ದೆ. ಆದರೆ, ಈ ಬಾರಿ ನನಗೆ ಆರೋಗ್ಯ ಸಮಸ್ಯೆ ಇದೆ. ನನಗೆ ತುಂಬಾ ಹೊತ್ತು ನಿಲ್ಲೋಕೆ ಆಗಲ್ಲ. ಏನು ಪ್ರಾಬ್ಲಂ ಅನ್ನೋದು ನಿಮ್ಮೆಲ್ಲರಿಗೂ ಚೆನ್ನಾಗಿ ಗೊತ್ತು. ಇಂಜೆಕ್ಷನ್ ತಗೊಂಡ್ರೆ 15-20 ದಿನ ಸರಿ ಇರುತ್ತೆ. ಆಮೇಲೆ ಅದರ ಪವರ್ ಕಮ್ಮಿ ಆದ್ಮೇಲೆ ಮತ್ತೆ ನೋವು ಶುರುವಾಗುತ್ತದೆ. ಆಪರೇಷನ್ ಅನ್ನೋದು ಕಟ್ಟಿಟ್ಟಬುತ್ತಿ. ಅದನ್ನ ನಾನು ಮಾಡಿಸಲೇಬೇಕು''ನಾನು ಕೆಲ ಸಿನಿಮಾಗಳನ್ನ ಒಪ್ಪಿಕೊಂಡಿದ್ದೇನೆ. ನನ್ನೆಲ್ಲಾ ನಿರ್ಮಾಪಕರಿಗೂ ನಾನು ಥ್ಯಾಂಕ್ಸ್ ಹೇಳಲೇಬೇಕು. ಯಾಕಂದ್ರೆ, ಅವರೆಲ್ಲಾ ನನಗಾಗಿ ಕಾದಿದ್ದಾರೆ. ನಾನು ನಿರ್ಮಾಪಕರಿಗೆ ಅನ್ಯಾಯ ಮಾಡಬಾರದು. ಹೀಗಾಗಿ, ಸಿನಿಮಾಗಳ ಕಡೆ ಗಮನ ಹರಿಸುತ್ತಿದ್ದೇನೆ. ನನ್ನೆಲ್ಲಾ ಸೆಲೆಬ್ರಿಟಿಗಳೇ.. ದಯಮಾಡಿ ಇದೊಂದು ಸಲ ನನ್ನನ್ನ ಕ್ಷಮಿಸಿಬಿಡಿ. ನಾನು ನಿಮ್ಮೆಲ್ಲರಿಗೂ ಸಿಕ್ಕೇ ಸಿಗ್ತೇನೆ. ನಿಮ್ಮೆಲ್ಲರಿಗೂ ನಾನು ಥ್ಯಾಂಕ್ಸ್ ಹೇಳಲೇಬೇಕು. ಆದರೆ, ಈಗಲ್ಲ, ಇನ್ನೊಂದು ಸ್ವಲ್ಪ ದಿನ ಆಗಲಿ.. ಯಾಕಂದ್ರೆ, ಈಗ ಕಾಲೆಲ್ಲಾ ಆಗುತ್ತಿದೆ. ವೈದ್ಯರ ಸಲಹೆ ಪಡೆಯಬೇಕಿದೆ.

ಸ್ಪೈನಲ್ ಕಾರ್ಡ್ ಪ್ರಾಬ್ಲಂ ಇದೆ. ''ನಿಮ್ಮೆಲ್ಲರ ಅಭಿಮಾನ, ಪ್ರೋತ್ಸಾಹ ಹೀಗೇ ಇರಲಿ ಅಂತ ನಾನು ಕೇಳಿಕೊಳ್ಳುತ್ತೇನೆ. ಆದಷ್ಟು ಬೇಗ ನಾನು ನಿಮ್ಮೆಲ್ಲರಿಗೂ ಸಿಗ್ತೀನಿ. ಅದ್ಯಾವಾಗ ಅಂತ ಹೇಳ್ತೀನಿ. ಇದೊಂದು ಬಾರಿ ಕ್ಷಮಿಸಿಬಿಡಿ. ದಯಮಾಡಿ ಹೊಟ್ಟೆಗೆ ಹಾಕಿಕೊಳ್ಳಿ. ಈ ಸಲ ಬರ್ತಡೇಗೆ ಸಿಗಲ್ಲ ಅಂದಿದ್ದಕ್ಕೆ ದಯಮಾಡಿ ಕ್ಷಮೆ ಇರಲಿ. ಎಲ್ಲಾ ನನ್ನ ಪ್ರೀತಿಯ ಸೆಲೆಬ್ರಿಟಿಗಳಿಗೆ ತುಂಬಾ ಧನ್ಯವಾದಗಳು'' ಎಂದು ವಿಡಿಯೋ ಸಂದೇಶದಲ್ಲಿ ದರ್ಶನ್ ತಿಳಿಸಿದ್ದಾರೆ.

ಗ್ಲಾಮರಸ್ ಲುಕ್ ನಲ್ಲಿ ಮಹಾಕುಂಭದ ವೈರಲ್ ಹುಡುಗಿ ಮೊನಾಲಿಸಾ

ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ರುದ್ರಾಕ್ಷಿ ಮಾರುತ್ತಿದ್ದ ಯುವತಿಯೊಬ್ಬಾಕೆಯ ಚಿತ್ರವೊಂದು ಸಖತ್ ವೈರಲ್ ಆಗಿತ್ತು. ಆಕೆಯ ಸೌಂದರ್ಯಕ್ಕೆ ವಿಶೇಷವಾಗಿ ಆಕೆಯ ಸೆಳೆಯುವ ಕಣ್ಣುಗಳಿಗೆ ಜನ ಮಾರು ಹೋಗಿದ್ದರು. ಆ ಯುವತಿಯನ್ನು ಮೊನಾಲಿಸಾಗೆ ಹೋಲಿಸಲಾಗಿತ್ತು. ಭಾರತದ ಮೊನಾಲಿಸಾ ಎಂದೇ ಸಾಮಾಜಿಕ ಜಾಲತಾಣದಲ್ಲಿ ಆ ಚೆಲುವೆ ಫೇಮಸ್ ಆಗಿದ್ದರು. ಕಳೆದು ಕೆಲವು ದಿನಗಳಿಂದ ಈ ಹುಡುಗಿ ಮತ್ತೊಮ್ಮೆ ಸಾಕಷ್ಟು ಸುದ್ದಿಯಾಗುತ್ತಿದ್ದಾಳೆ. ಸದ್ಯ ಇವರ ಒಂದು ಸಣ್ಣ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಇದರಲ್ಲಿ ಅವರು ಮಾಡರ್ನ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಕಪ್ಪು ಬಣ್ಣದ ಉಡುಗೆ ಧರಿಸಿರುವ ಇವರು ಫೋಟೋಕ್ಕೆ ಪೋಸ್ ನೀಡಿ ಜನರತ್ತ ಕೈ ಬೀಸುತ್ತಿರುವುದನ್ನು ಕಾಣಬಹುದು. ಫ್ರೆಡ್ಸ್ ಬಳಕೆದಾರರೊಬ್ಬರು ಈ ವಿಡಿಯೋವನ್ನು ಹಂಚಿಕೊಂಡು, ''ಮಹಾ ಕುಂಭದ ಮೊನಾಲಿಸಾಳ ಹೊಸ ಲುಕ್ ವೈರಲ್ ಆಗಿದೆ'' ಎಂದು ಬರೆದುಕೊಂಡಿದ್ದಾರೆ. ಈ ಸುದ್ದಿಯ ಸತ್ಯಾಸತ್ಯತೆಯನ್ನ ಪರಿಶೋದಿಸಿದಾಗ ಸುಳ್ಳು ಹೇಳಿಕೆಯೊಂದಿಗೆ ಈ ವೀಡಿಯೊ ವೈರಲ್ ಆಗುತ್ತಿದೆ ಎಂಬುದು ಕಂಡುಬಂದಿದೆ. ಅಸಲಿಗೆ ಈ ವಿಡಿಯೋದಲ್ಲಿರು ಇರುವುದು ಮೊನಾಲಿಸವೇ ಅಲ್ಲ. ಬದಲಾಗಿ ಬಾಲಿವುಡ್ ನಟಿ ವಮಿಕಾ ಗಬ್ಬಿ ಆಗಿದ್ದಾರೆ. ನಿಜಾಂಶವನ್ನು ತಿಳಿಯಲು ನಾವು ವೈರಲ್ ವಿಡಿಯೋದ ಸ್ಕ್ರೀನ್ ಶಾಟ್ ತೆಗೆದುಕೊಂಡು ಗೂಗಲ್?ನಲ್ಲಿ ರಿವರ್ಸ್ ಇಮೇಜ್ ಸರ್ಚ್ ಮಾಡಿದ್ದೇವೆ. ಆಗ ನಾವು ಯೂಟ್ಯೂಬ್‌ನಲ್ಲಿ ಇದೇ ರೀತಿಯ ಶಾರ್ಟ್ ವಿಡಿಯೋವನ್ನು ಕಂಡುಕೊಂಡೆವು. ಆ ವಿಡಿಯೋಗೆ ವಾಮಿಕಾ ಗಬ್ಬಿ ಮತ್ತು ಅವರ ಕಣ್ಣುಗಳು ಎಂಬ ಶೀರ್ಷಿಕೆ ನೀಡಲಾಗಿತ್ತು.

ಹಠಾತ್ ಸಾವನ್ನಪ್ಪಿದ ನವಗ್ರಹ ನಟ

ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿನಯದ 'ನವಗ್ರಹ' ಸಿನಿಮಾ ಯಾರಿಗ್ತಾನೆ ಗೊತ್ತಿಲ್ಲ ಹೇಳಿ 2008 ರಲ್ಲಿ ಬಿಡುಗಡೆಯಾಗಿದ್ದ 'ನವಗ್ರಹ' ಸಿನಿಮಾ ಸೂಪರ್ ಹಿಟ್ ಆಗಿತ್ತು. ಕಳೆದ ವರ್ಷ ರೀ-ರಿಲೀಸ್ ಮಾಡಿದಾಗಿಲೂ 'ನವಗ್ರಹ' ಚಿತ್ರ ಥಿಯೇಟರ್‌ಗಳಲ್ಲಿ ಭರ್ಜರಿ ಸೌಂಡ್ ಮಾಡಿತ್ತು. ಇದೇ ಚಿತ್ರದಲ್ಲಿ 'ಶೆಟ್ಟಿ' ಪಾತ್ರದಲ್ಲಿ ನಟಿಸಿದ್ದ ಗಿರಿ ದಿನೇಶ್ ಹಠಾತ್ ಸಾವನ್ನಪ್ಪಿದ್ದಾರೆ.

ಬಾರದ ಲೋಕಕ್ಕೆ ಗಿರಿ ದಿನೇಶ್ ಪಯಣಿಸಿದ್ದಾರೆ. ಗಿರಿ ದಿನೇಶ್ ಆರೋಗ್ಯವಾಗಿಯೇ ಇದ್ದರು. ಸಂಜೆ ಮನೆಯಲ್ಲಿ ಪೂಜೆ ಮಾಡುವ ವೇಳೆ ಗಿರಿ ದಿನೇಶ್ ಅವರಿಗೆ ಹಠಾತ್ ಹೃದಯಾಘಾತ ಸಂಭವಿಸಿತು. ಏಕಾಏಕಿ ಕುಸಿದು ಬಿದ್ದ ಗಿರಿ ದಿನೇಶ್ ಅವರನ್ನ ಕೂಡಲೆ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಗುತ್ತಿತ್ತು. ಆದರೆ ಅಷ್ಟರಲ್ಲೇ, ಮಾರ್ಗ ಮಧ್ಯೆಯೇ ಗಿರಿ ದಿನೇಶ್ ಅವರ ಪ್ರಾಣ ಪಕ್ಷಿ ಹಾರಿ ಹೋಯಿತು. ಗಿರಿ ದಿನೇಶ್ ಅವರಿಗೆ 45 ವರ್ಷ ವಯಸ್ಸಾಗಿತ್ತು. ಗಿರಿ ದಿನೇಶ್‌ಗೆ ಇನ್ನೂ ಮದುವೆ ಆಗಿರಲಿಲ್ಲ. ಅಣ್ಣನ ಮನೆಯಲ್ಲಿ ಗಿರಿ ದಿನೇಶ್ ವಾಸವಿದ್ದರಂತೆ. 'ನವಗ್ರಹ' ರೀ ರಿಲೀಸ್ ಸಂದರ್ಭದಲ್ಲಿ ಪ್ರಚಾರ ಕಾರ್ಯಕ್ರಮಗಳಲ್ಲಿ ಗಿರಿ ದಿನೇಶ್ ಭಾಗವಹಿಸಿರಲಿಲ್ಲ. ಕ್ಯಾಮರಾದಿಂದ ದೂರ ಉಳಿಯುವ ನಿರ್ಧಾರ ಕೈಗೊಂಡಿದ್ದರಂತೆ ಗಿರಿ ದಿನೇಶ್.

ಕನ್ನಡ ಚಿತ್ರರಂಗದ ಖ್ಯಾತ ದಿವಂಗತ ನಟ ದಿನೇಶ್ ಅವರ ಪುತ್ರ ಗಿರಿ. ಹಾಸ್ಯ ನಟನಾಗಿಯೂ, ಖಳನಟನಾಗಿಯೂ ದಿನೇಶ್ ಜನಪ್ರಿಯತೆ ಪಡೆದಿದ್ದರು. ಚಂದನವನದ ಖಳನಟ ಪುತ್ರರೇ ಸೇರಿ ಮಾಡಿದ 'ನವಗ್ರಹ' ಸಿನಿಮಾದಲ್ಲಿ ಗಿರಿ ದಿನೇಶ್ 'ಶೆಟ್ಟಿ' ಪಾತ್ರಕ್ಕೆ ಜೀವ ತುಂಬಿದ್ದರು. 'ನವಗ್ರಹ' ಸಿನಿಮಾದಲ್ಲಿ ಗಿರಿ ದಿನೇಶ್ ಅವರ ಕಾಮಿಡಿ ಟೈಮಿಂಗ್ ಹೈಲೈಟ್ ಆಗಿತ್ತು. 'ನವಗ್ರಹ' ಸಿನಿಮಾದ ಬಳಿಕ 'ವಜ್ರ' ಹಾಗೂ 'ಚಮ್ಕಾಯ್ಸಿ ಚಿಂದಿ ಉಡಾಯ್ಸಿ' ಚಿತ್ರಗಳಲ್ಲಿ ಗಿರಿ ದಿನೇಶ್ ಮಿಂಚಿದ್ದರು.

ನನ್ನ ಪತಿ ನನ್ನಿಂದ ದೂರವೇ ಇದ್ದಾರೆ ನಟಿ ಸಾಕ್ಷಿ ಅಗರ್ವಾಲ್

ಇತ್ತೀಚೆಗೆ ಮದುವೆ ಆದರೂ.. ನನ್ನ ಪತಿ ನನ್ನಿಂದ ದೂರವೇ ಇದ್ದಾರೆ! ಸಂಸಾರದ ಗುಟ್ಟು ಬಿಚ್ಚಿಟ್ಟ ಖ್ಯಾತ ನಟಿ. ಇತ್ತೀಚೆಗೆ ತಮ್ಮ ಬಾಲ್ಯದ ಗೆಳೆಯ ನವನೀತ್ ಅವರನ್ನು ವಿವಾಹವಾದ ನಟಿ ಸಾಕ್ಷಿ ಅಗರ್ವಾಲ್, ತಮ್ಮ ವೈಯಕ್ತಿಕ ಜೀವನದ ಬಗ್ಗೆ ಅಚ್ಚರಿಯ ವಿವರಗಳನ್ನು ಬಹಿರಂಗಪಡಿಸಿದ್ದಾರೆ. ನಯನತಾರಾ, ಆರ್ಯ, ಜೈ ಮತ್ತು ನಜ್ರಿಯಾ ನಟಿಸಿದ 'ರಾಜಾ ರಾಣಿ' ಚಿತ್ರದಲ್ಲಿ ಸಾಕ್ಷಿ ಅಟ್ಲೀ ಪಾತ್ರದ ಮೂಲಕ ಪಾದಾರ್ಪಣೆ ಮಾಡಿದರು. ನಂತರ ನಟನೆಯನ್ನು ಮುಂದುವರೆಸಿದರು ಆದರೆ ಇನ್ನೂ ನಾಯಕಿ ಮಟ್ಟವನ್ನು ತಲುಪಿರಲಿಲ್ಲ. ಬಿಗ್ ಬಾಸ್ ಸೀಸನ್ 3 ರಲ್ಲಿ ಸಾಕ್ಷಿ ಭಾಗವಹಿಸಿದ್ದರು. ಈ ಕಾರ್ಯಕ್ರಮ ಅವರಿಗೆ ವ್ಯಾಪಕ ಮನ್ನಣೆ ತಂದುಕೊಟ್ಟಿತು. ಬಿಗ್ ಬಾಸ್ ನಂತರ, ಅವರು ಕಾಲಾ, ವಿಶ್ವಾಸ್ ಮತ್ತು ಸಿಂಡರೆಲ್ಲಾ ಚಿತ್ರಗಳಲ್ಲಿ ನಟಿಸಿದರು. ಅರಣ್ಮನೈ 3 ರಲ್ಲಿ ಸುಂದರ್ ಸಿ ಅವರ ಪತ್ನಿಯ ಪಾತ್ರವು ಅವರ ವೃತ್ತಿಜೀವನವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ದಿತು. ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿರುವ ಸಾಕ್ಷಿ, ಆಗಾಗ್ಗೆ ಗ್ಲಾಮರಸ್ ಫೋಟೋಗಳನ್ನು ಹಂಚಿಕೊಳ್ಳುತ್ತಾರೆ. ಅವರು ಟಿವಿ ಧಾರಾವಾಹಿಗಳಲ್ಲಿಯೂ ಕಾಣಿಸಿಕೊಂಡಿದ್ದಾರೆ. ಜನವರಿಯಲ್ಲಿ, ಅವರು ತಮ್ಮ ಬಾಲ್ಯದ ಸ್ನೇಹಿತ ಮತ್ತು ಕುಟುಂಬ ಪರಿಚಯಸ್ಥ ನವನೀತ್ ಅವರನ್ನು ವಿವಾಹವಾದರು. ಮದುವೆಯ ನಂತರವೂ ನಟನೆಯನ್ನು ಮುಂದುವರಿಸುವ ಆಶಯ ಸಾಕ್ಷಿಗಿದೆ. ಈಗ ಅವರು ತಮ್ಮ ಪತಿಯೊಂದಿಗೆ ಫೋಟೋ ಶೂಟ್ ಮಾಡಿಸಿಕೊಳ್ಳುತ್ತಿದ್ದಾರೆ. ಇತ್ತೀಚಿನ ಸಂದರ್ಶನವೊಂದರಲ್ಲಿ ಅವರ ಮಾಡಿದ ಕಾಮೆಂಟ್‌ಗಳು ಆಗುತ್ತಿವೆ.. ಕೆಲಸದಲ್ಲಿ ನಿರತರಾಗಿರುವುದರಿಂದ ಅವರು ಇನ್ನೂ ವೈವಾಹಿಕ ಜೀವನವನ್ನು ಪ್ರಾರಂಭಿಸಿಲ್ಲ ಎಂದು ಸಾಕ್ಷಿ ಬಹಿರಂಗಪಡಿಸಿದ್ದಾರೆ.

2ನೇ ಏಕದಿನ ಪಂದ್ಯಕ್ಕೆ ಕೊಹ್ಲಿ ವಾಪಾಸ್

ಇಂದಿನ ದಾಖಲೆಗಳ ಆಧಾರದ ಮೇಲೆ ಆಟಗಾರರ ಆಯ್ಕೆ ಮಾಡುವ ಕಾಲ ಮುಗಿದಿದೆ. ಈಗ ಚೆನ್ನಾಗಿ ಆಡುವವರಿಗೆ ಮಾತ್ರ ಭಾರತ ತಂಡದಲ್ಲಿ ಸ್ಥಾನ ಸಿಗುತ್ತದೆ. ಇಂಗ್ಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯ ಗೆದ್ದ ಉತ್ಸಾಹದಲ್ಲಿರುವ ಟೀಮ್ ಇಂಡಿಯಾ ಭಾನುವಾರ ಕಟಕ್‌ನ ಬಾರಾಬತಿ ಕ್ರೀಡಾಂಗಣದಲ್ಲಿ ಎರಡನೇ ಏಕದಿನ ಪಂದ್ಯಕ್ಕೆ ಸಜ್ಜಾಗಿದೆ. ಈ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಮತ್ತೆ ತಂಡಕ್ಕೆ ಮರಳುತ್ತಾರಾ ಎಂಬ ಕುತೂಹಲ ಎಲ್ಲರಲ್ಲೂ ಇದೆ. ಗಾಯದ ಕಾರಣ ನಾಗ್ಪುರದಲ್ಲಿ ನಡೆದ ಮೊದಲ ಏಕದಿನ ಪಂದ್ಯದಲ್ಲಿ ಕೊಹ್ಲಿ ಆಡಲಿಲ್ಲ. ಆದರೆ, ಭಾನುವಾರ ನಡೆಯಲಿರುವ ಎರಡನೇ ಏಕದಿನ ಪಂದ್ಯದಲ್ಲಿ ಆಡುವ ಸಾಧ್ಯತೆ ಇದೆ. ಒಂದು ವೇಳೆ ಮೊದಲ ಏಕದಿನ ಪಂದ್ಯದಲ್ಲಿ ಗೆದ್ದ ತಂಡವನ್ನೇ ಕಣಕ್ಕಿಳಿಸಲು ನಿರ್ಧರಿಸಿದರೆ ಕೊಹ್ಲಿ ಆಡುವುದು ಅನುಮಾನ. ಐಸಿಸಿ ಚ